A.—Sri K. PUTTASWAMY (Minister for Co-operation and Housing).—

Yes.

LEAVE OF ABSENCE TO SRI C. M. DEASI—GRANT OF

Mr. SPEAKER.—"I have received a letter from Sri C. M. Deasi requesting for leave of absence from 2nd March to 30th March 1966 as he is proceeding to England.

Is it the pleasure of the House that permission be granted to Sri C. M. Desai to absent from attending the sittings of the Assembly for the abovementioned period ?"

HON'BLE MEMBERS.—Yes.

Mr. SPEAKER.—Permission to remain absent is granted.

PAPERS LAID ON THE TABLE.

Sri K. MALLAPPA (Minister for Industries and Commerce).—"I beg to lay on the Table the Annual Report on the working and affairs of the Mysore Iron and Steel Limited, Bhadravati for the year 1964-65 as required under sub-section (2) of Section 639 of the Companies Act, 1956".

MEMBER'S REPRESENTATION.

ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಸ್ವಾಮಿ, ಕಾಕೋಡ್ಕರ್ ಕಾಣೆಯಾದ ಬಗ್ಗೆ ಶ್ರೀಮತಿ ಸರೋಜಿನಿ ಕೊಟ್ಟೂರು, ಶೆಟ್ಟರವರು ಹೊಸಪೇಟೆಯಲ್ಲಿ ಉಪವಾಸ ಕೈಗೊಂಡಿದ್ದಾರೆ. ಆ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಾನು ಪೇಪರಿನಲ್ಲಿ ಓದಿದ್ದೆ. ಉಪವಾಸ ಮಾಡಿದ್ದು ತಪ್ಪು ಎಂದು ಹೇಳಬೇಕಾಗುತ್ತದೆ. ಶ್ರೀ ಕಾಕೋಡ್ಕರನ್ನು ಪತ್ತೆ ಹಚ್ಚಲು ಕೇಂದ್ರ ಸರ್ಕಾರ, ಮಹಾರಾಷ್ಟ್ರ ಸರ್ಕಾರ ಹಾಗೂ ನಮ್ಮ ಸರ್ಕಾರ ಆದಷ್ಟು ಪ್ರಯತ್ನ ಮಾಡುತ್ತಾ ಇದೆ. ಇದಕ್ಕೆ ಅವರೂ ಸಹಾಯ ಮಾಡಬೇಕೇ ವಿನಾ ಉಪವಾಸ ಮಾಡುವುದು ಸರಿಯಲ್ಲ. ಮಾನ್ಯ ಸದಸ್ಯರು ಆ ಹೆಣ್ಣು ಮಗಳಿಗೆ ಹೇಳಿ ಉಪವಾಸ ನಿಲ್ಲಿಸುವಂತೆ ಮಾಡಿದರೆ ಒಳ್ಳೆಯದು ಎಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

BUDGET ESTIMATES FOR 1966-67—GENERAL DISCUSSION.

(*Debate contd.*)

Sri M. Y. GHORPADE (Sandur).—Mr. Speaker, Sir, it is my duty first of all to congratulate the Finance Minister for a free and frank

assessment of the budget he has made. He has made a bold statement. To that extent he deserves our congratulations. What are the implications of the budget speech, what are the lessons of the past experience during the third plan and what is the policy inferences or implications of it, to be considered. I would like to submit that this position was well known even at the beginning of the Third Plan. Some of our Hon'ble Members have given some constructive suggestions. The Budget is really deficit. The deficit should be calculated without including the proceeds of sale of securities, or depletion of reserves in the Capital and Revenue Receipts if we want to have a clear picture. What is a deficit, in the sense what is the capacity of the State economy to bear the expenditure burden by normal financing. We must calculate the deficit before the sale of securities and transfer of reserves in the capital and revenue receipts. According to the bulletin of the Reserve Bank, Mysore State's overall deficit for 1961-62 was 13 crores which was financed or covered by the sale of securities to the extent of Rs. 10 crores and negative cash balance of Rs. 3 crores. The overall deficit for all the States, in 1961-62, went up from Rs. 14 to 62 crores and 11 States had a negative cash balance. Now, for the current year 1965-66, the Finance Minister stated that the overall deficit will be Rs. 17.10 crores. But, Sir, he has also stated that this overall deficit of Rs. 17 crores for the year 1965-66 is arrived at after taking into account Rs. 25 crores under debt and deposit heads, "the large credit under which is accounted for by the proceeds of sale of securities held in the sinking fund and other reserves for repaying to the Reserve Bank." The current year's deficit would therefore be much more than 17 crores. He has stated that deficit of Rs. 17 crores is after taking into account Rs. 19·4 crores due to liquidation of securities, 19·45 crores overdraft and 17 crores additional Central assistance. I would like to submit that even that portion of the debt or loan which cannot be specifically related to repayable capacity and such loans are in the nature of an abnormal liability should also be added to the real deficit position of the economy. The liquidation of assets and the abnormal debts should be added to the deficit to know the real health of the economy. The Finance Minister said there is a small overall surplus of crore and half next year. This is after taking into account Rs. 11·62 crores as receipt under debt and deposit head, and borrowing from Centre of Rs. 35 crores. If you take into account these figures, the current deficit for next year will be considerable. There will still be a negative cash balance of Rs. 9 to 10 crores. The budget is also based on the outgo of Rs. 6 crores to Reserve Bank and Rs. 15 crores for other debt repayment. I would like to ask the Finance Minister whether this figure is likely to be exceeded in view of the fact that in the current year, the debt repayment was of the order of Rs. 37 crores. Even assuming that the debt repayment next year was only Rs. 21 crores, from where will this come ? Revenue surplus is Rs. 2·5 crores only. The rest has to come either by sale of securities, or taking loan to repay loans or by increasing the negative

(SRI M. Y. GHORPADE)

cash balance and ultimately by reduction in plan and non-plan expenditure. That reflects the potential real deficit for next year which we have to contend with and courageously face and find ways of overcoming this position. It has been stated by the Finance Minister that we began the Third Plan with a reserve of Rs. 25 crores. I believe that these reserves have been completely exhausted. I also believe that there is not much scope for further repayment by sale of cash securities and there is a negative cash balance of Rs. 9 to Rs. 10 crores. This, in a nutshell is the financial position of our State. I must say that the Finance Minister has not tried to hide this fact. Actually he has stated before this House on page 20 of his speech.

> "The ways and means advances is so large that it is unlikely to be cleared in the near future as after meeting its budgetary requirements and the needs of development the State will not have a surplus of this order."

He has also indicated that the total amount of loan liability is Rs. 192 crores on account of borrowings from Government of India and Rs. 72 crores on account of borrowings from others. He has also stated that the repayment to the Centre was of the order of Rs. 14 crores under the second plan, Rs. 52 crores under the Third Plan and will be Rs. 100 crores under the Fourth Plan.

There is another question I would like to put: how firm is our annual plan for 1966-67? Our annual plan for 1965-66 was Rs. 56 crores. But there was a resources gap of Rs. 8 crores. It also assumed additional resources of Rs. 4·5 crores from land revenue settlement and also Rs. 4·5 crores from collection of arrears which did not materialise. It has also been stated that the plan outlay for 1966-67 is Rs. 50·82 crores. Central assistance is Rs. 34 crores and the State will have to find Rs. 16·82 crores of which Rs. 6·1 crores would come from State Electricity Board and the State Road Transport. Anyway what is interesting is that the Minister has stated that during the Third Plan the State was supposed to raise Rs. 110 crores against a plan outlay of Rs. 250 crores. Out of this, he has admitted, that the contribution from current revenues was supposed to be Rs. 9·8 crores. In reality, this turned out to be a deficit of Rs. 18 crores. He has also stated that there was an unanticipated deficit of Rs. 45 crores under the head miscellaneous capital receipts due to higher non-plan outlay under loans and advances and capital expenditure on administrative buildings and police housing, etc. Thirdly, Sir, he has stated that the loan repayments were not estimated correctly. The original estimate of Rs. 25 crores in the five year forecast was revised to Rs. 43 crores in annual plan discussions and it is likely to be ultimately Rs. 52 crores. I am only indicating this to show that these strains which we have ndergone in the Third. Plan are likely to be in a far greater measure in the Fourth Plan. Therefore we must exercise every vigilance to see

that the annual plan outlay and the Fourth Plan outlays are realistic and capable of performance.

Apart from the plan we have a heavy burden of committed expenditure. It is interesting to note that the Fourth Finance Commission has made a fair allotment to the State in order to safeguard this committed expenditure. What is more interesting to note is that three-fourths of the Central grants in the Third Plan was devoted to committed expenditure in the first two plan periods. Therefore, it is reasonable to expect that a greater proportion of the Central grants for the Fourth Plan period will be towards committed expenditure of the previous three plans. Therefore, we are entitled to ask the question what is the scope and source for further social welfare activities like education and health, etc., in the Fourth Plan? Will not the State succumb to the temptation of reducing the committed expenditure and do sub-standard maintenance of existing assets not because they want to do it but because of financial exigency— or try to cut down extension service? What is going to happen to compulsory education? Can we fulfil the target? What is going to happen to even drinking water which we have promised but which we have not been able to complete?

Apart from this there is the big question of big irrigation projects. Here also the Finance Minister has been very frank. He has told us that the total amount required for irrigation projects is Rs. 370 crores whereas Rs. 96 crores have been spent by the end of the Third Plan and he hopes to make a minimum allotment of only Rs. 80 crores in the future, Therefore, I submit it is clear that there is no way of financing big irrigation projects through the normal budgetary channels unless these big irrigation projects are financed by the Centre. I go to the extent of saying it does not matter if the scope of these big projects are included in the concurrent list of the constitution where Centre also can have equal say not merely in financing them, but also in ensuring repayment of loans which those projects begin to yield returns. After all, Sir, we all belong to the same family and just like a company where when it takes a loan, a Director from the financing institution is expected to ensure its repayment when it begins to yield planned returns. If we take a step in advocating, such an approach, I am sure it will be welcomed by the Centre and it will facilitate large-scale financing of such projects. Sir, I also like to quote the Finance Minister's words when he says: 'Although our financial position has been causing us some anxiety, there is no reason to take a pessimistic view. Our Revenue position is quite sound and the steps which we have taken and propose to take will further strengthen it......We have therefore no option but to raise more revenue and use the surplus for meeting a part of our Capital defecit. It is clear from facts and figures that even if we raise our revenues, we cannot clear our debts. The Chief Minister some two or three years ago said that even repayment of interest may break down. To say that the projects will start yielding high returns is a good

(SRI M. Y. GHORPADE)

looking argument, but it is certainly not satisfactory answer as seen from the facts and figures that have been presented by the Finance Minister. In the five minutes that are left to me, I propose to place before the House the following constructive suggestions for the consideration of the Government and the House. (1) That part of the debt from Government of India which cannot be specifically related, in commercial terms to returns from specific projects should be separately dealt with by amortisation and other long term arrangements for their absorption; we must be very clear as to how much of Rs. 190 crores is related to repayable capacity and how much is not; (2) loans which can be related to return from specific projects should be closely watched and made to yield the anticipated results. A High power machinery in which both the Central and State Government are represented should be responsible for this. (3) Overdraft from Reserve Bank should be cleared as early as possible. The Finance Minister has indicated a period of 2 years for this. (4) Borrowings from parties other than Government of India will also have to be similarly analysed and dealt with to ensure that it does not became a dead weight or an unyielding burden. (5) Future loans should not be vague and general but specifically tied to quick yielding projects closely supervised to achieve planned results. (6) Assistance for other purposes should be in the form of grants as far as possible. There is no point in mounting up financially unproductive loan burden. (7) Level of grants from the Government of India to any State should be on a scientific basis and take into account the State's (a) taxable capacity based on some uiform norms of taxation to be evolved (b) the need to maintain and develop certain minimum levels of social services and development to avoid regional imbalance or glaring disparities.

9-30 A.M.

It is therefore, very important that if a body like the Finance Commission is made a permanent Commission, working out these norms and levels of assistance in close collaboration with Planning Commission which is concerned mainly with priorities and nature of schemes, and what the State and the Centre can afford in a given situation or year. Therefore, the Finance Commission should be a permanent Commission continuously reviewing the financial relationship between the Centre and the State. At present, the Finance Commission does not deal with loans and grants under Article 182 of the constitution. It is suggested that apart from its statutory, constitutional functions of making certain allotments to the State Government every five years, the Finance Commission should work continuously on a permanent basis and should also be asked to review all aspects of financial relationship between the Centre and the States, to provide expert guidance towards the healthy development of federal finance in the context of planned economic growth. It is vital to ensure

that the strains of development are not allowed to damage the structure of federal finance and wrong tendencies are corrected in time.

I also wish to suggest that at the State level, there should be a State Finance Commission, constantly reviewing the financial relation between the State and the Local Bodies and Corporations including the whole gambit of State loans and grants to these bodies. After all, the principles and the strategy of grants and loans and their repayment are be the same. There is need for a High Power Commission at both levels to constantly review these things and bring them to the notice of the Legislature and the Government. What is needed is a constant high power review of these fast developing, and if I may say so sometimes a fast deteriorating relationship.

Obviously, big projects like the Upper Krishna should be financed by the Centre. We should even agree to these big projects being brought under the Concurrent List in the Constitution to enable equitable financing and development to ensure proper returns without being subject to undue local politics. The late Vice-Chairman of the Planning Commission, V. T. Krishnamachari, in all seriousness suggested this his intention was that this would help the States to raise better revenue.

We should place the relationship between the State and the Centre on a scientific basis. This great dependence of the States on the Centre has increased considerably, from 30 to 60 per cent, in the last 15 years. Increased dependence on the Centre should result in greater scienitfic control and co-ordination and not in greater arbitrariness.

I would also suggest that there should be a Planning and Financial Cell and at the State level where the Planning Commission and the Central Government should also be represented so that there is a continuous dialogue between the State Government, Planning Commission and the Central Government on vital matters.

I now come to the problem of food. For the reasons I have stated, the Fourth Plan of the State or the Centre, must be an agricultural plan. The emphasis henceforth should be not so much on plan outlays but on physical targets and their strict performance in the matter of food. We can easily see that the cost of living is rising. The only way to save the situation is to get enough grain from the farmer at reasonable rate and suppiy it to the poor people. This can be done. Apart from the present compulsory levy per acre that the Government has introduced, the Food Corporation or some such institution should also procure grain from the farmers, in return for inputs. In other words, they should supply to the farmers the agricultural inputs and requisites like fertilizers, seeds, insecticides, etc. after entering into contracts that the cost of these inputs will be returned by the farmer in grain at fixed reasonable rate, so that this grain can be stored and used for equitable distribution during the lean periods to the vulnerable sections of the opulation. This has the double advantage of ensuring timely suppl

(SRI M. Y. GHORPADE)

of crucial inputs to the farmer who will then be quite willing to return the cost of such inputs in grain at a reasonable fixed price, fair to both the producer and the consumer.

As the Hon'ble Food Minister knows, we have launched in sandur a pilot project on 500 acres. The inputs such as seed, fertilisers and pesticides have been supplied to the farmers. It amounts to about Rs. 200 per acre. These inputs have been supplied to selected farmers having irrigation facilities, through the Taluk Development Board, who are administratively supervising this programme. But the farmer has entered into contract with the Marketing Society that he will return 5 quintals of *jowar* per acre at the Government rate of Rs. 50 per quintal. It works out to about Rs. 250. We have given him loan up to Rs. 200-210. When he sells 5 quintals per acre to the Taluka Marketing Society we will deduct the loan amount and given him the balance. I feel that this way we can procure more foodgrains because it is done on a commercial basis ; there is no compulsion. In fact, the farmer will co-operate with the Government. It is interesting to note that in Sandur, 5 quintals per acre on our 500 acre programme will give 2,500 quintals of grain; In Sandur Taluk, by the compulsory levy on about 28,000 acres I don't think it will be possible for the Government to procure more than 2,500 quintals. In other words, from 500 acres we can procure without compulsion as much as the Government hope to compulsory procure on 28,000 acres steps up.

In the Budget Speech, it is stated that Government intends to provide short-term credit facilities for pucrchase of fertilisers to the extent of Rs. 25 crores over a period of two years. On the basis of our pilot project at Sandur, Rs. 25 crores should enable us to do intensive cultivation on 12. 5 lakh acres. Rs. 200 loan will be given in the form of inputs per acre. This means there will be additional production of atleast 6 lakhs tons. Even if you procure 5 quintals per acre, there will be additional production of 6 lakh tons. Government can procure 6 lakh tons from 12 lakh acres. Therefore, if this method of supplying inputs, as loan and procurement by way of repayment is adopted, I am confident that within a very short time we would achieve self-sufficiency in Mysore State and also tremendous public enthusiasm whatever may be the difficulties on the financial front.

ಶ್ರೀಮತಿ ಜಿ. ಸಿ. ಭಾಗಿರಥಮ್ಮ (ತುಮಕೂರು).—ಮಾನ್ಯ ಸಭಾಪತಿಗಳವರೇ, ನಮ್ಮ ಹಣಕಾಸಿನ ಸಚಿವರು 1966-67ನೇ ವರ್ಷದ ಸಲುವಾಗಿ ಮಂಡಿಸಿರುವ ಅಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ. 1966-67ನೇ ಸಾಲಿನಲ್ಲಿ ಒಟ್ಟು ರಾಜ್ಯದ ಆದಾಯ 156.53 ಕೋಟಿ ರೂಪಾಯಿ ಎಂದು ಅಂದಾಜು ಮಾಡಿ ಖರ್ಚು 154 ಕೋಟಿ ರೂಪಾಯಿ ಎಂದು ಲೆಕ್ಕಮಾಡಿ 2.53 ಕೋಟಿ ರೂಪಾಯಿ ಉಳಿತಾಯ ವಾಗುತ್ತದೆಂದು ತಿಳಿಸಿದ್ದಾರೆ. ಮುಂದಿನವರ್ಷ ಸರಿಯಾಗಿ ಮಳೆಯಾಗುತ್ತದೆ ಎಂದು ಭಾವಿಸಿ, ಕಂದಾಯ ಮೋಟಾರು ಸ್ಪಿರಿಟ್ ತೆರಿಗೆ, ಮಾರಾಟ ತೆರಿಗೆ. ಮೋಟಾರ್ ವಾಹನ ತೆರಿಗೆ, ನೀರಾವರಿಗೆ ಸಂಬಂಧಪಟ್ಟ ತೆರಿಗೆ ಈ ಎಲ್ಲ ತೆರಿಗೆಗಳ ಮೂಲಕ 33. 95 ಕೋಟಿ ರೂಪಾಯಿನ ವರಮಾನ ಬರುವುದು ಎಂದು ಭಾವಿಸಿ ಅವರು ಭಾವನಾ ಪ್ರಪಂಚದಲ್ಲಿಯೇ ಇದ್ದಾರೆ. ವರ್ಷದ ಕೊನೆಗೆ ಹಣ

ಕಾಸಿನ ಪರಿಸ್ಥಿತಿ ಏರುಪೇರು ಆಗದಂತೆ ಶ್ರದ್ಧೆವಹಿಸಿ ಹಿಂದಿನಬಾಕಿ ವಸೂಲಿ ನಿಂತಿರುವುದನ್ನು ವಸೂಲ್ಮಾಡಿಕೊಂಡು ಹೊಸ ತೆರಿಗೆ ಸರಿಯಾಗಿ ವಸೂಲ್ಮಾಡಿದರೆ ಮಾತ್ರ ಈ ವರ್ಷದ ಆಯವ್ಯಯವನ್ನು ಸರಿದೂಗಿಸಲು ಸಾಧ್ಯ ಎಂದು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಕಳೆದ ಎರಡು ವರ್ಷಗಳಿಂದಲೂ ವ್ಯವಸಾಯದ ಉತ್ಪಾದನೆ ಮತ್ತು ಉದ್ಯಮ ಸಂಸ್ಥೆಗಳ ಉತ್ಪಾದನೆ ಹೆಚ್ಚಿದೆ ಎಂದು ತಿಳಿಸಿದ್ದಾರೆ. ವ್ಯವಸಾಯದ ಉತ್ಪಾದನೆ ಆದಂತೆ ಆಹಾರ ಧಾನ್ಯಗಳ ಬಗ್ಗೆ ಸರ್ಕಾರ ಸರಿಯಾದ ರೀತಿಯಲ್ಲಿ ಸಂಗ್ರಹಣದಲ್ಲಿ ಎಚ್ಚರಿಕೆಯನ್ನು ಕೈಗೊಂಡಿದ್ದು, ಸಂಗ್ರಹ ಮಾಡಿದ್ದರೆ ಈಗಿನ ಭೀಕರ ಪರಿಸ್ಥಿತಿಯನ್ನು ಎದುರಿಸಬಹುದಾಗಿತ್ತು. ರಾಜ್ಯದ ನಾನಾ ಭಾಗಗಳಲ್ಲಿ ಮಳೆಯಾಗದೆ ಮಹತ್ತರವಾದ ತೊಂದರೆಗೆ ಒಳಗಾಯಿತು. ಸರ್ಕಾರದವರು ಕೆಲವು ಕಡೆ ಸ್ಟಾಂಡಿಂಗ್ ಕ್ರಾಪ್ಸ್ ಉಳಿಸುವುದಕ್ಕೆ ಸಾಧ್ಯವಿದ್ದ ಕಡೆ ಪಂಪ್ ಸೆಟ್‌ಗಳನ್ನು ಒದಗಿಸಿಕೊಟ್ಟರು. ಆದರೆ ಇನ್ನೂ ಕೆಲವು ಕಡೆ ಉಳಿಸಬೇಕಾದ ಬೆಳೆಗಳನ್ನು ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ. ಕಾರಣ ವಿಷ್ಟೆ. ಸರ್ಕಾರದವರು ಡೆಪ್ಯುಟಿ ಕಮಿಷನರಿಗೆ ಒದಗಿಸಬೇಕಾದ ಹಣವನ್ನು ತಡವಾಗಿ ಒದಗಿಸಿದ್ದು ಒಂದು, ಎರಡನೆಯದಾಗಿ ಪಂಪಸೆಟ್‌ಗಳಿಗೆ ಎಲ್ಲ ಕಡೆಗಳಿಂದಲೂ ಹೆಚ್ಚಿನ ಬೇಡಿಕೆ ಬಂದು ಫ್ಯಾಕ್ಟರಿಗಳು ಅವುಗಳನ್ನು ಒದಗಿಸುವುದರಲ್ಲಿ ತಡವಾದ್ದು. ಇದರಿಂದಾಗಿ ಕೆಲವು ಕಡೆ ಉಳಿಸಬಹುದಾಗಿದ್ದ ಬೆಳೆಗಳನ್ನು ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ. ಸ್ವಂತ ಬಾವಿಗಳಿರುವವರು ಅದರ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಎರಡು ಮೂರು ವರ್ಷಗಳಿಂದಲೂ ಅರ್ಜಿಗಳನ್ನು ಹಾಕಿಕೊಂಡಿದ್ದರೂ ಕೂಡ ಅವರಿಗೆ ಪಂಪ್‌ಸೆಟ್‌ಗಳನ್ನು ಒದಗಿಸಿರುವುದಿಲ್ಲ, ಪಂಪ್‌ಸೆಟ್ ಒದಗಿಸಿರುವ ಕಡೆ ಕಂಬಗಳನ್ನು ಹಾಕಿಲ್ಲ. ಪಂಪ್‌ಸೆಟ್‌ಗಳನ್ನು ತೆಗೆದುಕೊಂಡಿರುವವರು ಕೇಳಿದರೆ ಕಂಬಗಳಿಲ್ಲ, ತಂತಿ ಇಲ್ಲ, ಟ್ರಾನ್ಸ್‌ಫಾರ್ಮರುಗಳಿಲ್ಲ ಎಂದು ಹೇಳುತ್ತಾರೆ. ಅವರಿಗೆ ಕರೆಂಟನ್ನು ಕೊಟ್ಟಿರುವುದಿಲ್ಲ. ಈ ಅನೇಕ ತೊಂದರೆಗಳಿಂದ ಈ ಸಾರಿ ಬೆಳೆ ಅಷ್ಟು ತೃಪ್ತಿಕರವಾಗಿ ಆಗಿಲ್ಲವೆಂದು ಹೇಳಬೇಕಾಗಿದೆ. ತುಮಕೂರು ಜಿಲ್ಲೆಯ ವಿಷಯ ಹೇಳುವುದಾದರೆ ಅಲ್ಲಿ ಎರಡು ಇಂಚು ಕೂಡ ಮಳೆಯಾಗಿಲ್ಲ. ಜನ ಜೀವನೋಪಾಯಕ್ಕಾಗಿ ಮಾರ್ಗ ಕಾಣದೆ ತಮ್ಮ ಗ್ರಾಮಗಳನ್ನು ಬಿಟ್ಟು ಬೇರೆ ಹಳ್ಳಿಗಳಿಗೆ ವಲಸೆ ಹೋಗುತ್ತಿದ್ದಾರೆ. ಜನರಿಗೆ ಕೂಲಿ ಒದಗಿಸುವುದಕ್ಕೆ ಸರ್ಕಾರ ಸಾಕಷ್ಟು ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಕೈಕೊಂಡಿರುವುದಿಲ್ಲ. ಇತ್ತೀಚೆಗೆ ತೆಗೆದುಕೊಂಡಿರುವ ಕಾಮಗಾರಿಗಳಾದರೂ ಕೂಡ ಕಾಲ ಮಿಂಚಿದ ಮೇಲೆ ಕೈಕೊಂಡದ್ದಾಗಿದೆ. ಜನ ಆಹಾರವಿಲ್ಲದೆ ನಿಶ್ಶಕ್ತರಾಗಿದ್ದಾರೆ. ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಸರ್ವೆ, ಎಸ್ಟಿಮೇಟ್, ಸ್ಯಾಂಕ್ಷನ್, ಚೆಕ್ ಮೆಷರ್‌ಮೆಂಟ್ ಬಿಲ್, ಇವುಗಳನ್ನೆಲ್ಲ ಮಾಡಿ ಮುಗಿಸುವ ಹೊತ್ತಿಗೆ ಜನಗಳು ಹೊಟ್ಟೆಗೆ ಇಲ್ಲದೆ ಸೋತು ಹೋಗಿದ್ದಾರೆ. ಕ್ಷಾಮ ಪರಿಹಾರ ಕೆಲಸವೆಂದರೆ ಗೋ ಕಟ್ಟೆಗಳನ್ನು ಅನೇಕ ಕಡೆ ತೆಗೆದುಕೊಂಡಿದ್ದಾರೆ. ಗೋ ಕಟ್ಟೆಯ ಕೆಲಸವನ್ನು ಮುಗಿಸಿದ್ದರೂ ಕೂಡ ಜನರಿಗೆ ಕೂಲಿ ಸಿಕ್ಕಿಲ್ಲ. ರಿಲೀಫ್ ವರ್ಕ್ ಬಿಟ್ಟು ತಕಲೀಫ್ ವರ್ಕ್ ಆಗಿದೆ. ತಾಲ್ಲೂಕು ಬೋರ್ಡಿನವರು ಗೋ ಕಟ್ಟೆಯನ್ನು ಸರ್ವೆ ಮಾಡಬೇಕು, ಎಸ್ಟಿಮೇಟ್ ಮಾಡಬೇಕು, ಡೆಪ್ಯುಟಿ ಕಮಿಷನರು ಅದನ್ನು ಮಂಜೂರು ಮಾಡಬೇಕು, ಅಸಿಸ್ಟೆಂಟ್ ಇಂಜಿನಿಯರು ಮೆಷರ್‌ಮೆಂಟ್ ಚೆಕ್ ಮಾಡಬೇಕು, ತಹಸೀಲ್ದಾರರು ಹಣ ಕೊಡಬೇಕು. ಇಷ್ಟೆಲ್ಲ ಮುಗಿಯುವ ಹೊತ್ತಿಗೆ ಜನರಿಗೆ ಕೂಲಿ ದೊರೆಯದೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಮೇಲಾದರೂ ಕ್ಷಾಮ ಪರಿಹಾರ ಕಾಮಗಾರಿಗಳನ್ನು ಕೈಕೊಂಡಿರುವ ಕಡೆ ಜನರಿಗೆ ಕೂಲಿ ಬೇಗ ಬರುವಂತೆ ಮಾಡುವುದಲ್ಲದೆ ಕೂಲಿಯ ಅರ್ಧ ಭಾಗದಷ್ಟಾದರೂ ಆಹಾರ ಧಾನ್ಯದ ರೂಪದಲ್ಲಿ ಒದಗಿಸಿಕೊಡಬೇಕೆಂದು ನಾನು ಸೂಚಿಸುತ್ತೇನೆ.

ಕಳೆದ ವರ್ಷ ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಆಹಾರ ಧಾನ್ಯ ಬೆಳೆದುದನ್ನು ನೋಡಿದ್ದೇವೆ. ರೈತ ತಿಳಿದೋ ತಿಳಿಯದೆಯೋ ತನ್ನಲ್ಲಿದ್ದ ಧಾನ್ಯವನ್ನೆಲ್ಲ ಮಾರಾಟ ಮಾಡಿದ್ದಾನೆ. ಈ ವರ್ಷ ಮಳೆ ಬರುತ್ತದೆ ಎನ್ನುವ ಭರವಸೆಯ ಮೇಲೆ ತನ್ನಲ್ಲಿದ್ದ ಧಾನ್ಯವನ್ನು ಮಾರಾಟ ಮಾಡಿ ಕೆಲವು ಕಡೆ ಬಿತ್ತನೆ ಮಾಡಿ ಬಿಟ್ಟು ಮಳೆ ಬಾರದೆ ಹೋಗಿ ಕಂಗಲಾಗಿದ್ದಾನೆ. ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಈಗ ಹಂಚುತ್ತಿರುವ ಆಹಾರ ಧಾನ್ಯ ಬಹಳ ಕಡಮೆ. ಒಂದು ಪಂಚಾಯಿತಿಗೆ ಒಂದೆರಡು ಮೂಟೆ ಆಹಾರ ಧಾನ್ಯವನ್ನು ಹಂಚುತ್ತಿದ್ದಾರೆ. ಇದು ಸಾಕಾಗುತ್ತಿಲ್ಲ. ಇಷ್ಟು ಕಡಮೆ ಕೊಡುತ್ತಿರುವುದು ಸಾಕೇ ಎಂದು ಸರ್ಕಾರ ಯೋಚನೆ ಮಾಡಬೇಕು. ಬೆಳೆದು ಕೊಡುವ ರೈತ ಕಷ್ಟಕ್ಕೆ ಸಿಕ್ಕಿರುವಾಗ, ದುಡಿಯುವ ರೈತನನ್ನು ಉಳಿಸಬೇಕಾದದ್ದು ಸರ್ಕಾರದ ಕರ್ತವ್ಯವಲ್ಲವೇ ? ದೇಶದ ಬೆನ್ನು ಮೂಳೆಯಂತಿರುವ ರೈತ ಉಳಿದರೆ ಮಾತ್ರ ದೇಶ ಉಳಿಯುತ್ತದೆ ಎನ್ನುವುದನ್ನು ಸರ್ಕಾರ ಮರೆಯಬಾರದು.

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಕೆಲವು ಕಡೆ ದನಕರುಗಳಿಗೆ ಮೇವು ಇಲ್ಲದೆ ಅವುಗಳನ್ನು ಸಾಕುವ ಶಕ್ತಿ ಇಲ್ಲದೆ ಕಟುಕರಿಗೆ ಮಾರಿರುವ ಸಂದರ್ಭಗಳುಂಟು. ಬೇರೆ ಕಡೆಯಿಂದ ಹುಲ್ಲನ್ನು ತರಿಸಿ ಸರ್ಕಾರದವರು ಕೆಲವು ಭಾಗಗಳಿಗೆ ಒದಗಿಸಿದರು. ಅದನ್ನು ಸಾಕಷ್ಟು ಒದಗಿಸಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ತುಮಕೂರು, ಕೋಲಾರ, ಚಿತ್ರದುರ್ಗ ಇವು ಕ್ಷಾಮ ಪೀಡಿತ ಪ್ರದೇಶಗಳು ಎಂದು ತಿಳಿದುಕೊಂಡಿದ್ದಾರೆಯೇ ಹೊರತು ಸರ್ಕಾರ ಇದರ ಬಗ್ಗೆ ಡಿಕ್ಲೇರ್ ಮಾಡಿಲ್ಲ, ಆ ಪ್ರಕಾರ ಘೋಷಿಸಲಿಲ್ಲ.

ಶ್ರೀ ಬಿ. ಡಿ. ಜತ್ತಿ (ಆಹಾರ ಶಾಖೆಯ ಮಂತ್ರಿಗಳು).—ಘೋಷಣೆ ಮಾಡಿದ್ದೇವೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಇಲ್ಲ ಸ್ವಾಮಿ, ಇದುವರೆಗೂ ಮಾಡಿಲ್ಲ.

ಈ ಪ್ರದೇಶಗಳಿಗೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ಇಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಜನರಿಗೆ ಕೂಲಿ ಸಿಕ್ಕುವಂತೆ ಮಾಡಬೇಕು. ಸ್ವಲ್ಪ ಮಟ್ಟಿಗಾದರೂ ಆಹಾರವನ್ನು ಹೆಚ್ಚಾಗಿ ಒದಗಿಸಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳ ಜೊತೆಗೆ ಸಣ್ಣ ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯವನ್ನು ಕೊಡುವುದು ಅವಶ್ಯಕ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಹತ್ತಾರು ವರ್ಷದ ನಂತರ ಪ್ರತಿಫಲವನ್ನು ಕೊಡುವಂಥ ಯೋಜನೆಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಅಲ್ಪ ಹಣದಲ್ಲಿ ಅತಿ ಶೀಘ್ರವಾಗಿ ಪ್ರತಿಫಲವನ್ನು ಕೊಡುವಂಥ ಸಣ್ಣ ನೀರಾವರಿ ಯೋಜನೆಗಳ ಕಡೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

ಕೆಲವು ಕಡೆ ಕೆರೆ, ಕಟ್ಟೆ ಕೆಲಸ ಮುಗಿದಿದ್ದರೂ ಕೂಡ ನಾಲೆಗಳು, ತೂಬುಗಳು ಇಲ್ಲದೆ ನೀರನ್ನು ರೈತರಿಗೆ ಒದಗಿಸುವುದಕ್ಕೆ ತೊಂದರೆಯಾಗಿದೆ. ಇಂಥ ಸಣ್ಣ ಪುಟ್ಟ ಕೆಲಸಗಳ ಕಡೆ ಸರ್ಕಾರದವರು ಗಮನ ಕೊಡಬೇಕೆಂದು ತಿಳಿಸುತ್ತಿದ್ದೇನೆ.

ರೈತರಿಗೆ ಕೊಡತಕ್ಕ ಅಲ್ಪಾವಧಿ ಸಾಲದಲ್ಲಿ ಅರ್ಧದಷ್ಟನ್ನಾದರೂ ಗೊಬ್ಬರ ಬಿತ್ತನೆ ಬೀಜ ಮತ್ತು ಸಸ್ಯ ಸಂರಕ್ಷಣೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದರಲ್ಲಿ ಕೊಟ್ಟು ಉಳಿದ ಅರ್ಧ ಭಾಗವನ್ನು ಹಣದ ರೂಪದಲ್ಲಿ ಕೊಡಬೇಕು ಮತ್ತು ರೈತರಿಂದ ಹಣವನ್ನು ವಾಪಸು ಪಡೆಯುವಾಗ ಧಾನ್ಯದ ರೂಪದಲ್ಲಿ ಪಡೆಯಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಸರ್ಕಾರದವರು ವಸೂಲ್ಮಾಡುವ ಎಕ್ಸೈಸ್, ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆ ಇವುಗಳನ್ನು ಕಡ್ಡಾಯವಾಗಿ ವಸೂಲ್ಮಾಡಿ ನೂರಕ್ಕೆ ನೂರರಷ್ಟು ತೆರಿಗೆಯನ್ನು ಕೊಡುತ್ತಿರುವ ರೈತನ ಅಭಿವೃದ್ಧಿಗೆ ಅದನ್ನು ವಿನಿಯೋಗ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಮೂರು ಮತ್ತು ನಾಲ್ಕನೆಯ ದರ್ಜೆ ನೌಕರರಿಗೆ ತಿಂಗಳೊಂದಕ್ಕೆ ಐದು ರೂಪಾಯಿ ತುಟ್ಟಿ ಭತ್ಯವನ್ನು ಹೆಚ್ಚಿಸಿರುವುದಾಗಿ ತಿಳಿಸಿದ್ದಾರೆ. ಬಹಳ ಸಂತೋಷ. ಈ ಕಡೆ ತುಟ್ಟಿಭತ್ಯ ಹೆಚ್ಚಾದಂತೆ ಆ ಕಡೆ ಧಾನ್ಯಗಳ ಬೆಲೆ ಏರದಂತೆ ಗಮನ ಕೊಡಬೇಕೆಂದು ನಾನು ತಿಳಿಸುತ್ತೇನೆ.

ಶೇಕಡ 10ರಷ್ಟು ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳುವುದನ್ನು ಕಡಮೆ ಮಾಡಬೇಕೆಂದು ಇಲಾಖೆಗಳನ್ನು ಕೋರಲಾಗಿದೆ ಎಂದು ತಿಳಿಸಿದ್ದಾರೆ. ಕೇವಲ ಮೂರು ಮತ್ತು ನಾಲ್ಕನೆಯ ದರ್ಜೆಯವರು ಮತ್ತು ಪ್ರೈಮರಿ ಶಾಲಾ ಉಪಾಧ್ಯಾಯರುಗಳನ್ನು ನೇಮಿಸಿಕೊಳ್ಳುವುದರಿಂದ ಸರ್ಕಾರಕ್ಕೆ ಏನೂ ನಷ್ಟವಾಗಲಾರದು. ಸಾವಿರಾರು ರೂಪಾಯಿ ಸಂಬಳ ಪಡೆಯುವ ಗೆಜೆಟೆಡ್ ಆಫೀಸರುಗಳು, ಐ. ಎ. ಎಸ್. ಆಫೀಸರುಗಳು ಇವರನ್ನು ನೇಮಕ ಮಾಡಿಕೊಳ್ಳುವುದರಲ್ಲಿ ಅದಷ್ಟು ಕಡಮೆ ಮಾಡಬೇಕು. ಹತ್ತು ಜನ ಬಡವರಿಗೆ ಇಡುವ ಅನ್ನವನ್ನು ಒಬ್ಬರಿಗೆ ಇಡುವುದು ಸರ್ಕಾರಕ್ಕೆ ಧರ್ಮವಲ್ಲ. ಅವಶ್ಯಕ ಇದ್ದ ಕಡೆ ಮಾತ್ರ ಅಂಥವರನ್ನು ನೇಮಕ ಮಾಡಿಕೊಳ್ಳಬೇಕು. ಮೂರು ಮತ್ತು ನಾಲ್ಕನೆಯ ದರ್ಜೆ ಸ್ಥಾನಗಳನ್ನು ತಗ್ಗಿಸದೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕೆಂದು ನಾನು ಸೂಚಿಸುತ್ತೇನೆ ಸ್ವಾಮಿ.

ಇಷ್ಟು ಹೇಳಿ, ಆಯವ್ಯಯ ಅಂದಾಜುಗಳನ್ನು ಅನುಮೋದಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ದಯಾನಂದ ಆರ್. ಕಳ್ಳಿ (ಕಾರ್ಕಳ).—ಅಧ್ಯಕ್ಷರೇ, ನಮ್ಮ ರಾಜ್ಯದ ಹಣಕಾಸಿನ ಸಚಿವರು ಮಂಡಿಸಿರತಕ್ಕ 1966-67ನೇ ಸಾಲಿನ ಮುಂಗಡ ಪತ್ರವನ್ನು ನೋಡಿದರೆ, ಒಂದೇ ಮಾತಿನಲ್ಲಿ ಹೇಳುವುದಾದರೆ, ಇದು ರಾಜ್ಯದ ಹಣಕಾಸಿನ ದಿವಾಳಿ ಪತ್ರವೆಂದು ಹೇಳಬೇಕಾಗಿದೆ. ಆದರೆ ನಾನು ಕೇವಲ ಒಬ್ಬ ಪ್ರತಿಪಕ್ಷದ ಸದಸ್ಯನಾಗಿ ಈ ರೀತಿ ಟೀಕೆ ಮಾಡುತ್ತಾ ಇಲ್ಲ. ಆಡಳಿತ ಪಕ್ಷದವರಲ್ಲಿ ಯಾರೇ ಆಗಲೀ ಸಾವಧಾನವಾದ ಈ ಮುಂಗಡ ಪತ್ರವನ್ನು ಸರಿಯಾಗಿ ಪರಿಶೀಲಿಸಿದರೆ ಇದನ್ನು ಈ ರಾಜ್ಯದ ದಿವಾಳಿ ಪತ್ರವೆಂದು ಹೇಳುವುದನ್ನು ಖಂಡಿತವಾಗಿ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ರಾಜ್ಯದ ಕಾಪಿಟ್ಟ ನಿಧಿಯೆಲ್ಲಾ ಕರಗಿ ಸಾಲಪತ್ರಗಳನ್ನು ಒತ್ತೆ ಇಟ್ಟು, ಇದ್ದಂಥ ಸಾಲವನ್ನು ತೀರಿಸದೆ ಈಗ ಆ ಸಾಲಪತ್ರಗಳನ್ನು ಮಾರುವುದಕ್ಕೆ ಹೊರಟಿರುವುದು ನಮ್ಮ ಅರ್ಥ ಸಚಿವರ ಭಾಷಣದಿಂದ ಚೆನ್ನಾಗಿ ಗೊತ್ತಾಗುತ್ತದೆ. ಅದನ್ನು ಚೆನ್ನಾಗಿ ಮನಗಾಣಬಹುದು. ಆ ಮುಂಗಡ ಪತ್ರ ರಾಜ್ಯವನ್ನು ದಿವಾಳಿತನಕ್ಕೆ ಒಯ್ಯುದೆ ಮತ್ತೆ ಇನ್ನು ಎಲ್ಲಿಗೆ ಕೊಂಡೊಯ್ಯುತ್ತದೋ ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕು. ಆದರೆ ರಾಜ್ಯದ ಸಾಲ ಇದರಿಂದಲೂ ಕೂಡ ಮುಗಿಯುವುದಿಲ್ಲವೆಂಬುದು ನಮ್ಮ ಅರ್ಥ ಸಚಿವರ ಭಾಷಣದಿಂದ ಅರ್ಥವಾಗುತ್ತದೆ. ಮುಂದೆ ಯಾವ ಸೆಕ್ಯೂರಿಟಿ ಇವರಲ್ಲಿ ಇಲ್ಲದೇ ಇರುವಾಗ ನಮ್ಮ ರಾಜ್ಯದ ಅಗತ್ಯತೆಗೆ ಬೇಕಾದ ಸಾಲವನ್ನು ಕೇಂದ್ರದವರೇ ಆಗಲೀ ಅಥವಾ ರಿಜರ್ವ್ ಬ್ಯಾಂಕಿನವರೇ ಆಗಲಿ ಪತ್ರವಿಲ್ಲದೆ ಕೊಡುವುದಕ್ಕೆ ಸಾಧ್ಯವೇ? ಇಷ್ಟೊಂದು ಬಡ್ಡಿ ಕಟ್ಟಿಕೊಂಡು ಇಂತಹ ಸರ್ಕಾರ ಇನ್ನು ಎಷ್ಟು ದಿವಸಗಳ ವರೆಗೆ ಇಲ್ಲಿ ಬಾಳಬೇಕಾಗಿದೆಯೆಂದು ನಾನು ಕೇಳುತ್ತೇನೆ. ಹೀಗೆಯೇ ಇನ್ನೂ ಮುಂದುವರೆದರೆ ದೇಶದ ಕಲ್ಯಾಣ ನಿಜವಾಗಿ ಆಗುತ್ತದೆಯೇ ಎಂಬುದು ಸಂಶಯಾತ್ಮಕವಾಗಿದೆ. ಸಾಲದ ಹೊರೆಯಿಂದ ನಮ್ಮ ಈ ರಾಜ್ಯವನ್ನೇ ಇವರು ಮಾರಲಿಕ್ಕೆ ಹೊರಟಿದ್ದಾರೆ ಎಂದು ನಾನು ತಿಳಿಯುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಯಾರೂ ಇನ್ನೂ ಅದನ್ನು ಖರೀದಿಗೆ ಕೇಳಿಲ್ಲ. ವ್ಯವಹಾರವೇನೋ ನಡೆಯುತ್ತಿದೆ ಎಂದು ನನಗೆ ಕಾಣುತ್ತದೆ.

ಶ್ರೀ ದಯಾನಂದ ಆರ್. ಕಳ್ಳಿ.—ಸಾಲದಿಂದಾಗಲೀ ಅಥವಾ ಮುಂಗಡ ರೂಪದಲ್ಲಾಗಲೀ ಕೇಂದ್ರದಿಂದ ಪಡೆದ ಸುಮಾರು 196 ಕೋಟಿ ರೂಪಾಯಿಗಳು ಹಾಗೆಯೇ ಇತರರಿಂದ ಪಡೆದ 72 ಕೋಟಿ ರೂಪಾಯಿಗಳು—ಎಲ್ಲಾ ಸೇರಿ 268 ಕೋಟಿ ರೂಪಾಯಿಗಳು ಸಾಲದ ಹೊರೆ ನಮ್ಮ ರಾಜ್ಯದ ಮೇಲೆ ಇದೆಯೆಂದು ಈ ಮುಂಗಡ ಪತ್ರದಿಂದ ತಿಳಿದುಬರುತ್ತದೆ. ನಮ್ಮ ರಾಜ್ಯ ಸರ್ಕಾರದ ಹಣಕಾಸಿನ ಆಯೋಗದವರು ಕೆಲವು ಶಿಫಾರಸುಗಳನ್ನು ಹೇಳಿದ್ದಾರವೇ ಹೊರತು ಅವನ್ನು ಮೀರಿಹೊಕ್ಕ ಪುನಃ ಅವರಿಂದ ಪಡೆದುಕೊಳ್ಳುವ ಹಾಗೆ ಯತ್ನಿಸುವುದನ್ನು ನಾವು ನೋಡಿದರೆ ಇದು ನಿಜವಾಗಿ ಸ್ಥಿರ ಭದ್ರವಾದ ಆಯವ್ಯಯವೆಂದು ಕಾಣುವುದಿಲ್ಲ. ಇದು ಬುದ್ಧಿವಂತಿಕೆಯನ್ನು ತೋರಿಸುವುದಿಲ್ಲ. ಅದರಿಂದಾಗಿ ಸರ್ಕಾರಕ್ಕೆ ವ್ಯವಹಾರ ಜ್ಞಾನವೇ ಇಲ್ಲ. ಬೇರೆ ಸಾಮಾನ್ಯ ವಿವೇಕವಾದರೂ ಇದೆಯೇ ಎಂದು ಹೇಳಿದರೆ ಅದೂ ಕೂಡ ಶೂನ್ಯ. ಯಾವುದೇ ಒಂದು ವಿಷಯಕ್ಕಾಗಲೀ ನಮ್ಮ ಸರ್ಕಾರ ಕೇಂದ್ರ ಸರ್ಕಾರದವರಲ್ಲಾಗಲೀ ಅಥವಾ ರಿಜರ್ವ್ ಬ್ಯಾಂಕಿನವರಲ್ಲಾಗಲೀ ಯಾಚನಾದೃಷ್ಟಿಯಿಂದ ಭಿಕ್ಷಾಪಾತ್ರೆ ಹಿಡಿದುಕೊಂಡು ಹೋಗುವ ಪ್ರಸಂಗ ಪ್ರತಿಯೊಂದು ಕಡೆಯೂ ಕಂಡುಬರುತ್ತಾ ಇದೆ. ಇವರು ಮುಂಗಡ ಪತ್ರಗಳನ್ನು ಈ ಸಭೆಯಲ್ಲಿ ಮಂಡಿಸುವಾಗ ಸಾಮಾನ್ಯವಾಗಿ ಹಣಕಾಸಿನ ಸತ್ಯ ಚಿತ್ರವನ್ನು ಜನತಾ ಪ್ರತಿನಿಧಿಗಳ ಮುಂದಿಟ್ಟು ಅದಕ್ಕೆ ಜನತಾ ಪ್ರತಿನಿಧಿಗಳ ಸಹಕಾರ ಕೋರುವುದು ಸರ್ಕಾರದ ನ್ಯಾಯಸಮ್ಮತವಾದ ಲಕ್ಷಣ. ಆದರೆ ಇಲ್ಲಿ ಮಂಡಿಸಿರತಕ್ಕ ಮುಂಗಡ ಪತ್ರವನ್ನು ನೋಡಿದರೆ ಅದು ಸತ್ಯಕ್ಕೆ ದೂರವಾದುದಾಗಿದೆ. ಯಾವಾಗ ಬಜೆಟ್ಟನ್ನು ನೋಡಿದರೂ ಅದರಲ್ಲಿ ತಿಳಿಸಿಲ್ಲದ ಹಾಗೆಯೇ ಇರುತ್ತದೆ. ಜನತೆಯ ಪ್ರತಿನಿಧಿಗಳನ್ನು ಅವರ ಮೂಲಕ ಸಮಗ್ರ ರಾಜ್ಯದ ಜನತೆಯನ್ನೂ, ವಂಚಿಸುವ ಒಂದು ಕಾರ್ಯಭಾರವನ್ನು ನಮ್ಮ ಅರ್ಥ ಮಂತ್ರಿಗಳು ಮಾಡುತ್ತಿದ್ದಾರೆ ಎಂಬುದಾಗಿ ನಾನು ನಿಸ್ಸಂಶಯದಿಂದ ಹೇಳಬೇಕಾಗಿದೆ. ಹಲವಾರು ವರ್ಷಗಳಿಂದಲೂ ನಮ್ಮ ಅರ್ಥಸಚಿವರುಗಳು ಈ ಸಭೆಯ ಸದಸ್ಯರುಗಳ ಮೂಲಕ ಅವರ ಪ್ರತಿನಿಧಿಗಳ ಜನತೆಯನ್ನು ವಂಚಿಸುವ ಒಂದು ದಾರಿಯಲ್ಲಿ ಹೋಗುತ್ತಿದ್ದಾರೆ. ಪ್ರತಿಯೊಂದರಲ್ಲೂ ತಪ್ಪು ಕಲ್ಪನೆಗಳನ್ನು ಕೊಡುವುದರಿಂದ ಇವರ ಅಂಕಿಅಂಶಗಳೆಲ್ಲಾ ಒಂದು 'ಜಗ್ಲರಿ' ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಜನರನ್ನು ಯಾವಾಗಲೂ ಒಂದು ತಪ್ಪುದಾರಿಯಲ್ಲಿಯೇ ಈ ಸರ್ಕಾರ ಕೊಂಡೊಯ್ಯುತ್ತಿದೆ. ಇತ್ತೀಚೆಗೆ ಅವುಗಳನ್ನು ನನ್ನ ಅನೇಕ ಸ್ನೇಹಿತರ ಮೂಲಕ ಕೇಳಿದ್ದೇನೆ. ಕೆಲವು ಕಾಲದ ಹಿಂದೆ ಅಕ್ಕಿಯನ್ನು ವಸೂಲು ಮಾಡಿ ಎಂದು ಹೇಳಿದರು. ನಮ್ಮ

---

† Indicates that the remarks or speeches have not been revised by the member concerned.

(ಶ್ರೀ ದಯಾನಂದ ಆರ್ ಕಳ್ಳಿ)

ಸರ್ಕಾರದ ಆ ಹೇಳಿಕೆಯನ್ನು ಕೇಂದ್ರ ಸರ್ಕಾರ ನಿರಾಕರಿಸಿ ನಮಗೆ ಎಷ್ಟು ಬರಬೇಕೋ ಅಷ್ಟನ್ನು ವಸೂಲು ಮಾಡಿದ್ದೇವೆ. ಹೆಚ್ಚು ವಸೂಲು ಮಾಡಲಿಲ್ಲವೆಂದು ಒಂದು ಹೇಳಿಕೆಯನ್ನೇನೋ ಕೊಟ್ಟರು. ಕೂಡಲೇ ಈ ಒಂದು ಅವ್ಯವಹಾರವನ್ನು ಕಂಡ ರಾಜ್ಯ ಸರ್ಕಾರ ಅಕೌಂಟೆಂಟ್ ಜನರಲ್ ಮೂಲಕ ಕೇರಳಾಕ್ಕೆ ಅದನ್ನು ಕೊಡುವುದರಲ್ಲಿ ಪ್ರಯತ್ನ ಮಾಡಿದ್ದಾರೆ. ಆ ತಕ್ಷಣವೇ ಅಕೌಂಟೆಂಟ್ ಜನರಲ್‌ರವರು ಇದನ್ನು ನಿರಾಕರಿಸಿದ್ದಾರೆ. ಕೊನೆಗೆ ನಾವು ಯೋಚಿಸಿದ್ದು ಹೆಚ್ಚಿನ ಹಣ ಕೊಡುವುದಕ್ಕೆ ಇದು ಬಂತು ಎಂದು. ಇದನ್ನು ನೋಡಿದಾಗ ನಮ್ಮ ಸರ್ಕಾರ ಏನೋ ಒಂದು ಅವ್ಯವಹಾರದಿಂದ ಮುಂದುವರಿಯುತ್ತಿದೆಯೆಂದು ಮನದಟ್ಟಾಗಿದೆ. ಹೀಗಾಗಿ ರಾಜ್ಯದ ಪರಿಸ್ಥಿತಿ ಬಹಳವಾಗಿ ಕೆಟ್ಟು ಹೋಗಿದೆ. ಇದನ್ನು ಪ್ರತಿಯೊಬ್ಬರೂ ಬಲ್ಲವರಾಗಿದ್ದಾರೆ. ಇದರಿಂದ ಮಧ್ಯಮವರ್ಗದ ಜನರು ಬಹಳವಾಗಿ ನರಳುತ್ತಿದ್ದಾರೆ. ನಮ್ಮ ದೇಶದಲ್ಲಿ ಇವತ್ತು ಭಾರಿ ಕಂಟ್ರ್ಯಾಕ್ಟರ್ಸ್, ಆಫೀಸರುಗಳು, ನಾಯಕರು ಹಾಗೂ ವ್ಯಾಪಾರಿಗಳು ಸೇರಿಕೊಂಡು ಒಂದು ವರ್ಗವನ್ನು ಸ್ಥಾಪಿಸುತ್ತಿದ್ದಾರೆ. ಅವರುಗಳೆಲ್ಲರೂ ನಮ್ಮ ರಾಜ್ಯದ ಸಂಪತ್ತನ್ನು ಸೂರೆ ಮಾಡಿಕೊಂಡು ಬಹುಸಂಖ್ಯಾತ ಜನರನ್ನು ಮೆಟ್ಟಿ ಶೋಷಣೆಮಾಡಿ ಅವರು ಹೆಚ್ಚಿಗೆ ಸುಖಪಡುತ್ತಿದ್ದಾರೆ. ಪೋಲೀಸ್ ದಳದವರು ಕೆಲವು ಜನರ ಮೇಲೆ ಕಣ್ಣಿಟ್ಟು ಇಂತಹ ತುರ್ತುಪರಿಸ್ಥಿತಿಯನ್ನು ಉಪಯೋಗಿಸಿ ಜನರನ್ನು ನರಳಿಸುತ್ತಾ ಇದ್ದಾರೆ. ಇದಕ್ಕೊಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಹಿಂದಿನ ಅರ್ಥ ಮಂತ್ರಿಗಳು, ಈಗಿನ ಅರ್ಥಮಂತ್ರಿಗಳು ತಮ್ಮ ಮತದಾರರ ಕ್ಷೇತ್ರಕ್ಕೆ ಹೋಗಬೇಕಾದರೆ ಪೋಲೀಸ್ ರಕ್ಷಣೆಯಲ್ಲಿ ಹೋಗುತ್ತಿದ್ದಾರೆ. ಈಗಿನ ಪ್ರಜಾಪ್ರಭುತ್ವದಲ್ಲಿ ಕೇವಲ ಕೆಲವೇ ಜನರು ಆಳುವಂತಹ ಈ ಆಡಳಿತ ಪಕ್ಷದವರು ಬಹು ಜನರ ಹಣವನ್ನು ತೆಗೆದುಕೊಂಡು ತಾವು ಎಲ್ಲಾ ಸುಖವನ್ನು ಪಡೆಯುತ್ತಿದ್ದಾರೆ. ಆದರೆ ಈಗಿನ ಜೀವನದ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ನಮ್ಮ ಅರ್ಥ ಮಂತ್ರಿಗಳು ಮುಂಗಡ ಪತ್ರದಲ್ಲಿ ಆಹಾರೋತ್ಪತ್ತಿ ಜಾಸ್ತಿಯಾಗಿದೆ, ಖಾಸಗೀ ಕ್ಷೇತ್ರದಲ್ಲಿ ಹಾಗೂ ಅಧಿಕಾರ ಕ್ಷೇತ್ರಗಳಲ್ಲಿರ ತಕ್ಕ ಕೈಗಾರಿಕೆಗಳಲ್ಲೂ ಕೂಡ ಉತ್ಪತ್ತಿ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಆದರೆ ಜೀವನಕ್ಕೆ ಅವಶ್ಯಕವಾದ ಸಾಮಾಗ್ರಿಗಳ ಬೆಲೆಯೇನೂ ಕಡಿಮೆಯಾಗಿಲ್ಲ. ಅದರಲ್ಲೂ ಜನತೆ ಬಳಕೆಯಲ್ಲಿರುವ ವಸ್ತುಗಳ ಬೆಲೆಯೇನೋ ಇನ್ನೂ ಜಾಸ್ತಿಯಾಗಿಯೇ ಇದೆ. ಎಲ್ಲೆಲ್ಲಿ ನೋಡಿದರೂ ಹಣಕ್ಕೆ ಬೆಲೆಯೇ ಇಲ್ಲ. ಒಂದಕ್ಕೆ 4 ರಷ್ಟು ಬೆಲೆ ಕೊಡಬೇಕಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಬಡನೌಕರರಿಗೆ ಕೇವಲ 5 ರೂಪಾಯಿಗಳ ತುಟ್ಟಿಭತ್ಯವನ್ನು ಕೊಟ್ಟಿದ್ದೇವೆಂದು ಬಹಳ ಹೆಮ್ಮೆಯಿಂದ ಹೇಳುತ್ತಿದ್ದಾರೆ. ಇದು ಬಲಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆಯಂತಿದೆ ಎಂದು ನಾನು ಹೇಳುತ್ತೇನೆ. ಕೇವಲ ಈ 5 ರೂಪಾಯಿಗಳಿಂದ ಖಂಡಿತವಾಗಿ ನಮ್ಮ ನೌಕರರು ಸಂತುಷ್ಟರಾಗುವುದಿಲ್ಲ. ಅವರ ಜೀವನ ಮತ್ತಷ್ಟು ಕಷ್ಟವಾಗುತ್ತದೆ. ಯಾವ್ಯಾವ ದೃಷ್ಟಿಯಿಂದ ರಾಜ್ಯ ಬೊಕ್ಕಸಕ್ಕೆ ಹಣವನ್ನು ತುಂಬಿಸಬೇಕು ಎಂಬುದನ್ನು ಯೋಚಿಸಬೇಕು. ರಾಜ್ಯಕ್ಕೆ ನಿಜವಾಗಿ ಬರಬೇಕಾದ ಬಾಕಿ ಎಷ್ಟೋ ಇದೆ. ಅನೇಕ ಬಾಬುಗಳಿಂದ ಎಷ್ಟೋ ಹಣ ವಸೂಲಾಗದೆ ನಿಂತಿದೆ. ಆ ರೀತಿ ಬಾಕಿ ನಿಂತಿರುವ ಹಣವನ್ನು ಇವರು ಕಟ್ಟುನಿಟ್ಟಾಗಿ ವಸೂಲುಮಾಡದೆ ಹಿಂದುಳಿದಿದ್ದಾರೆ. ನಮಗೆ ಇಂತಹ ತುರ್ತು ಪರಿಸ್ಥಿತಿಯಲ್ಲಿ ಹಣದ ಅವಶ್ಯಕತೆ ಇದ್ದೇ ಇದೆ. ತೆರಿಗೆ ಹಾಕದೆ ಯಾವ ರೀತಿಯಲ್ಲಿ ಸರ್ಕಾರವನ್ನು ನಡೆಸಬೇಕೆಂಬ ಬಗ್ಗೆ ಮಂತ್ರಿಗಳು ನಮ್ಮನ್ನು ಪ್ರಶ್ನೆ ಕೇಳಿದರೆ ನಾವು ಅದಕ್ಕೆ ಬೇಕಾದಷ್ಟು ಉತ್ತರಗಳನ್ನು ಕೊಡುತ್ತೇವೆ. ಇಂತಹ ಸಂದರ್ಭದಲ್ಲಿ ಇವರು ಹಣ ಬರತಕ್ಕ ಮೂಲಗಳನ್ನು ಬಿಟ್ಟು ಬಡ ಜನತೆ, ಬಡನೌಕರರ ಮೇಲೆ ಹಾಗೂ ಬಡರೈತರ ಮೇಲೆ ಇನ್ನೂ ಹೆಚ್ಚಿನ ಕರವನ್ನು ಹೇರಿ ಅವರನ್ನು ಹತ್ತಿಕ್ಕಲಿಕ್ಕೆ ಹೊರಟಿದ್ದಾರೆ. ಇದು ಖಂಡಿತವಾಗಿ ನ್ಯಾಯವಲ್ಲ. ಮತ್ತೆ ಬೇರೆ ಕಡೆಗಳಲ್ಲಿ ನಮ ದೃಷ್ಟಿಕೋನವನ್ನು ಹರಿಸುತ್ತಾ ಇಲ್ಲ. ಬರೀ ಏನೋ ಒಂದು ಪಕ್ಷದ ಒಣಪ್ರತಿಷ್ಠೆಗಾಗಿ ಪಾನ ನಿರೋಧವನ್ನು ಇಟ್ಟುಕೊಂಡು ಅದನ್ನು ಸರಿಯಾಗಿ ಜಾರಿಗೆ ತರುತ್ತಾ ಇಲ್ಲ. ಈ ವಿಚಾರ ಜನರಿಗೂ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ, ಮುಖಂಡರಿಗೂ ಗೊತ್ತಿದೆ. ಇದು ಯಶಸ್ವಿಯಾಗಿಲ್ಲವೆಂಬುದು ಮಂತ್ರಿಗಳಿಗೂ ಗೊತ್ತಿದೆ. ಇದರಿಂದ ಜನರ ನೈತಿಕ ಮಟ್ಟ ಹಾಳಾಗಿ ಹೋಗಿದೆ. ಪೋಲೀಸರ ನೈತಿಕ ಮಟ್ಟವೂ ಸಹ ಇಳಿದುಹೋಗಿದೆ. ಈಗಿನ ಅದರ ಮಟ್ಟ ಯಾವ ರೀತಿಯಲ್ಲಿದೆ ಎಂದರೆ, ಅನೇಕರು ಕಳ್ಳಭಟ್ಟಿ ಸಾರಾಯಿಯನ್ನು ತಯಾರುಮಾಡಿ ದುಡ್ಡು ಮಾಡಿಕೊಂಡು ಇವತ್ತು ಆ ಜನ ಯಾವ ರೀತಿ ಮೆರೆಯುತ್ತಿದ್ದಾರೆಂಬುದನ್ನು ನಾವು ಕಾಣಬಹುದು. ಇಂತಹ ಸಂದರ್ಭದಲ್ಲಿ ಈ ಸರ್ಕಾರ ಈ ಒಂದು ಪಾನನಿರೋಧ ಕಾನೂನನ್ನು ಕೈಬಿಡಲಿಕ್ಕೆ ಸಾಧ್ಯವಿಲ್ಲದೆ

10-00 A.M.

ಸುಮ್ಮನೆ ಪರ್ಮಿಟ್ ರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದಾರೆ. ಅವರಿಗೆ ಪರ್ಮಿಟ್‌ಗಳನ್ನು ಕೊಟ್ಟು ಅವರನ್ನು ಕಳ್ಳರನ್ನಾಗಿ ಮಾಡುತ್ತಿದ್ದಾರೆ. ಇದರಿಂದ ಸುಖರಾಜ್ಯದ ಕಡೆಗೆ ಕೊಂಡೊಯ್ಯುವುದಕ್ಕೆ

ಸಾಧ್ಯವಿಲ್ಲವೆಂದು ನಾನಾದರೂ ಹೇಳುತ್ತೇನೆ. ಇಂಥಾ ಅರ್ಥವಾರ್ಥದ ಕೆಲಸವನ್ನು ಮಾಡಿ ಹೇಡಿತನದ ದಾರಿಯಲ್ಲಿ ಹೋಗುವುದನ್ನು ಬಿಟ್ಟು ಧೈರ್ಯದಿಂದ ಪಾನನಿರೋಧದ ಕಾನೂನನ್ನು ತೆಗೆದು ಹಾಕಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಈ ಆಯವ್ಯಯದ ಮುಂಗಡ ಪತ್ರದಲ್ಲಿ ಪ್ರಯಾಣಿಕರಮೇಲೆ ತೆರಿಗೆಯನ್ನು ಹಾಕುತ್ತೇವೆಂದು ಮುನ್ ಸೂಚನೆಯನ್ನು ಕೊಟ್ಟಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾರಿಗೆ ಸಂಪರ್ಕಕ್ಕೆ ಸಂಬಂಧಪಟ್ಟಹಾಗೆ ಸರಿಯಾದ ಸೌಕರ್ಯಗಳನ್ನು ಸರ್ಕಾರದವರು ಮಾಡಿಕೊಟ್ಟಿಲ್ಲ. ಹಳ್ಳಿಗಾಡಿನಲ್ಲಿ ರಸ್ತೆಗಳಿಲ್ಲ. ಹೀಗಿರುವಾಗ ಜನಸಾಮಾನ್ಯರ ಮೇಲೆ ಈ ಒಂದು ತೆರಿಗೆಯನ್ನು ಹೇರತಕ್ಕದ್ದು ಯಾವ ನ್ಯಾಯ ? ಈ ತೆರಿಗೆಯನ್ನು ಜನಸಾಮಾನ್ಯರ ಮೇಲೆ ಹಾಕುವುದಕ್ಕೆ ಸರ್ಕಾರಕ್ಕೆ ನೈತಿಕ ಹಕ್ಕು ಏನಿದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಶ್ರೀಮಾನ್ ಸಿದ್ದಯ್ಯನವರು ಮನರಂಜನೆಯ ತೆರಿಗೆಯನ್ನು ದುಡ್ಡು ಇದ್ದವರು ಕೊಡುತ್ತಾರೆಂದು ಹೇಳಿದರು. ಸಾಮಾನ್ಯ ಜನರು ಸಿನಿಮಾ ಮತ್ತು ನಾಟಕಗಳಿಗೆ ಹೋಗಿ ಮನರಂಜನೆ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಇರುವುದು ಅದೊಂದೇ ದಾರಿ ಮನರಂಜನೆ ಮಾಡಿಕೊಳ್ಳುವುದಕ್ಕೆ. ಮಂತ್ರಿಗಳಿಗೆ ಬೇಕಾದಷ್ಟು ಕ್ಲಬ್ಬುಗಳು ಮತ್ತು ವಿಹಾರ ಸ್ಥಳಗಳು ಇವೆ. ಆದರೆ ಜನಸಾಮಾನ್ಯರಿಗೆ ನಾಟಕ ಸಿನಿಮಾಗಳನ್ನು ಬಿಟ್ಟರೆ ಬೇರೆ ಯಾವ ಮನರಂಜನೆಯೂ ಸಿಕ್ಕುವುದಿಲ್ಲ. ಈಗ ಇವುಗಳ ಮೇಲೆಯೂ ಮತ್ತಷ್ಟು ತೆರಿಗೆಯನ್ನು ವಿಧಿಸುವುದಾದರೆ ಜನಗಳು ಯಾವರೀತಿ ಮನರಂಜನೆಯನ್ನು ಪಡೆದುಕೊಂಡು ತಮ್ಮ ಜೀವನವನ್ನು ಸಾಗಿಸಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಇನ್ನು ಮಂತ್ರಿಗಳು ಹೋದ ಕಡೆಗಳಲ್ಲೆಲ್ಲಾ ರೈತ ನಮ್ಮ ದೇಶದ ಬೆನ್ನೆಲುಬು, ಅವನೇ ನಮ್ಮ ದೇಶದ ಅನ್ನದಾತ ಅವನಿಗೆ ಎಲ್ಲಾ ಸವಲತ್ತುಗಳನ್ನು ಕೊಡಬೇಕು, ಅವನಿಗೆ ಸಹಾಯ ಮಾಡಬೇಕೆಂದು ವೇದಿಕೆಯ ಮೇಲೆ ನಿಂತುಕೊಂಡು ಭಾಷಣವನ್ನು ಬಿಗಿಯುತ್ತಾರೆ. ರೈತರಿಗೆ, ಗ್ರಾಮೀಣ ಜನರಿಗೆ ಯಾವ ನೆರವನ್ನು ಕೊಟ್ಟಿದ್ದಾರೆ ಎಂದು ನಾನು ಸರ್ಕಾರದವರಿಗೆ ಪ್ರಶ್ನೆ ಮಾಡಬೇಕಾಗಿದೆ. ಆಹಾರದ ಪರಿಸ್ಥಿತಿ ಉಲ್ಬಣಸ್ಥಿತಿಗೆ ಬಂದಾಗ, ದೇಶದಲ್ಲಿ ಹಾಹಾಕಾರ ಎದ್ದಾಗ್ಯೆ ರೈತರನ್ನು ಹುರಿದುಂಬಿಸಿ ನಿಮಗೆ ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆ, ಹೆಚ್ಚು ಆಹಾರವನ್ನು ಬೆಳೆಯಿರಿ ಎಂದು ಹೇಳುತ್ತಾರೆ. ಮತ್ತೊಂದು ಕಡೆ ರೈತರ ಮೇಲೆ ತೆರಿಗೆಯ ಹೊರೆಯನ್ನು ಹೇರುತ್ತಿದ್ದಾರೆ. ಭೂಕಂದಾಯ ಮೇಲೆ ಸರ್‌ಚಾರ್ಜ್‌ನ್ನು ಹೇರಿ ರೈತ ತನ್ನ ಹೊಲ ಮನೆ ಮಠಗಳನ್ನು ಬಿಟ್ಟು ಅವನು ಬೀದಿಯಲ್ಲಿ ಭಿಕಾರಿಯಾಗಿ ಹೋಗುವಂತೆ ಮಾಡುತ್ತಿದ್ದಾರೆ.

ಇನ್ನು ಈ ಆಹಾರದ ಲೆವಿ ವಿಷಯದಲ್ಲಿ ಹೇಳುವುದಾದರೆ ರೈತನಿಂದ ಲೆವಿ ಮುಖಾಂತರ ವಸೂಲು ಮಾಡತಕ್ಕ ಆಹಾರಧಾನ್ಯಕ್ಕೆ ಸರ್ಕಾರದವರು ಏನು ಬೆಲೆಯನ್ನು ಕೊಡುತ್ತಾರೆಯೋ ಅಷ್ಟು ಲಾಭವನ್ನು ಹೊರಗಡೆ ಮಾರ್ಕೆಟ್ಟಿನಲ್ಲಿ ವ್ಯಾಪಾರಸ್ಥರು ಸಂಪಾದನೆ ಮಾಡುತ್ತಾರೆ. ಈ ವಿಷಯ ಪ್ರತಿಯೊಬ್ಬರಿಗೂ ಗೊತ್ತಿದೆ. ನಾವೂ ಸಹ ನೋಡುತ್ತಿದ್ದೇವೆ. ರೈತ ಬೆಳೆಯುತಕ್ಕ ಬತ್ತಕ್ಕೆ ಒಂದು ಕ್ವಿಂಟಾಲಿಗೆ ಸರ್ಕಾರದವರು 44 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದೇ ಬತ್ತವನ್ನು ಮಾರ್ಕೆಟ್ಟಿನಲ್ಲಿ ವರ್ತಕರು ಯಾವುದೋ ಒಂದು ರೀತಿಯಿಂದ ವಶಪಡಿಸಿಕೊಂಡು ಅದನ್ನು ಒಂದು ಕ್ವಿಂಟಾಲಿಗೆ 70-80 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಕಷ್ಟಪಟ್ಟು ಬತ್ತವನ್ನು ಬೆಳೆಯುತಕ್ಕ ರೈತನಿಗೆ ಒಂದು ಕ್ವಿಂಟಾಲಿಗೆ 44 ರೂಪಾಯಿ ಸಿಕ್ಕುತ್ತದೆ. ಯಾವ ಕಷ್ಟವೂ ಇಲ್ಲದೆ ಇರತಕ್ಕ ಲಾಭಬಡುಕರಿಗೆ ಒಂದು ಕ್ವಿಂಟಾಲಿಗೆ 30-35 ರೂಪಾಯಿಗಳು ಸಿಕ್ಕುತ್ತವೆ. ಇದಕ್ಕೆ ಸರ್ಕಾರ ಹೊಣೆಯಲ್ಲದೆ ಬೇರೆ ಯಾರು ಹೊಣೆ? ಇದರಿಂದ ಲಾಭಬಡುಕರಿಗೆ, ಸಮಾಜದ್ರೋಹಿಗಳಿಗೆ, ಕಾಳಸಂತೆ ಕೋರರಿಗೆ ಅನುಕೂಲವಾಗುತ್ತದೆಯೇ ಹೊರತು ಇದರಿಂದ ರೈತರಿಗೆ ಯಾವ ಅನುಕೂಲವೂ ಆಗುವುದಿಲ್ಲ. ಸುಮ್ಮನೆ ರೈತರಿಗೆ ಸಹಾಯ ಮಾಡುತ್ತೇವೆ, ಅನುಕೂಲ ಮಾಡಿಕೊಡುತ್ತೇವೆ ಎಂದು ಭಾಷಣವನ್ನು ಬಿಗಿದರೆ ಏನೂ ಪ್ರಯೋಜನವಾಗಲಾರದು. ಈ ವರ್ಷ ನಮ್ಮ ಮುಂದೆ ಇಟ್ಟಿರತಕ್ಕ ಆಯವ್ಯಯ ಮುಂಗಡ ಪತ್ರವನ್ನು ನೋಡಿದರೆ ಇದರಲ್ಲಿ ಜನತೆಗೆ ಅನುಕೂಲವಾಗತಕ್ಕಂಥ ವಿಷಯಗಳು ಯಾವುವೂ ನಮಗೆ ಕಾಣುವುದಿಲ್ಲ. ಸಹಕಾರ ಸಂಘಗಳ ಅಧಿಕಾರಿಗಳು ಒಂದು ಸಹಕಾರ ಸಂಘದ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎಂಬ ಭಾವನೆ ನಮಗೆ ಬರುತ್ತದೆ. ಇಂಥ ಒಂದು ಆಯವ್ಯಯ ಮುಂಗಡ ಪತ್ರವನ್ನು ಈ ಸಭೆಯ ಎಲ್ಲಾ ಮಾನ್ಯ ಸದಸ್ಯರೂ ನಿಜವಾಗಿಯೂ ಒಳ್ಳೆಯ ಮನಸ್ಸಿನಿಂದ ಪರಿಶೀಲಿಸಿ ಎಲ್ಲರೂ ಒಮ್ಮತದಿಂದ ತಿರಸ್ಕರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಿ. ವಸ್ತ್ರದ (ಬಿಜಾಪುರ).—ಸನ್ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದ ಆರ್ಥಿಕ ಸಚಿವರು ಮಂಡಿಸಿರುವಂಥ ಆಯವ್ಯಯ ಮುಂಗಡ ಪತ್ರವನ್ನು ಸಮರ್ಥನೆ ಮಾಡುತ್ತಾ, ಈ ರಾಜ್ಯದ ಅಭಿವೃದ್ಧಿಯ ಸಲುವಾಗಿ ಕೆಲವೊಂದು ಸೂಚನೆಗಳನ್ನು ನಾನು ಸರ್ಕಾರಕ್ಕೆ ಕೊಡ

(ಶ್ರೀ ಎಸ್. ಬಿ. ವಸ್ತ್ರದ)

ಬಯಸುತ್ತೇನೆ. ಈ ವರ್ಷ ನಮ್ಮ ರಾಜ್ಯಕ್ಕೆ ಎರಡು ಕೋಟಿ 53 ಲಕ್ಷ ರೂಪಾಯಿಗಳ ಉಳಿತಾಯದ ಬಜೆಟ್ಟನ್ನು ಮಂಡಿಸಿದ ನಮ್ಮ ಮಾನ್ಯ ದ್ರವ್ಯ ಶಾಖೆಯ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಬಜೆಟ್ಟಿನಲ್ಲಿರುವ ಸಮಗ್ರವಾದ ಅಂಕಿ ಅಂಶಗಳನ್ನು ನಾವು ಅವಲೋಕಿಸಿದರೆ ನಮ್ಮ ಅರ್ಥ ಮಂತ್ರಿಗಳು ಬಹಳ ಶ್ರಮವಹಿಸಿ ಕೆಲಸ ಮಾಡಿದ್ದಾರೆ ಎಂಬುದು ಕಂಡುಬರುತ್ತದೆ. ಅಲ್ಲದೆ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಮುಖ್ಯವಾಗಿ ವ್ಯವಸಾಯಕ್ಕೆ ವಕ್ಕಲುತನಕ್ಕೆ 137 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಬಹಳ ಸ್ತುತ್ಯಾರ್ಹವಾದದ್ದು ಮತ್ತು ಯೋಗ್ಯವಾದದ್ದು ಆಗಿದೆ.

ಇನ್ನು ನಮ್ಮ ರಾಜ್ಯದ ಅಭಿವೃದ್ಧಿಗಾಗಿ ಸರ್ಕಾರದವರು ಕೈಕೊಳ್ಳಬೇಕಾದ ಕೆಲವೊಂದು ಕಾರ್ಯಗಳ ಬಗ್ಗೆ ಒಂದೆರಡು ಸಲಹೆಗಳನ್ನು ಮಾಡಬಯಸುತ್ತೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉದ್ಯಮ ಸ್ಥಾಪನೆಗೆ ಲೈಸೆನ್ಸಿಗಾಗಿ ಹಾಕಿಕೊಂಡ 400 ಅರ್ಜಿಗಳ ಪೈಕಿ 151 ಅರ್ಜಿಗಳ ಸಂಬಂಧದಲ್ಲಿ ಲೈಸೆನ್ಸು ಕೊಟ್ಟಿದೆ. ಆದರೂ ಸಹ ಅವು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಮಾನ್ಯ ಅರ್ಥ ಸಚಿವರು ಬಹಳ ವಿಷಾದದಿಂದ ಹೇಳಿದ್ದಾರೆ. ಅವು ಕಾರ್ಯರೂಪಕ್ಕೆ ಬರುವುದಕ್ಕೆ ಇರತಕ್ಕ ಅಡ್ಡಿ ಆತಂಕಗಳು ಏನು ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಆ ರೀತಿ ಪರಿಶೀಲನೆ ಮಾಡುವಾಗ ಇಂತಿಷ್ಟು ಅವಧಿಯಲ್ಲಿ ಅದನ್ನು ಕಾರ್ಯರೂಪಕ್ಕೆ ತರಬೇಕು, ಇಲ್ಲದೆ ಹೋದರೆ ನಿಮ್ಮ ಲೈಸೆನ್ಸನ್ನು ವಜಾ ಮಾಡುತ್ತೇವೆ ಎಂದು ಸಂಬಂಧಪಟ್ಟವರಿಗೆ ಹೇಳಿದರೆ ಒಳ್ಳೆಯದಾಗುತ್ತದೆ. ಅಲ್ಲದೆ ಉದ್ಯಮ ಸ್ಥಾಪನೆ ಭರದಿಂದ ಸಾಗಬೇಕಾದರೆ ಒಂದು ತಜ್ಞರ ಸಮಿತಿಯನ್ನು ನೇಮಿಸಿ ಅದಕ್ಕೆ ಅದರ ಜವಾಬ್ದಾರಿಯನ್ನು ಒಪ್ಪಿಸಿದರೆ ಉದ್ಯಮಗಳು ಅಭಿವೃದ್ಧಿಯಾಗಿ ಅದರಿಂದ ನವಗೆ ಹೆಚ್ಚಿನ ಪ್ರಯೋಜನ ಉಂಟಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕು.

ಇನ್ನು ಮೀನು ಮತ್ತು ಕೋಳಿ ಸಾಕಾಣಿಕೆಗಾಗಿ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸಿದ್ದಾರೆ. ಇದು ಬಹಳ ಒಳ್ಳೆಯದು ಮತ್ತು ಸ್ತುತ್ಯಾರ್ಹವಾಗಿದೆ. ಇದು ಕಾರ್ಯರೂಪಕ್ಕೆ ಬರಬೇಕಾದರೆ ಬಹಳ ವಿಳಂಬವಾಗುತ್ತಿದೆ. ಆದ್ದರಿಂದ ಈ ವಿಳಂಬವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಶ್ರಮ ವಹಿಸಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ನೀರಾವರಿಯ ವಿಷಯದಲ್ಲಿ ಹೇಳುವುದಾದರೆ 1962ನೇ ಇಸವಿಯಲ್ಲಿ ನೀರಾವರಿಯ ಪ್ರಮಾಣ ನಮ್ಮ ರಾಜ್ಯದಲ್ಲಿ 7 ಪರ್ಸೆಂಟ್ ಇತ್ತು. 5 ವರ್ಷದ ನಂತರ 8 ಪರ್ಸೆಂಟ್ ನೀರಾವರಿ ನಮ್ಮ ರಾಜ್ಯದಲ್ಲಿ ಆಗಿದೆ ಎಂದು ಅರ್ಥ ಸಚಿವರು ಹೇಳಿದ್ದಾರೆ. ಒಂದು ವರ್ಷಕ್ಕೆ $\frac{1}{5}$ ಪ್ರಮಾಣದಂತೆ 5 ವರ್ಷಕ್ಕೆ ಒಂದು ಪರ್ಸೆಂಟ್ ಜಾಸ್ತಿಯಾಗಿದೆ. ಇದು ಬಹಳ ನಿಧಾನವಾಗಿದೆ. ನೀರಾವರಿಯನ್ನು ಹೆಚ್ಚು ಮಾಡುವುದು ಬಹಳ ವಿಳಂಬವಾಗಿದೆ ಎಂದು ಕಾಣುತ್ತದೆ. ಆದ್ದರಿಂದ ನೀರಾವರಿಯ ಸೌಕರ್ಯವನ್ನು ಒದಗಿಸತಕ್ಕ ಕಾರ್ಯ ಬಹಳ ತ್ವರಿತ ಗತಿಯಿಂದ ಸಾಗಬೇಕು. ಮತ್ತು ನೀರಾವರಿಯ ಪ್ರಮಾಣವನ್ನು ಹೆಚ್ಚಿಸುವ ಕಾರ್ಯವನ್ನು ಸರ್ಕಾರದವರು ಕೂಡಲೆ ಕೈಗೊಳ್ಳಬೇಕು. ಬಿಜಾಪುರ ಜಿಲ್ಲೆಯಲ್ಲಿ 30 ಸಾವಿರ ನೀರಾವರಿ ಬಾವಿಗಳು ಇವೆ. ಇನ್ನೂ 30 ಸಾವಿರ ಬಾವಿಗಳು ಆಗುವ ಹಾಗೆ ಇವೆ. ಅವುಗಳಿಗೆ ಸರ್ಕಾರದವರು ದ್ರವ್ಯ ಸಹಾಯವನ್ನು ಮಾಡಿದರೆ ಆ ಬಾವಿಗಳಿಂದ ಲಕ್ಷಾಂತರ ಎಕರೆ ಭೂಮಿ ನೀರಾವರಿಯಾಗುತ್ತದೆ. ಅದೂ ಅಲ್ಲದೆ ಆ ಜಿಲ್ಲೆಗೆ ಸಂಬಂಧಪಟ್ಟಂತೆ 2-3 ಕೋಟಿ ರೂಪಾಯಿಗಳ ಕೆರೆಗಳ ಕೆಲಸದ ಪ್ಲಾನು ಮತ್ತು ಎಸ್ಟಿಮೇಟು ಸಿದ್ಧವಾಗಿದೆ. ಇವುಗಳನ್ನು ಹಂತ ಹಂತವಾಗಿ ತೆಗೆದುಕೊಂಡರೆ ಅಲ್ಲಿನ ಜನತೆಗೆ ಸಹಾಯ ಮಾಡಿದಂತಾಗುತ್ತದೆ. 30 ಸಾವಿರ ಬಾವಿಗಳು ಇರುವ ಕಡೆಗೆ 500-600 ಡೀಜಲ್ ಪಂಪು ಸೆಟ್ಟುಗಳನ್ನು ಒದಗಿಸಿದ್ದಾರೆ. ಅವು ಸಾಕಾಗುವುದಿಲ್ಲ. ಆದ್ದರಿಂದ ಡೀಜಲ್ ಪಂಪು ಸೆಟ್ಟುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕು. ವಿದ್ಯುಚ್ಛಕ್ತಿ ಪಂಪುಸೆಟ್ಟುಗಳನ್ನು ಒದಗಿಸತಕ್ಕ ಯೋಜನೆ ಹಾಗೆಯೇ ಇದೆ. ಇದಕ್ಕಾಗಿ ವಿದ್ಯುಚ್ಛಕ್ತಿ ಯೋಜನೆ ತೀವ್ರ ಮಾಡಿಕೊಡಬೇಕೆಂದು ಬಿಜಾಪುರದ ಜನರ ಪರವಾಗಿ ಇಲ್ಲಿ ಸೂಚನೆ ಮಾಡಬಯಸುತ್ತೇನೆ.

ಇನ್ನು ನಮ್ಮ ಬಿಜಾಪುರ ಜಿಲ್ಲೆ ಸುಮಾರು ನೂರಾರು ವರ್ಷಗಳಿಂದಲೂ ಬರಗಾಲಕ್ಕೆ ಹೆಸರುವಾಸಿಯಾದ ಪ್ರದೇಶ. ಇಲ್ಲಿ ಪ್ರತಿ ಎರಡು ಮೂರು ವರ್ಷಕ್ಕೊಮ್ಮೆ ಬರಗಾಲ ಬರುತ್ತಲೇ ಇರುತ್ತದೆ. ಅಂತೂ ಈ ಜಿಲ್ಲೆಯಲ್ಲಿ ಬರಗಾಲ ಇದ್ದೇ ಇರುತ್ತದೆ. ಬರಗಾಲಕ್ಕೆ ಬಿಜಾಪುರ ತವರುಮನೆಯಂತಾಗಿದೆ. ಇದರ ವೈಶಿಷ್ಟ್ಯ ಹಾಗೂ ಇತಿಹಾಸ ಬರಗಾಲಕ್ಕೆ ಪ್ರಸಿದ್ಧವಾದುದು ಎಂದು ಎಲ್ಲರಿಗೂ ತಿಳಿ-

ದಿರುವ ವಿಚಾರ. ಹಾಗಿದ್ದರೂ ಕೂಡ ನಮ್ಮ ಬಿಜಾಪುರ ಜಿಲ್ಲೆಗೆ ರಾಷ್ಟ್ರ ರಕ್ಷಣಾ ಕಾರ್ಯಕ್ಕಾಗಿ ಬಂದಿದ್ದ ನಮ್ಮ ಭಾರತದ ಪ್ರಧಾನಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರು ಹಾಗೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಇವರಿಬ್ಬರನ್ನು ಚಿನ್ನದಿಂದ ತುಲಾಭಾರ ಮಾಡಿಸಿಕೊಟ್ಟ ಕೀರ್ತಿ ನಮ್ಮ ಬಿಜಾಪುರ ಜಿಲ್ಲೆಗೆ ಸೇರುತ್ತದೆ. ಇದನ್ನು ಸುವರ್ಣಾಕ್ಷರಗಳಿಂದ ಬರೆದಿಡುವಂತಹ ಸನ್ನಿವೇಶ. ಇದಕ್ಕೆ ನಾವು ಹೆಮ್ಮೆಪಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಕಾಂಟೂರು ಬಂಡಿಂಗ್ಸ್‌ಗಾಗಿ 75 ಲಕ್ಷದಷ್ಟು ಹಣ ಕೊಟ್ಟರೂ ಅದಕ್ಕೆ ಲೆಕ್ಕವೇ ಇಲ್ಲ. ಇಲ್ಲಿ 35 ಲಕ್ಷ ಕೊಟ್ಟಿರುವುದಕ್ಕೆ ಬೆಂಬಲ ಕೊಡುತ್ತಿದ್ದಾರೆ.

ಶ್ರೀ ಎಸ್. ಬಿ. ವಸ್ತ್ರದ.—ರಾಷ್ಟ್ರದ ರಕ್ಷಣೆಯ ಗುರಿಯನ್ನು ಇಟ್ಟುಕೊಂಡು ರಾಷ್ಟ್ರದಲ್ಲಿ ಒಗ್ಗಟ್ಟು ಉಂಟುಮಾಡುವುದಕ್ಕಾಗಿ ಇಂತಹ ತುರ್ತು ಪರಿಸ್ಥಿತಿಯಲ್ಲಿ ಸಾಕಷ್ಟು ನೆರವು ಕೂಡ ಬೇಕಾದುದು ನಮ್ಮ ಆದ್ಯ ಕರ್ತವ್ಯ ಎಂದು ಇಲ್ಲಿ ಹೇಳಬಯಸುತ್ತೇನೆ.

ನಮ್ಮಲ್ಲಿ ದೋಣ್ ಎನ್ನುವ ನದಿ ಇದೆ. ಇದರಿಂದಾಗಿ ಇಲ್ಲಿ ಸುಮಾರು 30,000 ಎಕರೆಗಳಷ್ಟು ಸವಳು ಭೂಮಿಯಾಗಿದೆ. ಅಲ್ಲದೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಎರಡು ಸಾವಿರ ಎಕರೆಗಳಷ್ಟು, ಬೇರೆ ಸವಳು ಭೂಮಿ ಇದೆ. ಈಗಿನ ಆಹಾರದ ಅಭಾವದ ಕಾಲದಲ್ಲಿ ಇದನ್ನು ಸರಿಪಡಿಸಿದರೆ ಇನ್ನೂ ಹೆಚ್ಚು ಆಹಾರದವಸ ಬೆಳೆಯಬಹುದು. ಈಗ ಸುಮಾರು ಒಂದು ಎಕರೆಯಲ್ಲಿ ಎರಡು ಚೀಲ ಜೋಳ ಬೆಳೆಯಬಹುದು ಎಂದರೆ ಸುಮಾರು 30 ಸಾವಿರ ಎಕರೆಗಳಲ್ಲಿ ಜೋಳ ಬೆಳೆದರೆ 60,000 ಪಲ್ಲದಷ್ಟು ಜೋಳ ಬರಬಹುದು. ಇದಕ್ಕೆ ಪಲ್ಲ ಒಂದಕ್ಕೆ 75 ರೂಪಾಯಿ ನಂತಾದರೂ ಸುಮಾರು 45 ಲಕ್ಷ ರೂಪಾಯಿಗಳಷ್ಟು ಉತ್ಪಾದನೆ ಮಾಡಿದಂತಾಗುತ್ತದೆ. ಇದರ ಬಗ್ಗೆ ಸರಕಾರ ಸ್ವಲ್ಪ ವಿವೇಚನೆಯಿಂದ ಏರ್ಪಾಡು ಮಾಡಲು ಯೋಚನೆ ಮಾಡಬೇಕೆಂದು ಸೂಚಿಸುತ್ತೇನೆ. ಇದಕ್ಕಾಗಿ ಒಂದು ಯೋಜನಾ ಕೂಡ ಇದೆ ಎಂದು ಕೇಳುತ್ತೇನೆ. ಆದರೆ ಈ ಯೋಜನಾ ಇನ್ನೂ ಅಮಲಿಗೆ ಬರಲಿಲ್ಲ. ಇದರ ಬಗ್ಗೆ ನಮ್ಮ ಜಿಲ್ಲೆಯ ಮಾನ್ಯ ಮಂತ್ರಿಗಳಾಗಿರುವ ಶ್ರೀಮಾನ್ ಜತ್ತಿಯವರು ಇದರ ಯೋಜನೆ ಬೇಗನೆ ಬರುವಂತೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇನ್ನೂ ಅಮಲಿಗೆ ಬರಲಿಲ್ಲ. ಇದನ್ನು ಬೇಗನೆ ಕಾರ್ಯ ರೂಪಕ್ಕೆ ತರಬೇಕು. ನಮ್ಮಲ್ಲಿ ಒಂದು ಗಾದೆ ಇದೆ: 'ದೋಣ್ ನದಿಯಲ್ಲಿ ಜೋಳ ಬೆಳೆದರೆ ಓಣಿ ಎಲ್ಲಾ ಜೋಳ' ಎನ್ನುವಂತೆ ನಮ್ಮಲ್ಲಿ ನೀರು ಹೆಚ್ಚಾಗಿ ಬಂದರೆ ಇಲ್ಲಿ ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಲನುಕೂಲವಾಗುತ್ತದೆ. ಆದುದರಿಂದ ಸರಕಾರ ಮುಂಜಾಗರೂಕತೆ ವಹಿಸಿ ಕೂಡಲೇ ಇಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ನಮ್ಮಲ್ಲಿರುವ ಅಪ್ಪರ್ ಕೃಷ್ಣಾ ಯೋಜನೆ ಬರುತ್ತದೆ ಎನ್ನುವ ಕನಸು ನನಸಾಗಿ ಬರಬೇಕಾದರೆ ಈ ದೊಡ್ಡ ಯೋಜನೆಯನ್ನು ಕೇಂದ್ರ ಸರಕಾರದವರೇ ವಹಿಸಿಕೊಂಡು ಮಾಡಬೇಕು. ನಮ್ಮಲ್ಲಿ ದುಡ್ಡಿನ ತೊಂದರೆ ಇದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ಅಪ್ಪರ್ ಕೃಷ್ಣಾ ಯೋಜನೆಗಾಗಿ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಗಳವರು ಇದಕ್ಕೆ ಶಂಕುಸ್ಥಾಪನೆ ಮಾಡಿದರು. ಇದು ಬಹು ದೊಡ್ಡದಾದ ಯೋಜನೆ ಕೂಡ ನನಸಿನಂತಾಗಲು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರದಲ್ಲಿ ಇನ್ನೂ ಹೆಚ್ಚು ಪ್ರಭಾವ ಬೀರಿ ಇದನ್ನು ಆಗುವಂತೆ ಒತ್ತಾಯ ಮಾಡಬೇಕೆಂದು ಇಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಆಯುರ್ವೇದ ಹಾಗೂ ಇನ್ನಿತರ ದವಾಖಾನೆಗಳು ಸಾಕಷ್ಟು ಇಲ್ಲ. ಇದರ ಕಡೆಗೆ ಸರಕಾರ ಲಕ್ಷವಿಡಬೇಕೆಂದು ಸೂಚನೆ ಮಾಡಬಯಸುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಬೇರೆ ಬೇರೆ ರಾಜ್ಯಗಳಿಂದ ಮಹಾ ರೋಗಗಳಿರುವ ಜನ ಬಂದು ಇಲ್ಲಿನ ರಾಜಬೀದಿಗಳಲ್ಲಿ ತಿರುಗುತ್ತಿರುತ್ತಾರೆ. ಇದರಿಂದ ಇತರ ಜನರಿಗೂ ಇಲ್ಲದ ಅಂಟು ರೋಗಗಳು ಹರಡಲಿಕ್ಕೆ ಕಾರಣವಾಗುತ್ತದೆ. ಇದರ ಪರಿಹಾರದ ಸಮಸ್ಯೆ ಬಗ್ಗೆ ಆರೋಗ್ಯ ಸಚಿವರು ಆಲೋಚನೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಉಳಿತಾಯ ಯೋಜನಾದ ಬಗ್ಗೆ ನಮ್ಮ ಅರ್ಥ ಸಚಿವರು ಹೇಳುತ್ತಾ ನಮ್ಮ ರಾಜ್ಯದ ಸಾರಿಗೆ ಇಲಾಖೆಯ ನೌಕರರುಗಳು ಸುಮಾರು 14 ಸಾವಿರದಷ್ಟು ಹಣವನ್ನು ಉಳಿತಾಯ ಮಾಡಿದ್ದಾರೆಂದು ಹೇಳಿದರು. ಈ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಪರಿಷತ್ತಿನ ಸದಸ್ಯರಾದ ಶ್ರೀಮಾನ್ ಪಿ. ಎಂ. ನಾಡಗೌಡರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಸ್ಕೂಲು ಬೋರ್ಡಿನಲ್ಲಿರುವ ಎಲ್ಲ ಶಿಕ್ಷಕರುಗಳಿಂದಲೂ ಪ್ರತಿ ತಿಂಗಳಲ್ಲೂ ಐದು ರೂಪಾಯಿನಂತೆ ಳಿತಾಯ ಮಾಡಿ ಈಗಾಗಲೇ ಸುಮಾರು ಆರು ಸಾವಿರಕ್ಕೂ ಮೇಲ್ಪಟ್ಟು ಶಿಕ್ಷಕರು ಉಳಿತಾಯದ

(ಶ್ರೀ ಎಸ್. ಬಿ. ವಸ್ತ್ರದ)

ವಿಧಿ ಎಂದು ಕೊಡುತ್ತಿದ್ದಾರೆ. ಸುಮಾರು ಒಬ್ಬರು ಶಿಕ್ಷಕರಿಂದ ಐದು ರೂಪಾಯಿನಂತೆ ಎಂದರೂ ಆರು ಸಾವಿರ ಶಿಕ್ಷಕರುಗಳಿಂದ ತಿಂಗಳೊಂದಕ್ಕೆ 30 ಸಾವಿರದಷ್ಟು ಹಣ ಬಂದಾಂತಾಗುತ್ತದೆ. ಇದರಂತೆ ಸರಕಾರ ಇತರ ಕಡೆಗಳಲ್ಲಿಯೂ ತ್ವರಿತಗತಿಯಿಂದ ಈ ಉಳಿತಾಯ ಯೋಜನೆ ಮಾಡಿದರೆ ಸರಕಾರಕ್ಕೆ ಅಭಿವೃದ್ಧಿ ಕೆಲಸಗಳನ್ನು ಮಾಡಲು ಹಣ ದೊರಕುತ್ತದೆ.

ಇನ್ನು ಆಹಾರಧಾನ್ಯಗಳ ಬಗ್ಗೆ ಹೇಳಬೇಕಾಗಿದೆ. ಆಹಾರದವಸಗಳನ್ನು ಹೆಚ್ಚು ಬೆಳಸಬೇಕು ಎನ್ನುವುದು ಎಲ್ಲರೂ ಒಪ್ಪತಕ್ಕ ಮಾತು. ಆದರೆ ಆಹಾರವನ್ನು ಹೆಚ್ಚು ಉಳಿಸುವಂತೆ ಮಾಡುವ ಒಂದು ಯೋಜನಾ ಮಾಡಬೇಕಾಗಿದೆ. ಇದರ ಬಗ್ಗೆ ನನ್ನ ಒಂದು ಸೂಚನೆಯನ್ನು ಸರಕಾರದ ಮುಂದೆ ಇಡುತ್ತೇನೆ. ಸರಕಾರಕ್ಕೆ ಇದು ಒಪ್ಪುತ್ತೋ ಇಲ್ಲವೋ ಹೇಳಲಾರೆ. ಮಾನ್ಯ ಸದಸ್ಯರಿಗೆಲ್ಲ ಗೊತ್ತಿರುವ ಹಾಗೆ ಈಗ ಕೆಲವು ಚಹಾ (ಟೀ) ಅಂಗಡಿಗಳಲ್ಲಿ ಅನೇಕ ರೀತಿಯಾದ ಆಹಾರಧಾನ್ಯಗಳಿಂದ ಮಾಡಿದಂತಹ ಆಹಾರ ಪದಾರ್ಥಗಳು ನೂರಾರು ಕುಟುಂಬಗಳಿಗೆ ಸಾಲುವಷ್ಟು ಹಂಚಿಕೆಯಾಗುತ್ತಿವೆ. ಅವರಲ್ಲೂ ಇಲ್ಲಿ ಬಹುವಾಗಿ ಕರಿದ ಪದಾರ್ಥಗಳನ್ನು ಹಂಚುತ್ತಾರೆ. ಇದರಿಂದೇನಾಗುತ್ತದೆ ಎಂದರೆ ಆರೋಗ್ಯ ದೃಷ್ಟಿಯಿಂದ ಹೇಳುವುದಾದರೆ ಕರಿದ ಪದಾರ್ಥಗಳಿಂದ ತಾಮಸ ವೃದ್ಧಿಯಾಗುತ್ತದೆ. ಆದರೆ ಬೇರೆ ರೀತಿಯ ಆಹಾರ ಸೇವಿಸಿದರೆ ಸಾತ್ವಿಕ ವೃದ್ಧಿಯಾಗುತ್ತದೆ. ಇದಕ್ಕಾಗಿ ಸಿಹಿ ತಿಂಡಿಗಳು, ಹಣ್ಣು ಹಂಪಲುಗಳನ್ನೇ ವಿಶೇಷವಾಗಿ ಹಂಚಿ ಸಾತ್ವಿಕವೃತ್ತಿಯನ್ನು ಹೆಚ್ಚು ಮಾಡುವಂತೆ ಮಾಡಬೇಕು. ತಾಮಸ ವೃತ್ತಿ ಹೆಚ್ಚಾಗುವಂತಹ ಕರಿದ ಪದಾರ್ಥಗಳನ್ನು ಚಹಾ ಅಂಗಡಿಗಳಲ್ಲಿ ಮಾರಬಾರದು ಎನ್ನುವಂತಹ ಒಂದು ನಿಯಂತ್ರಣವನ್ನು ತಂದರೆ ಒಂದು ದೃಷ್ಟಿಯಿಂದ ಆಹಾರ ಧಾನ್ಯಗಳನ್ನು ಉಳಿಸಿದಂತಾಗುತ್ತದೆ, ಎಂದು ಇಲ್ಲಿ ಒಂದು ಸೂಚನೆ ಕೊಡಬಯಸುತ್ತೇನೆ.

ಸರಕಾರಕ್ಕೆ ಅನೇಕ ದೃಷ್ಟಿಯಿಂದ ದುಡ್ಡಿನ ಕೊರತೆ ಇದೆ. ಸಾಕಷ್ಟು ಸಾಲ ಕೊಡಬೇಕಾಗಿದೆ. ಇದಕ್ಕಾಗಿ ನಾನು ನಮ್ಮ ಅರ್ಥ ಸಚಿವರಲ್ಲಿ ಒಂದು ಸೂಚನಾ ಕೊಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಭೂಗರ್ಭ ದ್ರವ್ಯ ಸಂಶೋಧನೆ ಮಾಡುವಂತಹ ತಜ್ಞರನ್ನು ಕರೆಸಿ ಅವರಿಗೆ ಬೇಕಾದ ಸಹಾಯಗಳನ್ನು ಕೊಟ್ಟು ನಮ್ಮ ದೇಶದಲ್ಲಿ ಎಷ್ಟು ದ್ರವ್ಯ ಸಿಗಬಹುದು ಎನ್ನುವುದನ್ನೂ ಯೋಜನೆ ಮಾಡಬಹುದು. ಇದರ ಬಗ್ಗೆ ಮಾನ್ಯ ಅರ್ಥ ಸಚಿವರು ಯೋಚನೆ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣಪ್ಪ.—ಬಿಜಾಪುರ ಬರಗಾಲಕ್ಕೆ ಪ್ರಸಿದ್ಧವಾಗಿದೆ ಎಂದು ಇಲ್ಲಿ ಮಾನ್ಯ ಸದಸ್ಯರು ಹೇಳಿದರು. ಆದರ ಭೂಗರ್ಭ ಶೋಧನೆಯಿಂದ ದ್ರವ್ಯ ಸಿಗುತ್ತೆ ಎಂದು ಹೇಳುತ್ತಾರೆ. ಅವರೇನು ಗೋಲ್ ಗುಂಬಜ್‌ನಲ್ಲಿ ಏನಾದರೂ ನೋಡಿದ್ದಾರೋ ಅಥವಾ ಬೇರೆ ಎಲ್ಲಿಯಾದರೂ ಇದಕ್ಕೆ ಯೋಜನೆ ತಯಾರು ಮಾಡಿದ್ದಾರೋ ? (ನಗು)..

ಶ್ರೀ ಎಸ್. ಬಿ. ವಸ್ತ್ರದ.—ಕೊನೆಯಾಗಿ ಒಂದು ಸೂಚನಾ ಕೊಡಬೇಕಾಗಿದೆ. ಮಾನ್ಯ ಅರ್ಥ ಸಚಿವರ 210 ರೂಪಾಯಿಗಳಷ್ಟು ಸಂಬಳ ಪಡೆಯುವ ನೌಕರರುಗಳಿಗಾಗಿ ಐದು ರೂಪಾಯಿನಷ್ಟು ತುಟ್ಟಿಭತ್ಯವನ್ನು ಹೆಚ್ಚು ಮಾಡಿದ್ದೇವೆ ಎಂದು ಹೇಳಿರುವುದು ಬಹಳ ಸಂತೋಷದ ಸಂಗತಿ. ಇನ್ನು ಮುಂದಿನ ಯೋಜನೆಯಲ್ಲಿ ಸರಕಾರದಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳಿಗಾಗಿ ಇನ್ನೂ ಹೆಚ್ಚು ಸಹಾಯ ಮಾಡಬೇಕೆನ್ನುವ, ಧೋರಣೆ ಇದೆ ಎನ್ನುವುದನ್ನು ಇದರಲ್ಲಿ ಆರ್ಥಿಕ ಸಚಿವರು ಹೇಳಿರುವುದು ಬಹಳ ಒಳ್ಳೆಯ ವಿಚಾರ. ಆದರೆ ಸರಕಾರದಲ್ಲಿ ದಕ್ಷತೆಯಿಂದ ಕೆಲಸ ಮಾಡದೆ ಇರುವವರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಂಡು ಆಡಳಿತ ಸುಲಲಿತವಾಗಿ ನಡೆಯುವಂತೆ ಎಲ್ಲ ಕೆಲಸ ಕಾರ್ಯಗಳೂ ವಿಳಂಬವಿಲ್ಲದಂತೆ ಸರಕಾರ ಮಾಡಲು ತಕ್ಕ ಏರ್ಪಾಡು ಮಾಡಬೇಕು. ಅಲ್ಲದೆ ರಾಜ್ಯ ಸರಕಾರದಲ್ಲಿ ಮೇಲಿಂದ ಮೇಲೆ ಇಲ್ಲದ ಅಡ್ಡಿ ಆತಂಕಗಳನ್ನು ತರುವಂತಹ ನೌಕರರುಗಳ ಮೇಲೆ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕು. ಇದರಲ್ಲಿ ಸರಕಾರ ಹಿಂಜರಿಯಬಾರದು. ಆಡಳಿತದಲ್ಲಿ ದುರುಪಯೋಗ ಮಾಡುವಂತಹವರಿಗೆ ಶಿಕ್ಷೆ ಮಾಡುವುದಕ್ಕೆ ಯಾರ ಅಭ್ಯಂತರವೂ ಇರುವುದಿಲ್ಲ? ಆದರೆ ಇಲಾಖೆಯಲ್ಲಿ ದಕ್ಷತೆಯಿಂದ ಚೆನ್ನಾಗಿ ಕೆಲಸ ಮಾಡುವವರ ಕಡೆಗೆ ಸರಕಾರ ದಯೆ ತೋರಿಸಬೇಕು ಮತ್ತು ಸರಕಾರದ ಕೆಲಸಗಳು ವಿಳಂಬವಾಗದಂತೆ ಕೆಲಸಕಾರ್ಯಗಳು ಸುಗಮವಾಗಿ ನಡೆಯಲು ನಮ್ಮ ಅಧಿಕಾರಿಗಳಿಗೆ ಸರಕಾರ ಅವಕಾಶಮಾಡಿ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಷಹ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, 1966-67ನೆಯ ಸಾಲಿನ ಬಜೆಟ್ಟನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈ ಸಲದ ಬಜೆಟ್ಟಿನಲ್ಲಿ ವ್ಯವಸಾಯದ ಕೆಲಸಗಳಿಗೆ ಸಾಕಾದಷ್ಟು ಹಣ ಕೊಟ್ಟಿರುವುದರಿಂದ ಮತ್ತು ತುಟ್ಟಿಭತ್ಯ ರ

ರೂಪಾಯಿ ಹೆಚ್ಚಾಗಿ ಕೊಟ್ಟಿರುವುದಕ್ಕೆ ಇದು ಸ್ವಾಗತಾರ್ಹವಾಗಿದೆ. ನಮ್ಮ ಮೈಸೂರಿನಲ್ಲಿ ಆಹಾರ ಧಾನ್ಯದ ಸೇಕಡ ಎಂಟರಷ್ಟು ಕೊರತೆಯಿತ್ತು, ಈ ವರ್ಷ ಮಳೆ ಬಂದಿಲ್ಲ, ಆದುದರಿಂದ ಆಹಾರ ಧಾನ್ಯದ ಭಾರಿ ಅಭಾವವಿದೆ. ಈಗ ಸ್ವಲ್ಪ ಒಳ್ಳೆಯ ಪರಿಸ್ಥಿತಿ ಇದೆ. ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಧಾನ್ಯದ ಕೊರತೆ ಬಹಳವಾಗುವ ಸಂಭವವಿದೆ. ಕೆಲವು ಕಡೆ 4-5 ಆಣೆ ಬೆಳೆಯಾಗಿದೆ, ಅದರ ಜೊತೆಗೆ ಹೊರದೇಶಗಳಿಂದ ಧಾನ್ಯ ತರಿಸುತ್ತಿದ್ದಾರೆ. ಅದನ್ನು ಸಾಕಷ್ಟು ಸಂಗ್ರಹಿಸಲು ಪ್ರಯತ್ನಪಡಬೇಕು. ಧಾನ್ಯ ಹಂಚುವುದಕ್ಕೆ ಹಳ್ಳಿಗಳಲ್ಲಿ ಸೊಸೈಟಿಗಳಿಲ್ಲ, ಪಂಚಾಯಿತಿ ಆಫೀಸಿನಲ್ಲೂ ಅವಕಾಶಮಾಡಿಲ್ಲ, ಅಲ್ಲಿ ಕೂಡ ಜೂನ್, ಜುಲೈ ತಿಂಗಳುಗಳಲ್ಲಿ ಧಾನ್ಯ ಬೇಕಾಗುತ್ತದೆ. ಆ ದೃಷ್ಟಿಯಿಂದ ಅಲ್ಲಿ ಧಾನ್ಯದ ಅಂಗಡಿ ತೆಗೆದು ಧಾನ್ಯ ಹಂಚಲು ಅವಕಾಶ ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಹಾಗೆ ಅವಕಾಶಮಾಡಿ ಹೆಚ್ಚು ಅನ್ನ ಹಳ್ಳಿಯವರಿಗೆ ಅಭಾವ ಕಾಲದಲ್ಲಿ ಕೊಡಬೇಕು. ಧಾನ್ಯದ ಕೊರತೆಯನ್ನು ನೀಗಲು ವ್ಯವಸಾಯಕ್ಕೆ ಹೆಚ್ಚಿನ ಮಹತ್ವ ಕೊಡಬೇಕು. ಚಿಕ್ಕ ನೀರಾವರಿಗೆ ಈಗ ಕೊಡುತ್ತಿರುವ ಹಣ ಸಾಲದು, ಮಳೆ ಕಡಮೆ, ಇರುವ ಕಡೆ ಚಿಕ್ಕ ನೀರಾವರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, ಸಣ್ಣ ನೀರಾವರಿ ಬಾವಿಗಳಿಗೆ ಹೆಚ್ಚಿನ ಸಾಲ ಕೊಟ್ಟು ಬೆಳೆ ತೆಗೆಯಲು ಅವಕಾಶ ಕಲ್ಪಿಸಬೇಕು. ಬಿಜಾಪುರ ಜಿಲ್ಲೆಯಲ್ಲಿ ಒಂದು ವರ್ಷ ಮಳೆಬೆಳೆಯಾದರೆ ಇಡೀ ಮೈಸೂರಿಗೆ ಅದು ಸಾಕಾಗುವುದಲ್ಲದೆ ಮಹಾರಾಷ್ಟ್ರ ಮತ್ತು ಆಂಧ್ರಕ್ಕೂ ಕೂಡ ಕಳಿಸಬಹುದು. ಅಲ್ಲಿ ಒಳ್ಳೆಯ ಭೂಮಿ ಇದ್ದರೂ ಕೂಡ ಮಳೆಯ ಅಭಾವವಿದೆ. 5 ವರ್ಷಗಳಿಗೊಂದು ಸಲ ಅಲ್ಲಿ ಬೆಳೆಯಾದರೂ ತುಮಕೂರು ಮತ್ತು ಮೈಸೂರಿಗೆ ಕಳಿಸಬಹುದು. ಬಿಜಾಪುರದಿಂದ ಒಳ್ಳೆಯ ಜೋಳ ಕಳಿಸಿದ್ದರಿಂದ ಅದನ್ನು ತಿಂದು ಅನೇಕರು ಅದನ್ನು ಬೇಡುತ್ತಿದ್ದಾರೆ. ಆದುದರಿಂದ ಬಿಜಾಪುರ ಜಿಲ್ಲೆಯ ಬಾವಿ ಮತ್ತು ಕೆರೆಗಳಿಗೆ ಹೆಚ್ಚು ಗಮನಕೊಡಬೇಕು. ಅಲ್ಲಿಗೆ ಪಂಪುಸೆಟ್ಟುಗಳನ್ನು ಒದಗಿಸಬೇಕು, ವಿದ್ಯುಚ್ಛಕ್ತಿ ಒದಗಿಸಬೇಕು. ಅಲ್ಲದೆ ಟ್ರಾಕ್ಟರು ಮತ್ತು ಬುಲ್‌ಡೋಜರುಗಳ ಅವಶ್ಯಕತೆ ಇದೆ. ಅವುಗಳನ್ನು ಹೆಚ್ಚಾಗಿ ಒದಗಿಸಬೇಕು, ತಾಲ್ಲೂಕು ಬೋರ್ಡುಗಳ ಮೂಲಕ ಅವುಗಳ ಸಹಾಯ ನೀಡಬೇಕು, ರೊಕ್ಕ ಸಹ ಕೊಡಬೇಕು, ಒಳ್ಳೆಯ ಬೀಜ ಹೈಬ್ರಿಡ್ ಜೋಳ ಒದಗಿಸಬೇಕು. ಅದರ ವಿಷಯದಲ್ಲಿ ಕೆಲವರು ಮಾತನಾಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಅಗ್ರಿಕಲ್ಚರಲ್ ಆಫೀಸು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಹೈಬ್ರಿಡ್ ಜೋಳ ಬೇಕೆಂದರೆ ಒದಗಿಸುವುದಿಲ್ಲ, ಬೀಜ ಕೇಳಿದರೆ ಸಕಾಲದಲ್ಲಿ ದೊರೆಯುವುದಿಲ್ಲ, 5 ಕೆ. ಜಿ. ಜೋಳಕ್ಕೆ 40 ರೂಪಾಯಿ ಕೊಟ್ಟರೂ ನಮ್ಮ ಕಡೆ ಸಿಕ್ಕುವುದಿಲ್ಲ. ಇದಕ್ಕೆ ಸರಿಯಾಗಿ ಗಮನಕೊಡಬೇಕು.

ರಸ್ತೆಗಳಿಗೆ ಹಣ ಕಡಮೆ ಒದಗಿಸಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಬರಗಾಲದಲ್ಲಿ ಮಾಡಿದ ರಸ್ತೆ ಬಹಳ ಇವೆ, ಆದರಿಂದ ಭೂಮಿ ಸಹ ಹೋಗಿದೆ. ಆದರೆ ಆ ರಸ್ತೆಗಳು ಸರಿಯಾಗಿಲ್ಲ. ಬಾಗೇವಾಡಿ—ಮುದ್ದೆಬಿಹಾಳ ರಸ್ತೆ ಎರಡು ತಾಲ್ಲೂಕುಗಳಿಗೆ ಸಂಬಂಧಪಟ್ಟಿದೆ, ಅದರಿಂದ 8 ಹಳ್ಳಿಗಳಿಗೆ ಅನುಕೂಲವಿದೆ, ನಾಲೆಗಳು ಬಹಳವಿರುವುದರಿಂದ ಕಾರುಗಳಲ್ಲಿ ಮಂತ್ರಿಗಳು ಆ ಕಡೆ ಬರಲು ಸಾಧ್ಯವಿಲ್ಲ. ಈ ರಸ್ತೆ ಮಾಡಿದರೆ 10 ಮೈಲ ಬಳಸಿಕೊಂಡು ಬರುವುದು ತಪ್ಪುತ್ತದೆ. ಇದನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರು ತೆಗೆದುಕೊಂಡರೆ ಅನುಕೂಲ. ಇದನ್ನು ತೆಗೆದುಕೊಳ್ಳಬೇಕು.

ನಮ್ಮಲ್ಲಿರುವ ಸಿವಿಲ್ ಆಸ್ಪತ್ರೆಗೆ ಇಡೀ ಜಿಲ್ಲೆಯ ಜನ ಬರುತ್ತಾರೆ. ಅಲ್ಲಿ ರೋಗಿಗಳಿಗೆ ನಿಲ್ಲುವುದಕ್ಕೆ ಜಾಗವಿಲ್ಲ, ನೆಲದಮೇಲೆ ಹಾಸಿಗೆ ಹಾಕುತ್ತಾರೆ. ಆರೋಗ್ಯ ಶಾಖೆ ಮಂತ್ರಿಗಳಿಗೆ ಇದನ್ನು ತೋರಿಸಿದೆ. ಅಲ್ಲಿ ಇನ್ನೂ ಸ್ವಲ್ಪ ಕಟ್ಟಡ ಕಟ್ಟಿಸಲು ಸಿದ್ಧವಾಗಿದ್ದಾರೆ. ಅದನ್ನು ಗಮನಿಸಿ ಅಂಥ ದೊಡ್ಡ ಊರಿನಲ್ಲಿ ಆರೋಗ್ಯ ವ್ಯವಸ್ಥೆ ಸರಿಯಾಗಿ ಮಾಡಬೇಕು. ಆ ಸಿವಿಲ್ ಆಸ್ಪತ್ರೆಯಲ್ಲಿ ಇಡೀ ಜಿಲ್ಲೆಗೆ ಒಬ್ಬ ಲೇಡಿ ಡಾಕ್ಟರಿದ್ದಾರೆ, ಅವರೇ ರಾತ್ರಿಹಗಲು ಡೆಲವರಿ ಕೇಸುಗಳನ್ನು ನೋಡಲು ಹೋಗಿ ಬೇಜಾರುಪಡುತ್ತಿದ್ದಾರೆ. ಆದುದರಿಂದ ಅಲ್ಲಿಗೆ ಇನ್ನೊಬ್ಬರು ಲೇಡಿ ಡಾಕ್ಟರನ್ನು ಕೊಡಬೇಕು. ಮೊದಲು ಒಬ್ಬರಿದ್ದರು, ಅವರು ಅಲ್ಲಿಂದ ಹೊರಟುಹೋದಮೇಲೆ ಅವರು ಜಾಗಕ್ಕೆ ಯಾರನ್ನೂ ಹಾಕಿಲ್ಲ.

ಹಿಂದಿನ ಬಜೆಟ್ ಭಾಷಣದಲ್ಲಿ ಪಿ ಎಸ್ ಸಿ ಹೆಣ್ಣುಮಕ್ಕಳಿಗೆ ಜಾಗವನ್ನು ಮೀಸಲಾಗಿಡಬೇಕೆಂದು ಹೇಳಿದ್ದೆ, ಅದಕ್ಕೆ ಗಮನ ಕೊಟ್ಟಂತೆ ಕಾಣಲಿಲ್ಲ. ಈಗ ಹೆಣ್ಣುಮಗಳೇ ಪ್ರಧಾನಮಂತ್ರಿಯಾಗಿದ್ದಾರೆ, ಇಂಗ್ಲೆಂಡಿನಲ್ಲಿ ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯವಿದೆ. ಅದರಂತೆ ಇಲ್ಲೂ ಕೊಟ್ಟು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಹೆಣ್ಣುಮಕ್ಕಳಿಗೆ ಸ್ಥಾನ ಕೊಡಬೇಕು. ಹೆಣ್ಣುಮಕ್ಕಳಲ್ಲಿ ಜಡ್ಜಿಗಳಾಗಲಿ ಅಥವ ಮುನ್ಸೀಫರಾಗಲಿ ಯಾರು ಇಲ್ಲ, ಪಿ.ಎಸ್.ಸಿ.ಯಲ್ಲಿ ಹೆಣ್ಣುಮಕ್ಕಳು ಮೆಂಬರಾಗಲು ಅವಕಾಶ ಮಾಡಿದರೆ ಆಗ ಹೆಂಗಸರು ಜಡ್ಜಿ ಮತ್ತು ಮುನ್ಸೀಫರಾಗಲು ಅವಕಾಶವಾಗುತ್ತದೆ. ಮುಂದೆ ಆದರೂ ಕೂಡ ಅದಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

(ಶ್ರೀಮತಿ ಸುಶೀಲಾಬಾಯಿ ಷಹ)

10-30 A.M.

ಇನ್ನು ಗವರ್ನಮೆಂಟ್ ಡೈರಿಯಿಂದ ಹಾಲು ಒದಗಿಸುವ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಗವರ್ನಮೆಂಟ್ ಡೈರಿಯಿಂದ ಸಪ್ಲೈ ಮಾಡುವ ಹಾಲನ್ನು ನಾನು ನೋಡಿದ್ದೇನೆ. ಬೊಂಬಾಯಿಯಲ್ಲಿ ಕೊಡುವ (Array Milk Colony) ಆರೇ ಮಿಲ್ಕ ಕಾಲನಿ ಹಾಲು ಮನೆಯಲ್ಲಿಯ ಹಸು ಎಮ್ಮೆ ಹಾಲಿಗಿಂತ ಚೆನ್ನಾಗಿರುತ್ತದೆ. ಇಲ್ಲಿ ಬೆಂಗಳೂರಿನಲ್ಲಿ ನಮ್ಮ ಲೆಜಿಸ್ಲೇಟರ್ಸ ಹೋಂಕ್ಕೆ ಗವರ್ನಮೆಂಟ್ ಡೈರಿ ಹಾಲು ಬರುತ್ತದೆ. ಈ ಹಾಲಿನಲ್ಲಿ ಎಷ್ಟು ಪರ್ಸೆಂಟ್ ಬೆಣ್ಣೆ ಬರುತ್ತದೆ! ಈ ಹಾಲಿನಲ್ಲಿ ಪೌಡರ್ ಹಾಲು ಮತ್ತು ಆಕಳ ಹಾಲು ಸೇರಿಸಿರುತ್ತಾರೆ. ಹಾಲು ಅಷ್ಟು ಚೆನ್ನಾಗಿ ಇರುವುದಿಲ್ಲ. ಆದುದರಿಂದ ಹಾಲಿನ ಡೈರಿ ವಿಷಯದಲ್ಲಿ ಹೆಚ್ಚು ಗಮನ ಕೊಟ್ಟು ಒಳ್ಳೆಯ ಹಾಲು ದೊರೆಯುವ ಹಾಗೆ ಮಾಡಬೇಕು. ಡೈರಿಗೆ ಎಲ್ಲ ಸಹಾಯ ಮಾಡಿ ಅನುಕೂಲತೆ ಮಾಡಿಕೊಡಬೇಕು. ಹಾಲು ಎಲ್ಲರಿಗೂ ಮುಖ್ಯ ಆಹಾರವಾಗಿದೆ. ಒಳ್ಳೇ ಹಾಲು ದೊರೆಯುವುದಕ್ಕೆ ಸರಕಾರ ಗಮನ ಕೊಡಬೇಕು ಎಂದು ಸೂಚನೆ ಮಾಡುತ್ತೇನೆ.

ಇಲ್ಲಿ ಒಂದು ಕ್ಯಾಂಟೀನ ಸರಕಾರ ನಡೆಸುತ್ತಿದ್ದಾರೆ. ಈ ಕ್ಯಾಂಟೀನ ನಡೆಸುವ ಕೆಲಸವನ್ನು ಹೆಣ್ಣು ಮಕ್ಕಳಿಗೆ ಬಿಟ್ಟು ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಬೇರೆ ಕಡೆಗೆ ಇಂಥ ಕ್ಯಾಂಟೀನುಗಳನ್ನು ಹೆಣ್ಣು ಮಕ್ಕಳು ನಡೆಸುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಈ ಕೆಲಸ ಚೆನ್ನಾಗಿ ಬರುತ್ತದೆ. ಆದುದರಿಂದ ಮಹಿಳಾ ಉದ್ಯೋಗಿ ಮಂಡಲಕ್ಕೆ ಈ ಕ್ಯಾಂಟೀನ ನಡೆಸುವುದನ್ನು ಕೊಡಬೇಕು. ಮಹಿಳೆಯರು ಒಳ್ಳೇ ಆಹಾರ ತಯಾರ್ಮಾಡಿ ಕೊಡುತ್ತಾರೆ. ಈ ರೀತಿ ಮಹಿಳಾ ಉದ್ಯೋಗ ಮಂಡಳಕ್ಕೆ ಕ್ಯಾಂಟೀನ ನಡೆಸುವುದನ್ನು ಕೊಡುವುದರಿಂದ ಎಲ್ಲರಿಗೆ ಒಳ್ಳೇ ಆಹಾರ ಪದಾರ್ಥ ದೊರೆಯಲು ಅನುಕೂಲ ವಾಗುತ್ತದೆ. ಆದುದರಿಂದ ಹೆಣ್ಣುಮಕ್ಕಳ ಉದ್ಯೋಗ ಮಂಡಳಕ್ಕೆ ಕ್ಯಾಂಟೀನ ನಡೆಸುವುದಕ್ಕೆ ಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಅಧ್ಯಕ್ಷರೇ, ಈ ಸಾರಿ ಈ ಬಜೆಟ್ಟು ಬಹಳ ನಿರಾಶಾದಾಯಕವಾಗಿದೆ. ಈ ಬಜೆಟ್ಟಿನಲ್ಲಿಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ನಮ್ಮ ಆರ್ಥಿಕ ಮಂತ್ರಿಯವರು ತಮಗೆ ತೋರಿದ ಹಾಗೆ ಬರೆದು ಇದು ಸರ್ಪಲಸ್ ಬಜೆಟ್ ಎನ್ನುವ ತರಹ ತೋರಿಸಿದ್ದಾರೆ. ಕಳೆದ ಎಂಟು ಹತ್ತು ದಿವಸಗಳಲ್ಲಿ ದಿನಕ್ಕೆ ಒಂದು ತೆರಿಗೆ ಹಾಕುವ ಬಿಲ್ಲನ್ನು ತಂದು ಈ ವರ್ಷ ಹತ್ತು ಹನ್ನೆರಡು ಕೋಟಿ ರೂಪಾಯಿ ಹೆಚ್ಚಿಗೆ ತೆರಿಗೆಯನ್ನು ನಮ್ಮ ರೈತರ ಮೇಲೆ ಹಾಕಿದ್ದಾರೆ. ಗಾಂಧೀಜಿಯವರು ಒಂದು ಮಾತು ಹೇಳುತ್ತಾ ಇದ್ದರು. ಎಲ್ಲರ ಹೊಟ್ಟೆಗೆ ಆಹಾರ ಪದಾರ್ಥ ಉತ್ಪಾದನೆ ಮಾಡಿಕೊಡತಕ್ಕಂಥವನು ರೈತನು. ರೈತನ ಬೆನ್ನು ತಟ್ಟಬೇಕು, ರೈತನ ಮೇಲೆ ಹೆಚ್ಚಿಗೆ ಕರ ಭಾರ ಹಾಕಕೂಡದು ಎಂದು ಹೇಳುತ್ತಿದ್ದರು. ಒಂದು ವೇಳೆ ಈಗ ಗಾಂಧೀಜಿಯವರು ಬದುಕಿದ್ದರೆ ಇದನ್ನು ನೋಡಿ ಏನು ಅನ್ನುತ್ತಿದ್ದರೋ ? ರೈತನಿಗೆ ಮಾತನಾಡಲು ಬರುವುದಿಲ್ಲ, ರೈತರಲ್ಲಿ ಸಂಘಟನೆಯಿಲ್ಲ ಎಂದು ಅವನ ಮೇಲೆ ದಿನಕ್ಕೊಂದು ಕರ ಹೇರುವ ಕ್ರಮ ಉಂಟು ಮಾಡತಕ್ಕ ಇವರ ನೀತಿ ಅಂಥ ಗುರುವಿನ ಶಿಷ್ಯ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸತ್ಯವಾಗಿದೆ ಎಂಬುದು ಗೊತ್ತಿಲ್ಲ. ದೇಶದಲ್ಲಿ ಇಂದು ಆಹಾರದ ಪ್ರಶ್ನೆ ಇದೆ, ಬಟ್ಟೆಯನ್ನು ಪ್ರಶ್ನೆ ಇದೇ ದೇಶ ಬಹಳ ಕಷ್ಟದಲ್ಲಿದೆ. ಮೈಸೂರು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅದರಲ್ಲೂ ನಮ್ಮ ಪ್ರಾಂತ್ಯದಲ್ಲಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ, ಕುಡಿಯುವುದಕ್ಕೆ ನೀರಿಲ್ಲ ತಿನ್ನುವುದಕ್ಕೆ ಅನ್ನವಿಲ್ಲ. ಆದುದರಿಂದ ಹಳ್ಳಿಗಳಲ್ಲಿರತಕ್ಕಂಥ ವಯಸ್ಕರು ಹಳ್ಳಿಗಳಲ್ಲಿ ನಿಲ್ಲಲಾರದೆ ಭದ್ರಾವತಿ ಬೆಂಗಳೂರು ಮುಂತಾದ ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ. ನೀರಿನ ಅಭಾವದ ಜೊತೆಗೆ ರೈತರು ನಮ್ಮಲ್ಲಿರುವ ರಾಸುಗಳನ್ನು ನೂರು ರೂಪಾಯಿಗಳಿಗೆ ಮಾಡಿಕೊಂಡು ಬಿಟ್ಟಿದ್ದಾರೆ. ದೇವರ ದಯದಿಂದ ಮುಂಗಾರಿ ಮಳೆಯಾದರೆ ಇಂದು ಹಳ್ಳಿಯಲ್ಲಿ ಭೂಮಿ ಉಳುಮೆ ಮಾಡುವುದಕ್ಕೆ ರೈತರ ಹತ್ತಿರ ರಾಸುಗಳಿಲ್ಲ. ಮೂರು ನಾಲ್ಕು ವರ್ಷಗಳ ಹಿಂದೆ ನಮ್ಮ ಮುಖ್ಯ ಮಂತ್ರಿಗಳು ಒಂದು ವಿಷಯ ಹೇಳಿದ್ದರು. ಜಪಾನ ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಂಡು ಸುಲಭವಾದ ದರದಲ್ಲಿ ಉಳುಮೆ ಮಾಡುವ ನೇಗಿಲು ತಯಾರ್ಮಾಡುವುದಕ್ಕೆ ಹೆಬ್ಬಾಳದಲ್ಲಿ ಒಂದು ಕಾರಖಾನೆ ಸ್ಥಾಪನೆಯಾಗುತ್ತದೆ ಎಂದು ಹೇಳಿದ್ದರು. ಆದರೆ ಆ ಕಾರಖಾನೆಯಾವಾಗ ಸ್ಥಾಪನೆ ಯಾಗುವುದೋ ಗೊತ್ತಿಲ್ಲ. ಹೆಚ್ಚು ಆಹಾರ ಬೆಳೆಯುವುದಕ್ಕೋಸ್ಕರ ಇರತಕ್ಕಂಥ ಗೋಮಾಳವನ್ನು ಈಗಾಗಲೆ ಹಂಚಿದ್ದಾರೆ.

ರೈತರ ಹತ್ತಿರ ರಾಸುಗಳಿಲ್ಲ. ಇಂಥ ಕಷ್ಟದ ಪರಿಸ್ಥಿತಿ ಉಂಟಾಗಿದೆ. ಇದಲ್ಲದೆ ರೇಷನ್ ವಿಚಾರದಲ್ಲಿ ಕೂಡ ಬೆಂಗಳೂರು ಕೆ.ಜಿ.ಎಫ್. ಇಂಥ ದೊಡ್ಡ ಪಟ್ಟಣಗಳಿಗೆ ಮಾತ್ರ ಸರಕಾರ ರೇಷನ್ ಕೊಡುವುದಕ್ಕೆ ಬದ್ಧವಾಗಿದೆ ಹಳ್ಳಿಗಾಡಿಗೆ ರೇಷನ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಬಂದಿದ್ದಾರೆ. ನಮ್ಮ ಪ್ರಾಂತದ ಸ್ಥಿತಿಗತಿ ತಿಳಿಸುವುದಾದರೆ ರೈತರಿಗೆ ತಿನ್ನುವುದಕ್ಕೆ ಒಂದು ಕಾಳು ಧಾನ್ಯ ಇಲ್ಲದೆ ರೈತ ಜನ ತಾಪತ್ರಯ ಪಡುತ್ತಿದ್ದಾರೆ. ಬೆಂಗಳೂರು ನಗರ ಎಷ್ಟು ಪ್ರಾಮುಖ್ಯವೋ, ದೇಶಕ್ಕೆ ಅನ್ನ ಕೊಡತಕ್ಕಂಥ ರೈತನ ಹಳ್ಳಿ ಕೂಡ ಅಷ್ಟೇ ಪ್ರಾಮುಖ್ಯವಾಗಿದೆ. ಆದುದರಿಂದ ಹಳ್ಳಿಗಾಡಿಗೆ ದಿನಸಿ ಸಪ್ಲೈ ಮಾಡುವುದು ಜರೂರಾಗಿ ಮಾಡತಕ್ಕದ್ದಾಗಿದೆ. ಅರ್ಥಿಕ ಮಂತ್ರಿಗಳು ಒಂದು ಮಾತು ಹೀಗೆ ಹೇಳಿದರು. ತೆರಿಗೆ ಹಾಕದೆ ನಾವು ಸರಕಾರ ಹೇಗೆ ನಡೆಸುವುದು, ಯೋಜನೆಗಳನ್ನು ಹೇಗೆ ಕಾರ್ಯಗತ ಮಾಡುವುದು ಎಂದು ಕೇಳಿದರು. ಸ್ವಾಮಿ, ಅರ್ಥ ಮಂತ್ರಿಗಳು ಇನ್ನೂ ವಯಸ್ಸಿನಲ್ಲಿ ಚಿಕ್ಕವರು ಅವರಿಗೆ ಅನುಭವ ಸಾಕಷ್ಟು ಇಲ್ಲ ಎಂದು ಈ ಮಾತು ಹೇಳುತ್ತೇನೆ. ಈಗ ತಾನೆ ನನ್ನ ಸ್ನೇಹಿತರಾದ ದಯಾನಂದ ಕಲ್ಲೆಯವರು ಹೇಳಿದರು. ಪ್ರೊಹಿಬಿಷನ್ ಇರಬೇಕು ಎಂದು ಗಾಂಧೀಜಿಯವರು ಹೇಳಿದ್ದು ನಿಜ. ನಾವಾದರೂ ಕೂಡ ಕುಡಿತ ಕೆಟ್ಟದ್ದು ಎಂದು ಹೇಳತಕ್ಕ ಕಾಂಗ್ರೆಸ್ಸಿಗರಿಗಿಂತ ಕಡಿಮೆ ಇಲ್ಲ. ಆದರೆ ವಾಸ್ತವವಾಗಿ ಸಂಗತಿ ಏನು ಇದೆ ದೇಶದಲ್ಲಿ ಎಂಬುದನ್ನು ನೋಡಬೇಕು. ನಾನು ವಾಸವಾಡತಕ್ಕ ಊರಿನಲ್ಲಿ ಆರು ಸಾವಿರ ಜನ ಇದ್ದಾರೆ. ಈ ಪಟ್ಟಣದಲ್ಲಿ ಸುಮಾರು 800 ಬೂಟ್ ಪಾಲಿಶ್ ಬಾಟಲುಗಳು ಒಂದು ಬಾಟಲಿಗೆ ಒಂದೂಕಾಲು ರೂಪಾಯಿಯಂತೆ 800 ಶೀಶೆಗಳು ಈ ಊರಿನಲ್ಲಿ ಖರ್ಚಾಗುತ್ತವೆ. ನಮ್ಮ ಒಂದು ತಾಲ್ಲೂಕಿನಲ್ಲಿ ಐದಾರು ಸಾವಿರ ಬಾಟಲ್ ಖರ್ಚಾಗುತ್ತವೆ. ಅದಕ್ಕೆ ಹುಣಸೆ ಹಣ್ಣು ಹುಳಿ ಉಪ್ಪು ಏನೇನೋ ಕೂಡಿಸಿ ಸಾರಾಯಿ ತಯಾರ್ಮಾಡಿ ಅಂಥಾದ್ದನ್ನು ಕುಡಿದು ಸತ್ತವರು ಇದ್ದಾರೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ? ಈ ರೀತಿ ಅನೀತಿಯಿಂದ ಸಾವಿರಾರು ರೂಪಾಯಿ ಖರ್ಚಾಗುತ್ತಿದೆ. ಜನರಿಗೆ ಒಳ್ಳೇ ಪೌಷ್ಟಿಕ ಆಹಾರ ದೊರೆಯುತ್ತಿಲ್ಲ. ಒಂದು ತತ್ವಕ್ಕೆ ಕಟ್ಟು ಬಿದ್ದು ಸರಕಾರಕ್ಕೆ ಬರತಕ್ಕ ವರಮಾನ ಬಿಟ್ಟುಕೊಡುವುದು ಸರಿಯೇ ? ಹೆಂಡದಲ್ಲಿ ಕೂಡ ಒಂದು ಒಳ್ಳೇ ಅಂಶ ಇದೆ ಎಂದು ಹೇಳತಕ್ಕ ಜನ ಇದ್ದಾರೆ. ಒಳ್ಳೇ ಹೆಂಡ ದೊರೆಯುವ ಹಾಗೆ ಮಾಡಿ ಆರೋಗ್ಯ ಕೆಡದಂತೆ ನೋಡಿಕೊಂಡು ಹೆಂಡದ ಬಾಬಿನಿಂದ ವರಮಾನ ತೆಗೆದುಕೊಳ್ಳುವುದಕ್ಕೆ ಸರಕಾರಕ್ಕೆ ಏನು ಕಷ್ಟ ನನಗೆ ಅರ್ಥವಾಗುವುದಿಲ್ಲ. ಇಂದು ಗಾಂಧೀಜಿಯವರು ಬದುಕಿದ್ದರೆ ಕಣ್ಣಾರೆ ಅವರು ನೋಡಿದ್ದರೆ ಹೇಳುತ್ತಿದ್ದರು. ಅವರು ಒಂದು ಸಲ ಹೇಳಿದ್ದು ತಪ್ಪು ಎಂದು ಕಂಡು ಬಂದರೆ ಅದನ್ನು ಅನುಸರಿಸಬಾರದು, ನಾನು ಬಹಳ ದೊಡ್ಡ ತಪ್ಪು ಮಾಡಿದ್ದೇನೆ ಇದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಿದ್ದರು. ಅವರು ಜೀವಂತವಾಗಿ ಇಂದು ಇದ್ದರೆ ಹೀಗೆ ಹೇಳುತ್ತಿದ್ದರು. ಪ್ರತಿಷ್ಠೆಗಾಗಿ ಆದಾಯ ಬರತಕ್ಕ ಬಾಬು ಬಿಟ್ಟುಕೊಡುವುದು ಸರಿಯಲ್ಲ. ಹೆಂಡ ಕುಡಿಯುವುದು ಕೆಟ್ಟದ್ದು ಎಂದು ಪ್ರಚಾರ ಬೇಕಾದರೆ ಮಾಡಬಹುದು. ಇಂದು ಪಾನನಿರೋಧ ನೀತಿಯನ್ನು ಕೈಬಿಡುವುದಾದರೆ ಹತ್ತು ಹನ್ನೆರಡು ಕೋಟಿ ರೂಪಾಯಿ ಬಹು ಸುಲಭವಾದ ರೀತಿಯಲ್ಲಿ ವರಮಾನ ಬರುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ. ಇನ್‌ಕಂ ಟ್ಯಾಕ್ಸ್, ಸೂಪರ್ ಟ್ಯಾಕ್ಸ್, ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕಬಹುದು. ಒಂದು ಸಂಸಾರಕ್ಕೆ ಅಗತ್ಯವಾಗಿ ವರ್ಷಕ್ಕೆ ಬೇಕಾದ ಖರ್ಚು ಬಿಟ್ಟು ಜಾಸ್ತಿ ಸಂಪಾದನೆ ಮಾಡಿದ ಮೇಲೆ ಅದಕ್ಕೆ ತೆರಿಗೆ ಹಾಕಿದರೆ ಅದು ಯಾರಿಗೂ ತೊಂದರೆಯಾಗುವುದಿಲ್ಲ. ಹೆಚ್ಚು ಸಂಪಾದನೆ ಮಾಡತಕ್ಕಂಥವರು ತೆರಿಗೆ ಕೊಡುತ್ತಾರೆ. ವರ್ತಕರು ನಿಮ್ಮ ಪಾರ್ಟಿ ಫಂಡಿಗೆ ಹಣ ಕೊಡುತ್ತಾರೆ ಎಂದು ಅವರ ಮೇಲೆ ದಾಕ್ಷಿಣ್ಯ ತೋರಿಸಿ ತೆರಿಗೆ ಕಟ್ಟುನಿಟ್ಟಾಗಿ ವಸೂಲ್ಮಾಡುವುದನ್ನು ಬಿಟ್ಟು ಕೊಟ್ಟು ಬಡವನ ಮೇಲೆ ತೆರಿಗೆ ಹೊರೆ ಹೇರುವುದು ಸುತರಾಂ ನ್ಯಾಯವಾದುದು ಅಲ್ಲ ಎಂದು ಹೇಳಲು ನಾನು ಇಷ್ಟಪಡುತ್ತೇನೆ. ಇನ್ನು ಕೈಗಾರಿಕೆಗಳು. ಇದರಲ್ಲಿ ಮಾತನಾಡುವುದಕ್ಕಿಂತ ಮಾತನಾಡದಿರ ತಕ್ಕಂಥದ್ದು ಬಹಳ ಒಳ್ಳೆಯದೆಂದು ನನಗನ್ನಿಸುತ್ತದೆ. ನಮ್ಮ ಮಾನ್ಯ ಮಂತ್ರಿಯವರು ಹೇಳಿದ ಹಾಗೆ ಹಿಂದಿನ ರಾಜರುಗಳ ಆಡಳಿತ ಕಾಲದಲ್ಲಿ ಮೈಸೂರು ಕೈಗಾರಿಕೆಯಲ್ಲಿ ಬಹಳ ಮುಂದು ವರಿದಿದ್ದು, ಅನೇಕ ಕೈಗಾರಿಕೆಗಳನ್ನು ದೂರದರ್ಶಿತ್ವವಿದ್ದಂತಹ ರಾಜರು ಮತ್ತು ಅವರ ಸಲಹೆಗಾರರದಂತಹ ಆಡಳಿತಗಾರರು ಏರ್ಪಾಡು ಮಾಡಿದ್ದರು. ಇವತ್ತು ನಮ್ಮಲ್ಲಿ ಏನಾಗಿದೆ ಎಂದರೆ, ಅದರಲ್ಲೂ ರಾಜ್ಯಗಳ ಪುನರ್‌ವಿಂಗಡಣೆಯಾದ ಮೇಲೆ ಒಂದು ಹೊಸ ಕೈಗಾರಿಕೆ ಇಲ್ಲದಂತಾಗಿದೆ, ಅದರಲ್ಲೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಮಾತನಾಡಿಬಿಡುತ್ತಾರೆ. ಅವರು ಮಾತನಾಡುವುದರಿಂದ ಇಷ್ಟೆಲ್ಲಾ ಅನ್ಯಾಯವಾಗುತ್ತಿದೆ. ಈಗ ಅವರು ಕೊಟ್ಟರೆ ಕೊಡಲಿ, ಬಿಟ್ಟರೆ ಬಿಡಲಿ ಎಂದು ಹೇಳುತ್ತಾರೆ. ಆದರೆ ಇದಕ್ಕೆ ಸ್ವಲ್ಪ ಹೊಡೆದಾಡಬೇಕು. ಇಲ್ಲಿ ಮಾನ್ಯ ಸ್ನೇಹಿತ ರನೇಕರು, ಮದ್ರಾಸಿನ ಮಂತ್ರಿಯವರು ಕೈಗಾರಿಕೆಗಳಿಗೋಸ್ಕರ ಪ್ರತಿಯೊಂದು ರಿಕಾರ್ಡುಗಳನ್ನೂ ಡೆಲ್ಲಿಗೆ ತೆಗೆದುಕೊಂಡು ಹೋಗಿ, ಹೊಸ ಹೊಸ ಕೈಗಾರಿಕೆಗಳಿಗೆ ಅವಕಾಶ ಮಾಡಿಕೊಡು

(ಶ್ರೀ ಟಿ. ಎನ್. ಮಾದಪ್ಪಗೌಡ)

ತ್ತಾರೆ. ಆದರೆ ಮೈಸೂರಿಗೆ ಯೋಗ್ಯತೆ ಇಲ್ಲದಿರುವುದಕ್ಕೆ ಕಾರಣ ಏನು ? ಎಂದು ನಾನು ಪ್ರಶ್ನೆ ಮಾಡುತ್ತೇನೆ. ಅದಕ್ಕೆ ಮೈಸೂರಿನ ಪ್ರಶ್ನೆಯನ್ನು ಒತ್ತಾಯ ಮಾಡಿ ಹೇಳತಕ್ಕಂತವರು ಇವತ್ತು ಕೇಂದ್ರದಲ್ಲಿ ಯಾರೂ ಇಲ್ಲವಾಗಿದೆ. ಅಲ್ಲಿ ಮಂತ್ರಿಯಾಗಲು ಯೋಗ್ಯತೆ ಇರುವ, ನಮ್ಮ ಪ್ರತಿನಿಧಿಗಳು ಹಲವಾರು ಜನರಿದ್ದಾರೆ. ಆದರೆ ಇವರು ಪಾರ್ಟಿಯ ಬಿರುಸಿನ ಕಾರಣದಿಂದಲೋ, ಅಥವಾ ಮತ್ತಾವ ಕಾರಣದಿಂದಲೋ ಸುಮ್ಮನಿರುತ್ತಾರೆ. ಇದರಿಂದಾಗಿ ನಾವು ಕೇಂದ್ರದಿಂದ ನಮಗೆ ನೀತಿಯನ್ನು ಸಿಗುವಂತೆ ನಾವು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸ ಇಲಾಖೆಯ ವಿಚಾರ ತೆಗೆದುಕೊಂಡರೆ, ಇದಂತೂ ತೀರಾ ಅಧೋಗತಿಗೆ ಬಂದಿದೆ. ಈ ಹೊಸತು ಫ್ರೀ ಸೆಕೆಂಡರಿ ವಿದ್ಯಾಭ್ಯಾಸ ಕೊಡುತ್ತೇವೆಂದು ಮಾನ್ಯ ವಿದ್ಯಾ ಮಂತ್ರಿಗಳು ಹೇಳುತ್ತಾರೆ. ಈಗ ಏನಾಗಿದೆ ಎಂದರೆ ಅನೇಕ ಮಕ್ಕಳಿಗೆ ಹೈಸ್ಕೂಲಿನಲ್ಲಿ ಮಾಡಿರ ತಕ್ಕಂತಹ ವಿಚಿತ್ರವಾದ ಹೇಳಿಕೆಯನ್ನು ನೋಡಿದರೆ ಪ್ರತಿಯೊಬ್ಬ ಹುಡುಗನಿಗೂ ಸಾಕಷ್ಟು ಉಪಾಧ್ಯಾಯರುಗಳನ್ನು ಕೊಟ್ಟಿಲ್ಲ. ಅವರಿಗೆ ಕಟ್ಟಡಗಳು ಸರಿಯಾಗಿ ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಪರ್ಸನಲ್ ಸೂಪರ್‌ವಿಜನ್ ಅಂದರೆ ಏನು ? ಒಬ್ಬ ಉಪಾಧ್ಯಾಯನು 20-25 ವಿದ್ಯಾರ್ಥಿಗಳಿಗೆ ನಿಗಾ ಕೊಟ್ಟು ಹೇಳಬಲ್ಲ. ಇವತ್ತು ಕುರಿ ದೊಡ್ಡಿ ತರಹ ಮಾಡಿಬಿಟ್ಟು ಮಕ್ಕಳನ್ನೆಲ್ಲಾ ಕಳಿಸಿದರೆ ಅಲ್ಲಿ ಒಳ್ಳೆಯ ವಿದ್ಯಾಭ್ಯಾಸ ಹೇಗೆ ಬರಬೇಕು ? ಅದು ಸಾಧ್ಯವಿಲ್ಲ. ಇವತ್ತು ಏನು ಮಾಡಿದ್ದಾರೆಂದರೆ, ಒಂದೆರಡು ಸಬ್‌ಜೆಕ್ಟ್‌ಗಳಲ್ಲಿ ಫೇಲ್ ಆದಂತವರು ಫೀಸ್ ಕೊಡಬೇಕಾಗಿದೆ. ಈಗ ಪಾಸಾಗುವ ವಿದ್ಯಾರ್ಥಿಗಳೇ ಕಡಿಮೆ. ಹೋದ ಸಾರಿ ಎಸ್.ಎಸ್.ಎಲ್.ಸಿ.ಯಲ್ಲಿ ನಮ್ಮ ಜಿಲ್ಲೆಯಲ್ಲಿ ಶೇಕಡಾ 8ರಷ್ಟು ಪಾಸ್‌ನ ಫಲಿತಾಂಶ ಬಂದಿತ್ತು. 92 ಮಂದಿ ಅನುತ್ತೀರ್ಣರಾಗಿದ್ದಾರೆ. ಇವರೆಲ್ಲಾ ಫೀಸ್ ಕೊಡಬೇಕಾಗಿದೆ. ಅವರು ಫೀಸ್ ಕೊಡಬೇಕಾದುದರಿಂದ ಪರೀಕ್ಷೆಗೆ ಕೂತು ಕೊಳ್ಳುವುದಕ್ಕೆ ಮುಂಚೆ ಕೂಡುವ ಯೋಗ್ಯತೆ ಇಲ್ಲದೆ ಪರೀಕ್ಷೆಗೆ ಕೂತುಕೊಳ್ಳುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿ ಅಲ್ಲಿ ಇದೆ. ಅಲ್ಲದೆ ವಿದ್ಯಾಭ್ಯಾಸ ಇಲಾಖೆಯಲ್ಲಿ ಬಹಳ ಪಕ್ಷಪಾತ ನಡೆಯುತ್ತದೆ. ಹಳೆಯ ಮೈಸೂರು, ಹೊಸ ಮೈಸೂರು ಎಂಬುದು. ಈಗ ಒಂದು ಮಾತನ್ನು ಹೇಳುತ್ತೇನೆ. ಈಗ 15 ಗೌರ್ನ್‌ಮೆಂಟ್ ಹೈಸ್ಕೂಲುಗಳ ಕಟ್ಟಡಗಳನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ 14 ಹೊಸದಾಗಿ ಮೈಸೂರಿನಲ್ಲಿ ವಿಲೀನವಾದ ಜಾಗಕ್ಕೆ ಹೋಗಿದೆ. ಒಂದೇ ಒಂದು ಬೋರಿಂಗ್ ಪೇಟೆ ತಾಲ್ಲೂಕಿನಲ್ಲಿ ಒಂದು ಹೈಸ್ಕೂಲು ಕೊಟ್ಟಿದ್ದಾರೆ. ನಾನು ಕಳೆದ ಸಾರಿ ಬಜೆಟ್ ಮೇಲೆ ಮಾತನಾಡುವಾಗ ಸರ್ಕಾರಕ್ಕೆ ಒಂದು ವಿಚಾರ ತಂದಿದ್ದೆ. ನಾಗಮಂಗಲದಲ್ಲಿ ಒಂದು ಸರ್ಕಾರಿ ಹೈಸ್ಕೂಲ್ ಇದೆ. ಅಲ್ಲಿ ಸುಮಾರು 800 ಜನ ಮಕ್ಕಳಿದ್ದಾರೆ. ಈಗ ಪೌರ ಸಭೆಯವರು ಜಾಗ ಕೊಟ್ಟಿದ್ದಾರೆ. ಈಗ ಜಾಗ ಸಾಲದೆ ತೊಂದರೆಯಾಗಿದೆ. ಸರ್ಕಾರಿ ಬಿಲ್ಡಿಂಗ್ ಕೊಡಬೇಕೆಂದು ಹೇಳುತ್ತಾರೆ; ಮತ್ತು ಅದೇ ತಾಲ್ಲೂಕಿನಲ್ಲಿ ಆದಿಚುಂಚನಗಿರಿ ಸ್ಥಳದಲ್ಲಿ 14 ವರ್ಷಗಳ ಹಿಂದೆ, ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿ ಒಂದು ಹೈಸ್ಕೂಲು ಕೊಟ್ಟರು. ಇವತ್ತಿನವರೆಗೆ ಅಲ್ಲಿನ ಶಾಸನ ಸಭಾಧ್ಯಕ್ಷರೂ ಕೂಡಾ ಎಷ್ಟು ಪ್ರಯತ್ನ ಮಾಡಿದರೂ ಅಲ್ಲಿ ಒಂದು ಸರ್ಕಾರಿ ಹೈಸ್ಕೂಲನ್ನು ಕೊಡುವುದಕ್ಕೆ ಸರ್ಕಾರಕ್ಕೆ ಆಗಲಿಲ್ಲ. ಇಂಥ ಇಬ್ಬಂದಿ ನೀತಿಯನ್ನು ಅನುಸರಿಸುವುದು ಒಳ್ಳೆಯದಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇಲ್ಲಿ ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ಇವತ್ತು ಎಷ್ಟು ಹಣ ಬಂದರೂ ಕೂಡ ಸಾಕಾಗುವುದಿಲ್ಲ. ಹಿಂದೆ ಹಳೆಯ ಮೈಸೂರಿನಲ್ಲಿ ನಾಲ್ಕು ಕೋಟಿ ರೂಪಾಯಿ ಉತ್ಪತ್ತಿ ಇದ್ದಂತಹ ಕಾಲದಲ್ಲಿ, ಈ ರಾಜ್ಯವು ರಾಮರಾಜ್ಯವಾಗಿತ್ತು ಎಂದು ಮಹಾತ್ಮಾ ಗಾಂಧೀಜಿಯವರ ಬಾಯಲ್ಲಿ ಹೊಗಳಿಸಿಕೊಂಡ ರಾಜ್ಯ, ಇವತ್ತು 133 ಕೋಟಿ ಉತ್ಪತ್ತಿ ಬಂದರೂ ಕೂಡ ಎಲ್ಲಿ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಇವರಿಗೆ ಒಳ್ಳೆಯ ರೂಪದಲ್ಲಿ ಖರ್ಚುಮಾಡುವುದಕ್ಕೆ ಗೊತ್ತಿಲ್ಲ. ಯೋಜನೆ ಮಾಡುವುದರ ಜೊತೆಗೆ ಸಾವಿರಾರು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಅವರಿಗೆ ಸಾವಿರಾರು ರೂಪಾಯಿ ಸಂಬಳ ಕೊಟ್ಟುಕೊಂಡು, ದುಡ್ಡನ್ನೆಲ್ಲಾ ಖರ್ಚು ಮಾಡುತ್ತಾ ಇದ್ದರೆ ಇವರಿಗೆ ಹೇಗೆ ಅಭಿವೃದ್ಧಿ ಕೆಲಸಗಳಾಗುತ್ತದೆ ಮತ್ತು ಜನಗಳಿಗೆ ಅನುಕೂಲವಾಗುತ್ತದೆ ? ಇದನ್ನೆಲ್ಲಾ ಸ್ವಲ್ಪ ಯೋಚನೆ ಮಾಡಬೇಕು. ಈ ಸಂಬಂಧದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ, ಅದೇನೆಂದರೆ—ಹಿಂದೆ ಚಕ್ರಪುರದಲ್ಲಿ ಬಕಾಸುರ ಇದ್ದ. ಬಕಾಸುರನಿಗೆ ಊರಿನವರೆಲ್ಲಾ ಏರ್ಪಾಡು ಮಾಡಿಕೊಂಡು ಬಂಡಿ ಬಂಡಿಗಟ್ಟಲೆ ಆಹಾರ ಮತ್ತು ಒಬ್ಬ ಮನುಷ್ಯನ ಸಮೇತ, ಆಹಾರವಾಗಿ, ಅವನಿಗೆ ಒದಗಿಸುತ್ತಿದ್ದರು. ಅಲ್ಲಿ ಭೀಮಾವತಾರ ಆಗುವವರೆಗೆ ಜನರು ಬಹಳ ಪಾಡು ಪಟ್ಟರು. ಅಂತಹ ಭೀಮಾವತಾರ ಬಹಳ ಸಮೀಪವಿದೆ. ಕೇವಲ 8—10 ತಿಂಗಳಲ್ಲಿ ಬರುತ್ತದೆ. ಆಗ ಈ

ಸರ್ಕಾರಕ್ಕೆ ಒಂದು ಸರಿಯಾದ ಶಿಕ್ಷೆಯಾಗುತ್ತದೆ. ಭೀಮ ಅವರನ್ನು ನುಂಗಿ ಹಾಕುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಸರ್ಕಾರದವರೂ ಈಗಲಾದರೂ ಚೇತರಿಸಿಕೊಂಡು ಜನಗಳಿಗೆ ಹಿತವಾದ, ಅನುಕೂಲವಾದ ಕೆಲಸಗಳನ್ನು ಮಾಡುವುದಕ್ಕೆ ಮನಸ್ಸು ಕೊಟ್ಟು ಒಳ್ಳೆಯ ಹೆಸರನ್ನು ಪಡೆಯಲ್ಲಿ ಎಂದು ಹೇಳಿಬಿಟ್ಟು, ಅಧ್ಯಕ್ಷರಿಗೆ ವಂದಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಪ್ರಥಮವಾಗಿ ಮಾನ್ಯ ಆರ್ಥಿಕ ಮಂತ್ರಿಗಳು ಮಂಡಿಸಿರತಕ್ಕಂತಹ ಬಜೆಟನ್ನು ಸ್ವಾಗತಿಸುತ್ತೇನೆ. ದೇಶದಲ್ಲಿ ಪಾಕಿಸ್ತಾನದ ದುರಾಕ್ರಮಣ ಮತ್ತು ಅಭಾವ ಪರಿಸ್ಥಿತಿ ಕಷ್ಟಪರಿಸ್ಥಿತಿ ಇದ್ದರೂ ಕೂಡ ಸಂಪೂರ್ಣವಾದ ಸಮನ್ವಯವಾದಬಜೆಟನ್ನು ಮಂಡಿಸಿದುದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ಈ ವರ್ಷ ದೇಶದಲ್ಲಿ ಬಹಳ ಮುಖ್ಯವಾದ ಅಭಾವ ಪರಿಸ್ಥಿತಿ ಬಂದಿವೆ. ದೇಶದ ಬಹು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ ಬಂದಿವೆ. ಇಂತಹ ಸಂದರ್ಭದಲ್ಲಿ ನಾವು ಈ ಸಭೆಯಲ್ಲಿ ಅನೇಕಾವರ್ತಿ ಒತ್ತಾಯ ಪೂರ್ವಕವಾಗಿ ಸರ್ಕಾರದ ಗಮನಕ್ಕೆ, ರಾಜ್ಯದ ಕೆಲವು ಭಾಗಗಳಾದ ಬಿಜಾಪುರ, ಬಳ್ಳಾರಿ, ತುಮಕೂರು, ಚಿತ್ರದುರ್ಗ ಮುಂತಾದ ಕಡೆಗಳಲ್ಲಿ ಪದೆ ಪದೇ ಈ ಒಂದು ಅಭಾವ ಪರಿಸ್ಥಿತಿ ಬರುತ್ತಾ ಇದೆ, ಇದಕ್ಕೆ ಸರ್ಕಾರದವರು ಅದಷ್ಟು ತೀವ್ರವಾಗಿ ಪರಿಹಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಲಕ್ಷಾಂತರ ರೂಪಾಯಿಗಳನ್ನು ಅಭಾವ ಪರಿಹಾರಕ್ಕೋಸ್ಕರ ಖರ್ಚುಮಾಡುತ್ತಿದ್ದಾರೆ. ಏನಾದರೂ ಮಾಡಿ ಖಾಯಂ ಪರಿಹಾರ ಕ್ರಮವನ್ನು, ಇಂತಹ ಅಭಾವ ಪರಿಸ್ಥಿತಿಗಳು ತಲೆದೋರದ ಹಾಗೆ ಮಾಡಬೇಕೆಂದು ಸಲಹೆಗಳನ್ನು ಕೊಟ್ಟಿದ್ದೇವೆ. ಸ್ವಾಮಿ, ಇಂತಹ ಸ್ಥಳಗಳಲ್ಲಿ ಬಹಳ ಮುಖ್ಯವಾಗಿ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಕೆಲವೊಂದು ಯೋಜನೆಗಳಲ್ಲಿ ನಮ್ಮ ತಾಲ್ಲೂಕಿನಲ್ಲಿ ಚಿರಿಗೇಹಳ್ಳಿಯಿಂದ ನಾಯಕನಹಟ್ಟಿ ಹಿರಿಕೆರೆಗೆ ನೀರನ್ನು ಒದಗಿಸುವುದಕ್ಕೆ ಸಹಾಯ ಮಾಡಿದ್ದಾರೆ. ವಾಣಿವಿಲಾಸ ಸಾಗರಕ್ಕೆ ಯುಗಟಿ ನದಿಯಿಂದ ನೀರನ್ನು ಒದಗಿಸತಕ್ಕ ನೀರಾವರಿ ಯೋಜನೆ, ಧರ್ಮಪುರ ಕೆರೆಗೆ ಸುವರ್ಣಮುಖಿಯಿಂದ ನೀರನ್ನು ಒದಗಿಸುವ ಯೋಜನೆ, ರಾಣೀಕೆರೆಗೆ ನಾರಾಯಣಪುರ ಪ್ರಾಜೆಕ್ಟಿನಿಂದ ನೀರನ್ನು ಒದಗಿಸತಕ್ಕ ಯೋಜನೆ ಇವುಗಳು ಕಾರ್ಯರೂಪಕ್ಕೆ ಬಂದರೆ ಇಂತಹ ಅಭಾವ ಪರಿಸ್ಥಿತಿಯ ಸಂದರ್ಭದಲ್ಲಿ ಸರ್ಕಾರ ತತ್ಕಾಲಿಕವಾಗಿ ಯಾವ ಹಣವನ್ನು ಖರ್ಚುಮಾಡಬೇಕಾಗುವುದಿಲ್ಲ. ಇದರಿಂದ ಖಾಯಂ ವ್ಯವಸ್ಥೆ ಆಗುತ್ತದೆ ಎಂದು ಸರ್ಕಾರದ ಗಮನವನ್ನು ಇತ್ತ ಕಡೆ ಸೆಳೆಯಬಯಸುತ್ತೇನೆ. ಆದಾದಮೇಲೆ ಒಂದೆರಡು ವರ್ಷದ ಹಿಂದೆ ಇಂತಹ ಒಂದು ಅಭಾವ ಪರಿಸ್ಥಿತಿಯನ್ನು ಖಾಯಂ ಆಗಿ ಬರದೇ ಇರವಂತೆ ನೋಡಿಕೊಳ್ಳಲು ಒಂದು ಯೋಜನೆ ತಯಾರು ಆಗಿದ್ದು ಈ ಯೋಜನೆಯಲ್ಲಿ ಅರಣ್ಯ ಅಭಿವೃದ್ಧಿ, ಕಾಂಟೂರ್ ಬಂಡಿಂಗ್ ಮುಂತಾದುವನ್ನು ಅಳವಡಿಸಿತ್ತು. ಇಂತಹ ಯೋಜನೆಗಳನ್ನು ಕೇಂದ್ರಕ್ಕೆ ಮೈಸೂರು ಸರ್ಕಾರದವರು ಶಿಫಾರಸ್ಸು ಮಾಡಿದ್ದರು. ಅದು ಜಾಗ್ರತೆ ಕಾರ್ಯಗತ ಆಗುವ ರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ. ಅವೆಲ್ಲಕ್ಕಿಂತಲ್ಲೂ ಮುಖ್ಯವಾಗಿ ಈ ಒಂದು ಅಭಾವ ಪರಿಸ್ಥಿತಿ ಮತ್ತು ಆಹಾರದ ಕೊರತೆ ಇರತಕ್ಕ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ನಾವು ಮಾಡತಕ್ಕ ಪ್ರಯತ್ನಗಳು ಎಂದರೆ ತತ್‌ಕ್ಷಣ ಪ್ರತಿಫಲ ಬರತಕ್ಕ ಯೋಜನೆಗಳಿಂದ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೆ ತರಬೇಕು. ರೈತರಿಗೆ ನೀರಾವರಿ ಭಾವಿಗಳನ್ನು ತೆಗೆಸಿಕೊಡುವುದು ಬಹಳ ಮುಖ್ಯ. ಸರ್ಕಾರದವರು ಇದುವರೆಗೆ ಇರತಕ್ಕಂಥ ಯೋಜನೆಯನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ವರ್ಗ ಮಾಡಿದ್ದಾರೆ. ಸ್ವಾಮಿ ಚಿತ್ರದುರ್ಗ ಜಿಲ್ಲೆ ಬರಗಾಲ ತಾಲ್ಲೂಕು. ನಮ್ಮ ತಾಲ್ಲೂಕಿನಲ್ಲಿ ಸುಮಾರು ಸಾವಿರಾರು ನೀರಾವರಿ ಭಾವಿಗಳಿಗೆ ಅರ್ಜಿ ಹಾಕಿದರೆ ಕೇವಲ 35 ಮಾತ್ರ ಮಂಜೂರು ಮಾಡಿದ್ದಾರೆ. ಇದು ನಮ್ಮ ಅವಶ್ಯಕತೆಗಿಂತ ಕಡಿಮೆಯಾಗಿದೆ. ಇಂತಹ ನೀರಾವರಿ ಭಾವಿಗಳಿಗೆ ಕೊಟ್ಟ ಹಣವನ್ನು ರೈತ ವಾಪಸ್ಸು ಕೊಡುತ್ತಾನೆ. ರೈತನಿಗೆ ತತ್‌ಕ್ಷಣ ಒಂದು ವರ್ಷದೊಳಗೆ ಆದಾಯ ಬರುತ್ತದೆ. ಆದ್ದರಿಂದ ಇದಕ್ಕಾಗಿ ಹೆಚ್ಚು ಹೆಚ್ಚಾಗಿ ಬೇಗ ಬೇಗ ಹಣ ಒದಗಿಸಬೇಕು ಎಂದು ಹೇಳಬಯಸುತ್ತೇನೆ ಸಣ್ಣ ನೀರಾವರಿ ಯೋಜನೆಯಲ್ಲಿ ಲಿಫ್ಟ್ ಇರ್ರಿಗೇಷನ್ ಸ್ಕೀಮನ್ನು ಸಾಮೂಹಿಕವಾಗಿ ಜಾರಿಗೆ ತರುತ್ತೇವೆಂದು ಹೇಳಿದಿರಿ. ಮೂರು-ನಾಲ್ಕು ವರ್ಷಗಳಿಂದ ಇಂತಹ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಇವನ್ನು ಜಾಗ್ರತೆ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತೇನೆ. ಅಭಾವ ಪರಿಸ್ಥಿತಿಯಲ್ಲಿ ತತ್‌ಕ್ಷಣ ಕೈಕೊಳ್ಳಬೇಕಾದ ಕಲವು ವಿಷಯಗಳ ಕಡೆಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಅಭಾವ ಪರಿಸ್ಥಿತಿ ಇದ್ದಂಥ ನಮ್ಮ ಭಾಗದಲ್ಲಿ ಸರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿವೆ ಮತ್ತು ಕೆಲವು ಹಳ್ಳಿಗಳಲ್ಲಿ ಇಂತಹ ಒಂದು ದುರ್ಭರ ಮತ್ತು ಭೀಕರ ಪರಿಸ್ಥಿತಿ ಒದಗಿದೆ ಎಂದು ಸರ್ಕಾರದವರು ಹೇಳಿದ್ದಾರೆ. ಇಲ್ಲಿ ಜರೂರಾಗಿ ಗಂಜಿ ಕೇಂದ್ರಗಳನ್ನು ಸ್ಥಾಪಿಸುವ ಆವಶ್ಯಕತೆ ಇದೆ ಎಂದು ನಾನು ಹೇಳಬಯಸುತ್ತೇನೆ. ದನಕರುಗಳಿಗೆ ಬೇಕಾದ ಮೇವಿನ ಪರಿಸ್ಥಿತಿ ಹೇಳತೀರದು. ಅನೇಕ ರೈತರು ದನಕರುಗಳನ್ನು ಬೇರೆ ಕಡೆಗೆ

(ಶ್ರೀ ಟಿ. ಎಲ್. ಗೌಡ)

ಹೊಡೆದುಕೊಂಡು ಹೋಗಿದ್ದಾರೆ, ಅವನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದ್ದಾರೆ ಎಂದು ಹೇಳುವುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಆದುದರಿಂದ ಅಲ್ಲಿ ಹುಲ್ಲನ್ನು ಸರಬರಾಯಿ ಮಾಡುವ ಕಾರ್ಯವನ್ನು ತತ್‌ಕ್ಷಣ ಕೈಕೊಳ್ಳಬೇಕು. ಜನರಿಗೂ ಸಹ ಕುಡಿಯತಕ್ಕ ನೀರಿನ ಪರಿಸ್ಥಿತಿ ಬಹಳ ಕಷ್ಟ ಇದೆ. ಅನೇಕ ಹಳ್ಳಿಗಳಲ್ಲಿ ಮೂರು-ನಾಲ್ಕು ನೀರಿನ ಬಾವಿಗಳು ಇದ್ದರೂ ಸಹ ಬತ್ತಿ ಹೋಗಿದೆ. ಅಲ್ಲೆಲ್ಲಾ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡತಕ್ಕದ್ದು ಅತ್ಯಾವಶ್ಯಕವಾಗಿದೆ. ಇನ್ನು ಸಂಬಂಧಪಟ್ಟ ಅಧಿಕಾರಿಗಳು ಕೆಲವರು, ಸರ್ಕಾರದವರು ಉದಾರವಾಗಿ ಸಹಾಯ ಮಾಡಿರತಕ್ಕ ಫ್ಯಾಮಿನ್ ರಿಲೀಫ್ ಹಣವನ್ನು ಖರ್ಚುಮಾಡದೆ ಬಹಳ ಉಪೇಕ್ಷೆ ಮಾಡುತ್ತಾ ಇದ್ದಾರೆ. ಒಂದು ಉದಾಹರಣೆ ಹೇಳುವುದಾದರೆ, ಚಿತ್ರದುರ್ಗಕ್ಕೆ ಕ್ಷಾಮ ಪರಿಹಾರಕ್ಕೋಸ್ಕರ ಮೂರು ಲಕ್ಷ ಒದಗಿಸಿದ್ದರೆ, 57 ಸಹಸ್ರ ರೂಪಾಯಿ ಮಾತ್ರ ಖರ್ಚುಮಾಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ವಿಶೇಷವಾಗಿ ಮುತುವರ್ಜಿ ವಹಿಸಿ ಕೆಲಸ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅಭಾವ ಪರಿಸ್ಥಿತಿ, ಕ್ಷಾಮ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಸರ್ಕಾರದವರು ಈ ಬಗ್ಗೆ ಒಂದು ಫ್ಯಾಮಿನ್ ರಿಲೀಫ್ ಬೋರ್ಡ್ ನೇಮಕ ಮಾಡಿ ಯಾವ ರೀತಿ ಕ್ಷಾಮವನ್ನು ತಡೆಗಟ್ಟಬೇಕು ಎಂದು ಪರಿಶೀಲನೆ ಮಾಡುವುದು ಒಳ್ಳೆಯದು ಎಂದು ನಾನು ಸೂಚಿಸಬಯಸುತ್ತೇನೆ. ಇನ್ನು ಯೋಜನೆಗಳ ಬಗ್ಗೆ ಮಾತನಾಡುತ್ತಾ ಸ್ವಾಮಿ, ಒಂದೂ-ಎರಡು-ಮೂರು ಯೋಜನೆಗಳು ಮುಗಿದು ಮುಂದಿನ ವರ್ಷದಲ್ಲಿ ನಾಲ್ಕನೇ ಯೋಜನೆಗೆ ಕಾಲು ಇಡುತ್ತಾ ಇದ್ದೇವೆ. ಎಷ್ಟು ಯೋಜನೆಗಳು ಆದರೂ ಆಹಾರದಲ್ಲಿ ಸ್ವಾವಲಂಬಿಗಳು ಆಗಿಲ್ಲ ಎಂದು ಹೇಳಬೇಕಾದುದು ನಿರ್ವಿವಾದ. ಆದರೆ ನಾಲ್ಕನೇ ಯೋಜನೆಯಲ್ಲಿ ಮಾನ್ಯ ಆರ್ಥಿಕ ಸಚಿವರು ವ್ಯವಸಾಯಕ್ಕೆ ಒದಗಿಸತಕ್ಕಂಥ ಹಣ ಬಹಳ ಕಡಿಮೆ. ಇನ್ನೂ ಹೆಚ್ಚಿಗೆ ಒದಗಿಸಬೇಕು ಎಂದು ಸಲಹೆ ಮಾಡುತ್ತೇನೆ. ಪರ ದೇಶದಿಂದ ಬರತಕ್ಕ ಆಹಾರಕ್ಕೆ ಏನು ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ಸ್ ನಾವು ಕೊಡುತ್ತಾ ಇದ್ದೇವೆ, ಇದನ್ನು ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಟ್ಟರೆ ನಮ್ಮ ದೇಶದಲ್ಲಿ ಆಹಾರ ಧಾನ್ಯ ಹೆಚ್ಚಿಗೆ ಬೆಳೆಯುತ್ತದೆ. ನಮ್ಮಲ್ಲಿ ಹೆಚ್ಚಿಗೆ ಉತ್ಪತ್ತಿ ಆಗುತ್ತದೆ ಎಂದು ಹೇಳುತ್ತೇನೆ. ಆದ್ದರಿಂದ ರೈತರಿಗೆ ಇನ್ನೂ ಹೆಚ್ಚು ಸಹಾಯ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ನಮ್ಮ ರಾಜ್ಯಕ್ಕೆ 196 ಕೋಟಿ ರೂಪಾಯಿ ಇಂಡಿಯಾ ಸರ್ಕಾರದಿಂದ ಸಾಲ ತಂದಿದ್ದೀರಿ, ಬಾಕಿಯವರಿಂದ 12 ಕೋಟಿ ರೂಪಾಯಿ ಸಾಲ ತಂದಿದ್ದೀರಿ ಮತ್ತು ಓವರ್ ಡ್ರಾಫ್ಟಿನಿಂದ 19 ಕೋಟಿ 45 ಲಕ್ಷ ಇದೆ ಎಂದು ಹೇಳುತ್ತೀರಿ. ಡೆವಲಪಿಂಗ್ ಎಕಾನಮಿಯಲ್ಲಿ ದೇಶದಲ್ಲಿ ಅಭಿವೃದ್ಧಿ ಕೆಲಸ ಮಾಡತಕ್ಕ ಸಮಯದಲ್ಲಿ ಜನರು ಹೆಚ್ಚಿನ ಭಾರ ಹೊರತಕ್ಕದ್ದು ನ್ಯಾಯ, ಮತ್ತು ಹೆಚ್ಚು ಸಾಲ ಮಾಡಬೇಕಾದುದು ನ್ಯಾಯ ಮತ್ತು ನಿರ್ವಿವಾದ. ಅದಕ್ಕೆ ಹೆದರಬೇಕಾಗಿಲ್ಲ. ಅನೇಕ ವಿದ್ಯುಚ್ಛಕ್ತಿ ಯೋಜನೆಗಳು ನೀರಾವರಿ ಯೋಜನೆಗಳ ಪ್ರತಿಫಲ ಕೊಡಲು ಪ್ರಾರಂಭಿಸುತ್ತಿವೆ. ಬಹುಶಃ ನಾವು ಏನು ಸಾಲವನ್ನು ಮಾಡಿದ್ದೇವೆ ಅದಕ್ಕಿಂತ ಹೆಚ್ಚು ಉಳಿಸುವ ರೀತಿಯಲ್ಲಿ ಉತ್ಪತ್ತಿಯಾಗುತ್ತದೆ. ಅದಕ್ಕೋಸ್ಕರ ಗಾಬರಿಪಡ ಬೇಕಾಗಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಮತ್ತು ಕೇಂದ್ರ ಸರ್ಕಾರದ ಸಂಬಂಧ ನಮ್ಮ ದೇಶ ದುರ್ಭರ ಹಣಕಾಸಿನ ಪರಿಸ್ಥಿತಿ ಬಗ್ಗೆ ಕೊಡಬೇಕಾದ ಸಾಲ, ಅನ್‌ಪ್ರಡಕ್ಟೀವ್ ವರ್ಕ್ಸ್ ಮೇಲೆ ಹಾಕಿದ ಬಂಡವಾಳ ಅವುಗಳ ಬಗ್ಗೆ ನ್ಯಾಯ ತೀರ್ಮಾನವನ್ನು ತೆಗೆದುಕೊಳ್ಳಲು ಮಾನ್ಯ ಹಣಕಾಸಿನ ಸಚಿವರು ಹೈಪವರ್ ಸಮಿತಿ ನೇಮಕ ಮಾಡುವುದು ಒಳ್ಳೆಯದು ಎಂದು ಹೇಳಿದ್ದಾರೆ. ಅದು ಸೂಕ್ತ. ನಾವು ಏನು ಇಂಡಿಯಾ ಸರ್ಕಾರದಿಂದ ತಂದಿದ್ದೇವೆ, ಅದನ್ನು ಸಮರ್ಪಕವಾಗಿ ವಾಪಸ್ಸು ಕೊಡಲು ತೊಂದರೆ ಇರುವುದರಿಂದ, ಪರಿಶೀಲನೆ ಮಾಡಿ ಲಿಬರಲೈಸೆಡ್ ಕಂತುಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಕೊಡಲು ಸಮಿತಿ ನೇಮಕ ಮಾಡುವುದನ್ನು ನಾನು ಒಪ್ಪುತ್ತೇನೆ.

ಇನ್ನು ಸ್ವಾಮಿ, ಹಣಕಾಸಿನ ಸಚಿವರು ಅವರ 1966-67ನೇ ಹಣದ ಆಯವ್ಯಯ ಪಟ್ಟಿಯಲ್ಲಿ ಹರಿಜನ ಗಿರಿಜನರಿಗಾಗಿ ಒಂದು ಹೌಸಿಂಗ್ ಕಾರ್ಪೋರೇಷನ್ ಮಾಡುತ್ತಾರೆಂದು ಸೂಚನೆ ಕೊಟ್ಟಿದ್ದಾರೆ. ಅದು ಬಹಳ ಸ್ವಾಗತಾರ್ಹ. ನಮ್ಮ ದೇಶದಲ್ಲಿ ಇರತಕ್ಕಂಥ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರತಕ್ಕ ವರ್ಗಕ್ಕೆ ನನ್ನ ಅಭಿಪ್ರಾಯದಲ್ಲಿ ಸಾಕಷ್ಟು ರಕ್ಷಣೆ ಮತ್ತು ಅವರ ಅವಶ್ಯಕತೆಗಳನ್ನು ಪೂರೈಕೆ ಮಾಡಿಲ್ಲ. ಬಹುಶಃ ಹಿಂದೆ ಏನೋ ಮನೆ ಕಟ್ಟಿಸಿಕೊಡುತ್ತಿದ್ದರು, ಅದಕ್ಕೆ ಸಹಾಯ ಮಾಡುತ್ತಿದ್ದರು. ಮೂರು-ನಾಲ್ಕು ವರ್ಷ ಅದು ಕುಂಠಿತವಾಗಿದೆ. ಅದು ತಪ್ಪು ಎಂದು ನನ್ನ ಅಭಿಪ್ರಾಯ. ಮಾನ್ಯ ಹಣಕಾಸಿನ ಸಚಿವರು ಇದಕ್ಕಾಗಿ ಒಂದು ಕಾರ್ಪೋರೇಷನ್ ಸ್ಥಾಪನೆ

ಮಾಡಿ ಅದಕ್ಕೆ ಮೂರುವರೆ ಕೋಟಿ ರೂಪಾಯಿ ಕೊಡುತ್ತೇವೆ ಎಂದು ಹೇಳಿರುವುದು ಬಹಳ ಸ್ವಾಗತಾರ್ಹ. ಅಭಾವ ಪರಿಸ್ಥಿತಿಯಲ್ಲಿ ಈ ಒಂದು ಆಹಾರದ ವಿತರಣೆಯಲ್ಲಿ ಇರತಕ್ಕ ಕುಂದು ಕೊರತೆಗಳನ್ನು ಹೋಗಲಾಡಿಸಲು ಬಹಳ ಮುಖ್ಯವಾದ ಕಾರ್ಯಕ್ರಮವೆಂದರೆ ಮನಾಪಲಿ ಪ್ರೊಕ್ಯೂರ್‌ಮೆಂಟ್. ಎಲ್ಲಿಯವರೆಗೆ ಬಂಡವಾಳಶಾಹಿಗಳ ಮತ್ತು ವರ್ತಕರ ಕೈವಾಡ ಇದೆಯೋ, ಎಲ್ಲಿಯವರೆಗೆ ಆಹಾರ ದಿನಸಿ ವ್ಯಾಪಾರದಲ್ಲಿ ಅವರ ಕೈವಾಡ ಇದೆಯೋ, ಅಲ್ಲಿಯವರೆಗೆ, ತೊಂದರೆಗಳು ಪರಿಹಾರ ಆಗಲಾರದು. ಆದುದರಿಂದ ಸರ್ಕಾರದವರು ಮುಂದಿನ ವರ್ಷದಲ್ಲಿ ಮನಾಪಲಿ ಪ್ರೊಕ್ಯೂರ್‌ಮೆಂಟ್ ತಂದಿರುವುದು ಬಹಳ ಒಳ್ಳೆಯದು. ಇನ್ನು ಮುಂದೆ ಪರದೇಶಗಳಿಂದ ಆಹಾರಧಾನ್ಯ ಬರಲಿ, ಅಥವಾ ಇನ್ನು ಯಾವ ಒತ್ತಡವೇ ಬರಲಿ ಇದನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಹೇಳುತ್ತೇನೆ.

11-00 A.M.

ಇದರ ಜೊತೆಗೆ ಮುಂದಿನ ಸಾಲಿನಲ್ಲಿ ಕನ್ನಡ ಫಿಲಂಗೋಸ್ಕರ ಸರ್ಕಾರದವರು ಹೆಚ್ಚಿನ ಉತ್ತೇಜನ ಕೊಟ್ಟು ವಿಶೇಷವಾಗಿ ಸಹಾಯ ಮಾಡಲು ತೀರ್ಮಾನ ತೆಗೆದುಕೊಂಡಿದ್ದಾರೆ, ಅವಕ್ಕೋಸ್ಕರವಾಗಿ ಅವರನ್ನು ಅಭಿನಂದಿಸುತ್ತೇನೆ. ಅದೇ ರೀತಿಯಲ್ಲಿ ಕೊನೆಯದಾಗಿ ಇಂಥ ಒಂದು ಕಷ್ಟ ಕಾಲದಲ್ಲೂ ಸಹ ಅಭಾವ ಪರಿಸ್ಥಿತಿ ಇದ್ದರೂ ಕೂಡ ನೌಕರವರ್ಗದವರಿಗೆ ಅಲ್ಪಸ್ವಲ್ಪ ಸಹಾಯ ಮಾಡಿ ಐದು-ಐದು ರೂಪಾಯಿ ಡಿಯರ್‌ನೆಸ್ ಅಲೋಯನ್ಸ್ ಕೊಟ್ಟಿರುವುದು ಸ್ವಾಗತರ್ಹ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ರೈಲ್ವೆಗಳ ಅಭಿವೃದ್ಧಿ ಬಹಳ ಕಡಿಮೆಯಾಗಿದೆ. ಸ್ವಾತಂತ್ರ್ಯ ಬಂದಮೇಲೆ ಬೇರೆ ರಾಜ್ಯಗಳಲ್ಲಿ ರೈಲ್ವೇ ಲೈನ್ ಹಾಕಿರುವುದನ್ನು ಹೋಲಿಸಿನೋಡಿದರೆ ನಮ್ಮ ಮೈಸೂರು ರೈಲ್ವೆಯ ಅಭಿವೃದ್ಧಿ ಬಹಳ ಕಡಿಮೆಯೆಂದು ಹೇಳಬೇಕಾಗಿದೆ. ರೈಲ್ವೆಗಳ ಒಂದು ಕಾರ್ಯಕ್ರಮವನ್ನು ಹಾಕಿದರೆ ಹಂಗಾಮಿಯಾಗಿ ತೊಂದರೆಯಲ್ಲಿರತಕ್ಕ ಜನಗಳಿಗೆ ಕೂಲಿ ಒದಗಿಸುವ ಒಂದು ಅವಕಾಶ ಸಿಕ್ಕುತ್ತದೆ. ಆದ್ದರಿಂದ ಈಗಾಗಲೆ ಅನೇಕ ಸಲ ಈ ಸಭೆಯಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರ್ಸ್ ಮಾಡಿರುವಂತೆ ಚಿತ್ರದುರ್ಗ ಮತ್ತು ರಾಯದುರ್ಗ ರೈಲ್ವೆ ಲೈನನ್ನು ಹಾಕಬೇಕೆಂದು ಒತ್ತಾಯ ಮಾಡಿದ್ದೇವೆ. ಈ ರೈಲ್ವೆ ಲೈನನ್ನು ಹಾಕುವುದರಿಂದ ಚಿತ್ರದುರ್ಗ, ರಾಯದುರ್ಗ, ಚೆಳ್ಳಕೆರೆ ಮುಂತಾದ ವ್ಯಾಪಾರ ಕೇಂದ್ರಗಳನ್ನು ಕನೆಕ್ಟ್ ಮಾಡಿದ ಹಾಗೆ ಆಗುತ್ತದೆ. ಕೇಂದ್ರ ಸರ್ಕಾರದವರು ಈ ಲೈನನ್ನು ಇಟ್ಟು—ಬಿಟ್ಟಿರುವುದರಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿಯಾದರು ಸೇರಿಸುವಂತೆ ಶಿಫಾರ್ಸ್ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ.

ಪ್ರಸಕ್ತ ಆಯವ್ಯಯದಲ್ಲಿ ರೈತರಿಗೆ ಸಾಲಕ್ಕಾಗಿ ಒದಗಿಸಿರತಕ್ಕ ಹಣ ಬಹಳ ಕಡಿಮೆಯಾಗಿದೆ. ಅಡ್ವಾನ್ಸ್ ಟು ಕಲ್ಟಿವೇಟಾರ್ಸ್ ಎನ್ನುವುದರಲ್ಲಿ ಕೇವಲ 46.60 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಬಹುಶಃ ಈ ಸಾರಿ ರೈತರಿಗೆ ವಿಶೇಷವಾದ ಕಷ್ಟ ಪರಿಸ್ಥಿತಿ ಬಂದಿದೆ. ಬಹಳ ತೊಂದರೆಯಲ್ಲಿದ್ದಾರೆ. ಅಭಾವಕ್ಕೆ ಒಳಗಾಗಿದ್ದಾರೆ. ಅವರ ಸಹಾಯಕ್ಕೆ ಸರ್ಕಾರ ಹೋಗದಿದ್ದರೆ ಅವರ ಸ್ಥಿತಿ ಚಿಂತಾ ಜನಕವಾಗುತ್ತದೆ. ಆದ್ದರಿಂದ ಈ ಬಾಬಿಗೆ ಸುಮಾರು 10 ಕೋಟಿ ರೂಪಾಯಿಗಳನ್ನಾದರೂ ಒದಗಿಸುವುದು ಅವಶ್ಯಕತೆ ಇದೆ. ಎಲೆಲ್ಲಿ ಕ್ಷಾಮ ಬಂದಿದೆ ಆ ಪ್ರದೇಶಗಳಲ್ಲಿರತಕ್ಕ ರೈತರು ಧನಕರುಗಳನ್ನು ಮಾರಿದ್ದಾರೆ. ಮುಂದಿನ ವರ್ಷ ವ್ಯವಸಾಯ ಮಾಡಲು ಮೆಷನರಿ, ಟ್ರ್ಯಾಕ್ಟರ್‌ಗಳನ್ನು ಉಪಯೋಗಿಸಿ ಜೀವನ ಮಾಡುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇವರಿಗೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಆಹಾರ ಮತ್ತು ಹುಲ್ಲನ್ನು ಕೊಂಡುಕೊಳ್ಳುವುದಕ್ಕೆ ಹೆಚ್ಚು ಹಣ ಬೇಕಾಗುತ್ತದೆ, ಆದುದರಿಂದ ಅಡ್ವಾನ್ಸ್ ಟು ಕಲ್ಟಿವೇಟರ್ಸ್ ಭಾಗದಲ್ಲಿ ಹೆಚ್ಚು ಹಣ ನಿಗದಿ ಮಾಡುವುದು ಒಳ್ಳೆಯದು. ಇದೇ ರೀತಿಯಲ್ಲಿ 'ಸಿ. ಡಿ.' ಪ್ರೋಗ್ರಾಮ್‌ಗೆ 37·61 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ, ಅದೂ ಸಹ ಬಹಳ ಕಡಿಮೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನೀರಾವರಿ ಬಾವಿಗಳಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಹೆಚ್ಚು ಹೆಚ್ಚು ಸಹಾಯ ಮಾಡಬೇಕು. ಆದ್ದರಿಂದ ಈ ಬಾಬಿಗೆ ಹೆಚ್ಚು ಹಣ ಕೊಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಸಹಕಾರ ಇಲಾಖೆಯ ಬಗ್ಗೆ ಮಾತನಾಡುತ್ತಾ, ನಮ್ಮ ದೇಶದ ಬೆನ್ನುಮೂಳೆಯಂತಿರುವ ರೈತರಿಗೆ ಹೆಚ್ಚು ಹೆಚ್ಚಾಗಿ ಉತ್ತೇಜನ ಕೊಡಬೇಕು. 100ಕ್ಕೆ 80ರಷ್ಟು ಜನಗಳು ಸಾಹುಕಾರರಿಂದ ತಮಗೆ ಬೇಕಾದ ಅವಶ್ಯಕತೆಗಳನ್ನು ಪೂರೈಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಬಾಬಿಗೆ ಹೆಚ್ಚು ಹೆಚ್ಚು ಹಣ ಒದಗಿಸಬೇಕು. ಮತ್ತು ಈ ಒಂದು ಸಹಕಾರ ಇಲಾಖೆ ಮುಖಾಂತರ ರೈತನಿಗೆ ಬೇಕಾದ

(ಶ್ರೀ ಬಿ. ಎಲ್. ಗೌಡ)

ಎಲ್ಲಾ ಅವಶ್ಯಕತೆಗಳನ್ನು ಪೂರೈಸಬೇಕಾದರೆ, ಸಹಕಾರ ಸಂಘಗಳು ಹೆಚ್ಚು ಫಲಕಾರಿಯಾಗಿ ಕೆಲಸ ಮಾಡಬೇಕಾದರೆ, ಹೆಚ್ಚು ಹೆಚ್ಚು ಹಣ ಇದರಲ್ಲಿ ತೊಡಗಿಸಬೇಕು. ರೈತನು ಬೆಳೆಯುವ ಬೆಳೆಯನ್ನು ಸಹಕಾರ ಸಂಘಗಳ ಮೂಲಕ ಮಾರುವ ಏರ್ಪಾಡು ಮಾಡಬೇಕಾದರೆ ಸಹಕಾರ ಸಂಘಗಳಿಗೆ ಗೋಡೌನ್ ಅವಶ್ಯಕ. ಈ ಸಹಕಾರ ಸಂಘಗಳ ಗೋಡೌನ್‌ಗಳಿಗೆ ಹೆಚ್ಚು ಹೆಚ್ಚು ಸಹಾಯಧನ ಒದಗಿಸಬೇಕೆಂದು ಒತ್ತಾಯ ಪೂರ್ವವಾಗಿ ಹೇಳುತ್ತೇನೆ.

[MR. DEPUTY SPEAKER in the Chair.]

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಸ್ವಾಮಿ, 1966-67ನೇ ವರ್ಷದ ಆಯವ್ಯಯ ಪತ್ರವನ್ನು ನಮ್ಮ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರು ಸಭೆಯ ಮುಂದೆ ಇಟ್ಟಿದ್ದಾರೆ. ನಾನು ಸಂಪೂರ್ಣವಾಗಿ ಅನುಮೋದನೆ ನೀಡುತ್ತಾ, ಅವರು ಬಹಳ ದಿಟ್ಟತನದಿಂದ ಎಲ್ಲಾ ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆಂದು ಹೇಳುತ್ತೇನೆ. ಅವರು ಎಷ್ಟರಮಟ್ಟಿನ ದಿಟ್ಟತನದಿಂದ ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟಿದ್ದಾರೋ ಅಷ್ಟೇ ದಿಟ್ಟತನದಿಂದ ಹಣ ಯಾವ ರೀತಿ ಖರ್ಚು ಮಾಡುತ್ತಿದ್ದಾರೆ ಮತ್ತು ಕೆಲವು ಇಲಾಖೆಗಳಲ್ಲಿ ಹಣ ಪೋಲಾಗುತ್ತಿರುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಲೆಕ್ಕ ಪತ್ರಗಳನ್ನು ಪರಿಶೀಲನೆ ನಡೆಯುತ್ತಿರುವಾಗ ಕೆಲವು ಇಲಾಖೆಗಳಲ್ಲಿ ಹಣ ಎಷ್ಟರಮಟ್ಟಿಗೆ ಪೋಲಾಗುತ್ತಿದೆ, ಅಥವಾ ಸದುಪಯೋಗವಾಗುತ್ತಿಲ್ಲವೆಂಬುದನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದೇನೆ. ಅದನ್ನು ನೋಡಿದರೆ ನನಗನ್ನಿಸುತ್ತದೆ, ನಮ್ಮ ಮೈಸೂರು ದೇಶದಲ್ಲಿರತಕ್ಕಂಥ ಮಾನ್ಯ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲ ನಿಜವಾಗಿಯೂ ಕೂಡ ಶ್ಲಾಘನೀಯವಾದ ಕೆಲಸ ಮಾಡುತ್ತಿದ್ದರೂ, ಇಲಾಖೆಗಳಿಗೆ ಹಂಚಿದ ಹಣ ಎಷ್ಟರಮಟ್ಟಿಗೆ ಖರ್ಚಾಗುತ್ತಿದೆ ಎಂಬುದನ್ನು ಬಹುಶಃ ಅವರು ಹೆಚ್ಚಿನ ಪರಿಶೀಲನೆ ಮಾಡುತ್ತಿಲ್ಲಾ. ಅದಕ್ಕೂ ಕಾರಣವಿದೆ. ಅಧಿಕಾರವರ್ಗದವರು ಸರಿಯಾಗಿ ಕೆಲಸ ಮಾಡದೆ ಇರುವುದು. ಮುಖ್ಯ ಮಂತ್ರಿಗಳು ಮೊದಲೇ ಹೇಳಿದ ಹಾಗೆ ಅಧಿಕಾರ ವರ್ಗದ ರಸ್ಟೆಡ್ ಮೆಷನರಿಯನ್ನು ಇನ್ನೂ ಸರಿಪಡಿಸುವುದಕ್ಕಾಗುತ್ತಿಲ್ಲ. ಅಧಿಕಾರ ವರ್ಗದವರು ಅವರ ಕರ್ತವ್ಯಗಳನ್ನು ದೇಶಾಭಿಮಾನದಿಂದ ನಿರ್ವಹಿಸುವುದಾದರೆ ನಿಜವಾಗಿಯೂ ನಮ್ಮ ಮೈಸೂರು ಮಂತ್ರಿಮಂಡಲದವರು ಮಾಡತಕ್ಕಂಥ ಶ್ಲಾಘನೀಯವಾದ ಕೆಲಸಗಳು ಜನರಿಗೆ ಉಪಯೋಗವಾಗುತ್ತೆ. ಇಲ್ಲದೇ ಹೋದರೆ ಜನತೆ ಅನುಭವಿಸುತ್ತಿರುವ ಕಷ್ಟ ತಪ್ಪಿಸುವುದು ಸಾಧ್ಯವಾಗುವುದಿಲ್ಲ. ಈ ವಿಚಾರದಲ್ಲಿ ನಮ್ಮ ಮಂತ್ರಿ ಮಂಡಲದವರು ಅವರ ನಿಸ್ಸಹಾಯಕತೆಯನ್ನು ತೋರಿಸಬಾರದೆಂದು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವ ಅಧಿಕಾರಿಗಳು ತಮ್ಮ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವುದಿಲ್ಲವೋ ಅವರನ್ನು ಶಿಕ್ಷಿಸುವುದಕ್ಕೆ ನಮ್ಮ ಮಂತ್ರಿ ಮಂಡಲದವರು ಹಿಂಜರಿಯಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೆಲವು ಸಂದರ್ಭಗಳಲ್ಲಿ ಹೆಚ್ಚಿಗೆ ತೆರಿಗೆಗಳನ್ನು ವಿಧಿಸಿ ನಮ್ಮ ಸರ್ಕಾರವನ್ನು ನಡೆಸುತ್ತಿದ್ದೀವೆ. ಆದರೆ ಹೆಚ್ಚಿಗೆ ತೆರಿಗೆಗಳನ್ನು ವಿಧಿಸುವುದರಿಂದ ನಾವು "ಏನು ಹಣ ಪೋಲು ಮಾಡುತ್ತಿಲ್ಲ ಒಳ್ಳೆಯ ಕೆಲಸಕಾರ್ಯಗಳಿಗೆ ವಿನಿಯೋಗಿಸುತ್ತಿದ್ದೇವೆಂದು" ಜನತೆಯಲ್ಲಿ ನಂಬಿಕೆ ಮಾಡಿಸಬೇಕು. ಆದರೆ ನನ್ನ ಅನುಭವದಲ್ಲಿ ಇಂಡಸ್ಟ್ರಿಯಲ್ ಲೋನ್ಸ್ ಮತ್ತು ಇತರ ಏನೇನೊ ಲೋನುಗಳು ಅಲ್ಲದೆ ಕೋ-ಆಪರೇಟಿವ್ ಸೊಸೈಟಿಗಳಿಗೆ ಹಣ ಒದಗಿಸುತ್ತಿರುವುದನ್ನು ನೋಡಿದರೆ ನಮ್ಮ ಹಣವೆಲ್ಲಾ ವಾಪಸ್ ಬರುತ್ತದೋ ಏನೋ ಅನ್ನುವ ಭಯ ನಿಜವಾಗಿ ಬರುತ್ತದೆ. ಇಂಡಸ್ಟ್ರಿಯಲ್ ಲೋನ್ಸ್ ವಿಚಾರ ತೆಗೆದುಕೊಂಡರೆ ಕೆಲವು ಸಂದರ್ಭಗಳಲ್ಲಿ ಲೆಕ್ಕಪತ್ರಗಳು ಸಹ ಇರುವುದಿಲ್ಲ. ಕೋ-ಆಪರೇಟಿವ್ ಸೊಸೈಟಿಗಳ ಕೆಲಸಕಾರ್ಯಗಳಲ್ಲಿ ಕಂಡುಬಂದಿರುವ ಲೋಪದೋಷಗಳನ್ನು ಹೇಳುವುದಾದರೆ ಬಹುಶಃ ಒಂದು ದಿವಸವಲ್ಲ, ಎರಡು ದಿವಸಗಳಾದರೂ ಹೇಳಬಹುದು. ಒಂದೇ ಒಂದು ಉಧಾರಣೆಯೆಂದರೆ ಹೇರಳವಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಭತ್ತದ ಮಿಲ್‌ಗಳನ್ನು ಸ್ಥಾಪನೆ ಮಾಡಿದ್ದಾರೆ. ಇದು ಶ್ಲಾಘನೀಯವಾದ ಕೆಲಸ. ಆದರೆ ಈ ಭತ್ತದ ಮಿಲ್‌ಗಳು ಕೆಲಸ ಮಾಡುತ್ತಿವೆಯೋ ಇಲ್ಲವೋ ಎನ್ನುವುದನ್ನು ವಿಚಾರಣೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ? "ನಾವು ಏನು ಮಾಡುವುದು, ಹಣ ಕೊಟ್ಟಿದ್ದೇವೆ, ಸೊಸೈಟಿಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಬೋರ್ಡ್‌ಗಳಿವೆ" ಎಂದು ಮಂತ್ರಿಗಳು ಹೇಳುತ್ತಾರೆ. ಆದರೆ ಬೋರ್ಡ್‌ಗಳು ಯಾವ ರೀತಿ ಕೆಲಸ ಮಾಡುತ್ತವೆ ಎನ್ನುವುದನ್ನು ಹೆಚ್ಚು ಕಡಮೆ ಪದೇ ಪದೇ ವಿರೋಧ ಪಕ್ಷದವರೂ ಮತ್ತು ನಾವೂ ಕೂಡ ಹೇಳಿ ಸರ್ಕಾರದ ಗಮನವನ್ನು ಸೆಳೆದಿದ್ದೇವೆ. ವಿರೋಧ ಪಕ್ಷದವರಾಗಲೀ, ಆಳುವ

ಪಕ್ಷದವರಾಗಲೀ ಒಂದು ವೇಳೆ ರಚನಾತ್ಮಕವಾದ ಸಲಹೆಗಳನ್ನು ಮಾಡಿದರೆ ಅವುಗಳನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿರೋಧ ಪಕ್ಷದವರು ಕೆಲವು ವೇಳೆ ಮಂತ್ರಿ ಮಂಡಲದ ಮೇಲೆ ಅಥವ ಇತರ ಕೆಲವು ವಿಷಯಗಳ ಮೇಲೆ ಬಹುಶಃ ಸತ್ಯಕ್ಕೆ ದೂರವಾದ ಅಂಶಗಳನ್ನು ಹೊರಗೆಡಹಬಹುದು. ಆದರೆ ಇಲಾಖೆಗಳ ಕೆಲಸ ಎಷ್ಟರಮಟ್ಟಿಗೆ ನಡಿಯುತ್ತಿದೆ ಎನ್ನುವುದನ್ನು ಅನೇಕ ರೀತಿಯಿಂದ ಕಟುವಾಗಿ ಟೀಕೆ ಮಾಡಿರುವುದನ್ನು ಕೇಳಿದ್ದೇನೆ. ಅವರ ಕಟುವಾದ ಅನೇಕ ಟೀಕೆಗಳನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ರಚನಾತ್ಮಕ ಟೀಕೆಗಳನ್ನು ಯಾರೇ ಮಾಡಿದರೂ ವಿರೋಧ ಪಕ್ಷದವರು ಆಳುವ ಪಕ್ಷದವರು ಎಂದು ವ್ಯತ್ಯಾಸ ಮಾಡಬೇಕಾದ್ದು ಅನಾವಶ್ಯಕ. ಆಯವ್ಯಯ ಪತ್ರವನ್ನು ಚರ್ಚೆ ಮಾಡುವಾಗ ಲೋಪದೋಷಗಳನ್ನು ಎತ್ತಿ ತೋರಿ. ಆಳುವ ಪಕ್ಷದವರು ಸ್ವಾಗತಿಸುತ್ತೇವೆಂದು ಹೇಳಿದರೆ ವಿರೋಧ ಪಕ್ಷದವರು ವಿರೋಧಿಸುತ್ತೇನೆ ಎಂದು ಹೇಳುತ್ತಾರೆ. ಅಷ್ಟೇ ನನಗೆ ಕಂಡು ಬಂದಿರುವ ವ್ಯತ್ಯಾಸ.

ಕ್ರಾಷ್ ಪ್ರೋಗ್ರಾಂ ಎಂದು ಹಾಲಿಗೆ ಸಂಬಂಧಪಟ್ಟ ರೆವಿನ್ಯೂ ಮಂತ್ರಿಗಳು ಒಂದು ಯೋಜನೆ ತಂದಿದ್ದಾರೆ. ನಿಜವಾಗಿಯೂ ಈ ಯೋಜನೆಗೆ ಕೊಡುವ ಹಣ ನ್ಯಾಯವಾಗಿ ಖರ್ಚಾಗುತ್ತಿದೆಯೇ ಎಂದು ನಾನು ಅವರನ್ನು ಪ್ರಶ್ನಿಸುತ್ತೇನೆ. ಐದು ಸಾವಿರ ರೂಪಾಯಿಗಳನ್ನು ಒಬ್ಬನಿಗೆ ಕೊಡುವಾಗ 750 ರೂಪಾಯಿ ಸಬ್ಸಿಡಿ ಮತ್ತು 4,250 ರೂಪಾಯಿಗಳನ್ನು ಸೇಕಡ ಮೂರರಂತೆ ಬಡ್ಡಿಯಲ್ಲಿ ಸಾಲ ಕೊಡುತ್ತಾರೆ. ಈ ಹಣವನ್ನು ಯಾರಿಗೆ ಕೊಡುತ್ತಾರೆ ಎಂದರೆ ಎರಡು ವರ್ಷಗಳ ಹಿಂದೆಯೇ ಬಾವಿಗಳನ್ನು ಮಾಡಿಕೊಂಡಿರುವವರಿಗೆ ಅಥವಾ ಸಾಕಾದಷ್ಟು ಜಮೀನು ಸಹ ಇಲ್ಲದಿರುವವರಿಗೆ ನಿಯಮಗಳ ಪ್ರಕಾರ ಕನಿಷ್ಟ ಪಕ್ಷ ಎರಡು ಎಕರೆಯಲ್ಲಾದರೂ ಹುಲ್ಲು ಬೆಳೆಯಬೇಕು ಎಂದು ಹೇಳುತ್ತಾರೆ. ಆದರೆ ಯೋಜನಾ ರೀತ್ಯಾ ಅರ್ಹತೆ ಇಲ್ಲದಿರುವವರಿಗೇ ಕೊಡುತ್ತಾರೆ. ಕೆಲವು ಸಂದರ್ಭಗಳನ್ನು ನೋಡಿ ನನಗೆ ಅನ್ನಿಸುತ್ತದೆ, ಈ ತರಹ ಸಾಲಗಳನ್ನು ಕೊಡುವುದಕ್ಕೆ ಬದಲಾಗಿ ಪಬ್ಲಿಕ್ ವರ್ಕ್ಸ್ ಅಥವಾ ಇತರೆ ಡೆವಲಪ್‌ಮೆಂಟ್ ಇಲಾಖೆಗಳಿಗೆ ಆ ಹಣವನ್ನು ಕೊಟ್ಟರೆ ಅದನ್ನು ಸದುಪಯೋಗ ಮಾಡಿಕೊಳ್ಳುತ್ತಾರೆ.

ಬೆಂಗಳೂರು ರೂರಲ್ ಡಿಸ್ಟ್ರಿಕ್ಟಿನಲ್ಲಿ ಎಷ್ಟರಮಟ್ಟಿಗೆ ಅಭಾವ ಪರಿಸ್ಥಿತಿ ಇದೆ ಮತ್ತು ಎಷ್ಟರ ಮಟ್ಟಿಗೆ ದವಸ ಧಾನ್ಯಗಳನ್ನು ನಮ್ಮ ಸರ್ಕಾರದವರು ಒದಗಿಸುತ್ತಿದ್ದಾರೆ ಎನ್ನುವ ವಿಚಾರದಲ್ಲಿ ಸ್ವಲ್ಪ ದೀರ್ಘವಾಗಿ ಮಾತನಾಡಬೇಕೆಂದು ಇದ್ದೇನೆ. ಆದ್ದರಿಂದ ನಾನು ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುವುದಿಲ್ಲ. ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಮೊದಲಿನಿಂದಲೂ ಅಭಾವ ಜಿಲ್ಲೆ ಎಂದು ಹೇಳಬಹುದು. ನಮ್ಮ ದುರದೃಷ್ಟದಿಂದಲೋ ಏನೋ ಈ ವರ್ಷ ಮಳೆ ಇಲ್ಲವೆ ಇಲ್ಲ ಎಂದರೆ ತಪ್ಪಾಗಲಾರದು. ಆದರೆ ನಮ್ಮ ಆಹಾರ ಮಂತ್ರಿಗಳು ಬೆಂಗಳೂರು ಡಿವಿಜನ್ನಿನಲ್ಲಿ ಸುಮಾರು 50 ಪರಸೆಂಟ್ ಮಳೆಯಾಗಿದೆ ಎಂದು ಯಾವ ಆಧಾರದ, ಮೇಲೆ ಈ ಸಭೆಯಲ್ಲಿ ಹೇಳಿದರೋ ಗೊತ್ತಿಲ್ಲ. ಬಹುಶಃ ಅಧಿಕಾರ ವರ್ಗದವರು ಅವರಿಗೆ ಅಂಕಿ ಅಂಶಗಳನ್ನು ಒದಗಿಸಿರಬೇಕು. ಅದರ ಆಧಾರದ ಮೇಲೆ ಅವರು ಹಾಗೆ ಹೇಳಿರಬಹುದು. ಈಗ ಬೆಂಗಳೂರು ರೂರಲ್ ಜಿಲ್ಲೆಯ ಸ್ಥಿತಿಗತಿಗಳನ್ನು ನಿಜವಾಗಿ ಹೇಳಬೇಕಾದರೆ ಬಹಳ ವ್ಯಥೆಯಾಗುತ್ತದೆ. ಆಹಾರದ ಅಭಾವದ ಜೊತೆಗೆ ನೀರಿನ ಅಭಾವವು ಪ್ರಾರಂಭವಾಗಿದೆ. ಅನೇಕ ಹಳ್ಳಿಗಳಲ್ಲಿ ಒಂದೊಂದು ತೊಟ್ಟು ನೀರನ್ನು ಆಳವಾದ ಬಾವಿಗಳಿಂದ ಬಸಿದು ತೆಗೆದುಕೊಳ್ಳಲು ಜನರು ಪಡುತ್ತಿರುವ ಕಷ್ಟವನ್ನು ನೋಡಿ ನನ್ನ ಮನಸ್ಸು ಕರಗಿ ಹೋಗಿದೆ. ಅವರಿಗೆ ಏನಾದರೂ ಸಹಾಯ ನೀಡಬೇಕಾಗಿದೆ. ನಮ್ಮ ಮಂತ್ರಿಮಂಡಲದವರು ಸುಮಾರು ಮೂರು ನಾಲ್ಕು ತಿಂಗಳಿನಿಂದ ಪದೆ ಪದೇ, ಹಗಲು ರಾತ್ರಿ ಸೇರಿ ಜನತೆಗೆ ಅನಿರೀಕ್ಷಿತವಾಗಿ ಒದಗಿರುವ ಕಷ್ಟಕಾಲದಲ್ಲಿ ಏನೇನು ಸಹಾಯ ಮಾಡಬೇಕೋ ಆ ಸಹಾಯಗಳನ್ನೆಲ್ಲ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ಯಾವ ದೇಶದಲ್ಲಿಯೂ ಮಾಡದೆ ಇರುವಂಥ ಪ್ರಯತ್ನಗಳನ್ನು ನಮ್ಮ ಮಂತ್ರಿಮಂಡಲ ಮಾಡಿದೆ ಎಂದು ಘಂಟಾಘೋಷವಾಗಿ ನಾನು ಹೇಳುತ್ತೇನೆ. ಆದರೆ ಇವತ್ತಿನ ದಿವಸ ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರು ದಯವಿಟ್ಟು ಯೋಚನೆ ಮಾಡಬೇಕೆಂದು ಹೇಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೊಗಳಿ ಹೊಗಳಿ ಹೊನ್ನಿನ ಸುಪತ್ತಿಗೆಗೆ ಏರಿಸಿದರು ಎನ್ನುವ ಹಾಗೆ ಇದೆ. ಸರ್ಟಿಫಿಕೇಟ್ ಕೊಡುವುದಕ್ಕೂ ಒಂದು ಮಿತಿ ಇರಬೇಕು, ಸ್ವಾಮಿ.

ಶ್ರೀ. ಬಿ. ಜೆ. ಲಿಂಗೇಗೌಡ.—ಒಳ್ಳೆಯ ಕೆಲಸ ಮಾಡಿದಾಗ ನಾವು ಹೇಳಲೇಬೇಕು. ನಮ್ಮ ಮಂತ್ರಿ ಮಂಡಲದವರು ಮಾಡಿದಂಥ ಆರ್ಡರುಗಳು ಜಿಲ್ಲೆಯ ಮಟ್ಟದತನಕ ತಲುಪುವುದಕ್ಕೆ ಸಾಧ್ಯವಾಗಿರಬಹುದು. ಆದರೆ ಜಿಲ್ಲಾ ಮಟ್ಟದಿಂದ ಕೆಳಗಡೆಗೆ ಇಳಿಯಬೇಕು ಎಂದರೆ ಏನು

(ಶ್ರೀ ಬಿ. ಜೆ. ಲಿಂಗೇಗೌಡ)

ಪ್ರಯತ್ನ ಮಾಡಬೇಕೋ ದೇವರಿಗೇ ಗೊತ್ತು, ಭಗವಂತನೇ ನಮ್ಮನ್ನು ಕಾಪಾಡಬೇಕು. ನಾನು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದೇನೆ, ಕಾಗದ ಪತ್ರಗಳನ್ನು ಬರೆದಿದ್ದೇನೆ. ಬೇಕಾದರೆ ಅವನ್ನೆಲ್ಲ ತಮ್ಮ ಅವಗಾಹನೆಗೆ ತರುತ್ತೇನೆ. ಎಷ್ಟೇ ಪ್ರಯತ್ನ ಪಟ್ಟರೂ ಕೂಡ ನಮ್ಮ ಅನೇಕ ಒಳ್ಳೆಯ ಯೋಜನೆಗಳು ಕಾಗದದ ಮೇಲೆ ಪ್ರಪೋಸಲ್ಸ್ ಹಾಗೆಯೇ ಉಳಿದಿದೆಯೇ ಹೊರತು ಕಾರ್ಯತಃ ಏನೂ ನಡೆಯುತ್ತಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಆಹಾರಾಭಾವ ಎಷ್ಟು ಮಟ್ಟಿಗೆ ಇದೆ ಎಂಬುದನ್ನು ವರ್ಣಿಸಲು ಸಾಧ್ಯವಿಲ್ಲ. ಸರ್ಕಾರದವರು ಒಂದು ತಿಂಗಳಿಗೆ ಒಂದು ಸಾವಿರ ಜನಸಂಖ್ಯೆ ಇರುವ ಊರಿಗೆ ಒಂದು ಮೂಟೆ ಜೋಳ ಅಥವಾ ಅಕ್ಕಿಯನ್ನು ಕೊಡುತ್ತಾರೆ. ಅಷ್ಟು ಅಕ್ಕಿ ಸಾಕಾಗುತ್ತದೆಯೇ, ಸ್ವಾಮಿ ? ಮನುಷ್ಯನ ಜೀವಿತದ ಕೊನೆ ಕಾಲದಲ್ಲಾದರೂ ಕೊಟ್ಟರೆ ಬಾಯಿಗೇ ಅಕ್ಕಿಕಾಳು ಹಾಕುವುದಕ್ಕೆ ಆದರೂ ಆಗುತ್ತದೆ ಎಂದು ಹೇಳಬಹುದು. ನಮ್ಮ ಸರ್ಕಾರದವರು ತಿಳಿದು ಕೊಂಡಿರುವುದಾದರೂ ಏನಂದರೆ, ಬೆಂಗಳೂರು ನಗರ ಮೈಸೂರು ನಗರ ಇಂಥ ಒಂದೆರಡು ನಗರಗಳನ್ನು ಪಟ್ಟಣಗಳ ಮತ್ತು ಕೆಲವು ಜನತೆಗೆ ಆಹಾರ ದಿನಸಿ ಒದಗಿಸಿದರೆ ಅವರ ಕರ್ತವ್ಯವನ್ನು ಮಾಡಿದಂತಾಯಿತು ಎಂದು. ಹೀಗೆ ಮಾಡಿದರೆ ಹಳ್ಳಿಗಾಡಿನ ಜನ ಏನಾಗುತ್ತಾರೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಬಹಳ ಕಷ್ಟಕಾಲವಿದು ಆಹಾರದ ಹಂಚುವಿಕೆ ಸಂಬಂಧಪಟ್ಟ ಆರು ತಿಂಗಳ ಅಂಕಿ ಅಂಶಗಳನ್ನು ಸರ್ಕಾರದ ವತಿಯಿಂದ ಪಡೆದಿದ್ದೇನೆ. ಮೊನ್ನೆ ತಾನೆ ಮಾನ್ಯ ಆಹಾರ ಮಂತ್ರಿಗಳೂ ಸಹ ಅಂಕಿ ಅಂಶಗಳನ್ನು ಸಭೆಗೆ ಒದಗಿಸಿದ್ದಾರೆ. ಅವುಗಳ ಪರಿಶೀಲನೆಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಎಷ್ಟು ಕನಿಷ್ಠ ಪ್ರಮಾಣದಲ್ಲಿ ಆಹಾರ ಧಾನ್ಯವನ್ನು ಹಂಚಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ಸರ್ಕಾರದವರು ಆಯಾಯ ಜಿಲ್ಲೆಯ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಜಿಲ್ಲೆಗೊಂದು ಫುಡ್ ಅಡ್ವೈಸರಿ ಕಮಿಟಿಯನ್ನು ರಚನೆ ಮಾಡಿದ್ದಾರೆ. ಅದಷ್ಟು ಹೆಚ್ಚಿಗೆ ಈ ವೇಳೆ ಸಮಿತಿ ಸೇರಿ ಆಹಾರದ ಸರಬರಾಜು ಮತ್ತು ಅದರ ಹಂಚಿಕೆ ವಿಷಯದಲ್ಲಿ ತೀರ್ಮಾನಗಳನ್ನು ತೆಗೆದುಕೊಂಡು ಕಾರ್ಯಕ್ರಮ ಕೆಗೆದುಕೊಳ್ಳಬೇಕೆಂದು ಸರ್ಕಾರದ ಆಶಯ. ಆದರೆ ಬೆಂಗಳೂರು ರೂರಲ್ ಜಿಲ್ಲೆಮಟ್ಟಿಗೆ ಹೇಳುವುದಾದರೆ ಫುಡ್ ಅಡ್ವೈಸರಿ ಕಮಿಟಿ ಒಂದು ವರ್ಷದಲ್ಲಿ ಒಂದೆರಡು ಸಲ ಸೇರಿರಬಹುದು. ಸುಮಾರು ನಾಲ್ಕು ತಿಂಗಳಾದರೂ ಕೂಡ ಕಮಿಟಿ ಸೇರಲಿಲ್ಲದ ವಿಷಯವನ್ನು ನಮ್ಮ ಬೆಂಗಳೂರು ರೂರಲ್ ಜಿಲ್ಲೆಯ ಡೆಪ್ಯೂಟಿ ಕಮೀಷನ್ನರವರ ಗಮನಕ್ಕೆ ನಾನು ತಂದಾಗ ಅವರು ಕಮಿಟಿ ಸೇರುವ ಅವಶ್ಯಕತೆ ಇರಲಿಲ್ಲ ಯಾವಾಗ ಕರೆಯಬೇಕೆಂಬುದು ನನಗೆ ಗೊತ್ತಿದೆ ಎಂದು ಘಂಟಾಘೋಷವಾಗಿ ಮೊನ್ನೆ ತಾನೇ ಸೇರಿದ್ದ ಫುಡ್ ಅಡ್ವೈಜರಿ ಕಮಿಟಿಯಲ್ಲಿ ಹೇಳಿದರು. ನಿಜವಾಗಿ ಗ್ರಾಮಾಂತರ ಪ್ರದೇಶದಲ್ಲಿ ಜನ ಹೊಟ್ಟೆಗೆ ಆಹಾರವಿಲ್ಲದೆ ಸಾಯುವ ಸ್ಥಿತಿಯಲ್ಲಿದ್ದಾರೆ. ಇಂಥ ಪರ್ವಕಾಲದಲ್ಲಿ ನಮ್ಮ ಮಂತ್ರಿ ಮಂಡಲದವರು ಎಷ್ಟೋ ಕಷ್ಟಪಟ್ಟು ಬಡವರಿಗೆ ಸಹಾಯ ಮಾಡಬೇಕೆಂದು ಭಗೀರಥ ಪ್ರಯತ್ನ ಪಟ್ಟರೂ ಕೂಡ ಅಧಿಕಾರಿಗಳು ಅವರ ಕರ್ತವ್ಯವನ್ನು ನಿರ್ವಹಿಸದೆ ಹೋದರೆ ಅವರಿಗೆ ಏನು ಶಿಕ್ಷೆಮಾಡಬೇಕು ಎಂಬುದನ್ನು ಮಂತ್ರಿ ಮಂಡಲದವರು ಯೋಚನೆ ಮಾಡಬೇಕು.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ವೋಟ್ ಆಫ್ ನೊ ಕಾನಫಿಡೆನ್ಸ್ ತರುವುದಕ್ಕೆ ಅವಕಾಶವಿದೆಯಲ್ಲ, ಏಕೆ ಹಾಗೆ ಮಾಡಲಿಲ್ಲ ?

ಶ್ರೀ ಬಿ. ಜೆ. ಲಿಂಗೇಗೌಡ.—ನಮ್ಮ ಸರ್ಕಾರದವರು ಅಧಿಕಾರಿಗಳಿಗೆ ಯಾವ ವಿಳಂಬವನ್ನು ಮಾಡದೆ ಸೂಕ್ತ ಎಚ್ಚರಿಕೆಯನ್ನು ನೀಡಿ ಜನರಿಗೆ ಶೀಘ್ರವಾಗಿ ಸಹಾಯ ದೊರೆಯುವಂತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಮ್ಮ ಜಿಲ್ಲಾ ಡೆಪ್ಯೂಟಿ ಕಮೀಷನರವರ ಟೂರ್ ಪ್ರೋಗ್ರಾಂಗಳನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಡಲು ತಯಾರಾಗಿದ್ದೇನೆ. ಸುಮಾರು 3-4 ತಿಂಗಳಿನ ಟೂರ್ ಪ್ರೋಗ್ರಾಂಗಳಲ್ಲಿ ಕೆಲವು ದಿವಸಗಳು ಜಿಲ್ಲಾಧಿಕಾರಿಗಳು ಮಂತ್ರಿಗಳು ಜತೆಯಲ್ಲಿ ಹೋಗಿ ರೈತರ ಕಷ್ಟ ಸುಖಗಳನ್ನು ಅರಿತುಕೊಳ್ಳುವುದು ಅಥವಾ ಫಂಕ್ಷನ್‌ಗಳೂ ಅಥವಾ ಇನ್‌ಸ್ಪೆಕ್ಷನ್ ವಿಸಿಟ್‌ಗಳೂ ಇವುಗಳನ್ನೂ ಬಿಟ್ಟರೆ ಸರ್ಕಾರದವರ ಆಶಯದಂತೆ ಜಿಲ್ಲಾಧಿಕಾರಿಗಳು, ಸ್ಥಳದಲ್ಲಿಯೇ ಹೋಗಿ ಜನರ ಕಷ್ಟಸುಖಗಳನ್ನು ಅರಿತುಕೊಂಡು ಜನರಿಗೆ ಬೇಕಾದ ಸಹಾಯವನ್ನು ಕಲ್ಪಿಸಿರುವ ಸಂದರ್ಭಗಳು ಬಹಳ ವಿರಳವೆಂದು ವಿಷಾದದಿಂದ ಹೇಳಬಯಸುತ್ತೇನೆ. ಜನತೆಯ ಕಷ್ಟ ನೀಗಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಏನು ವ್ಯವಸ್ಥೆಯನ್ನೂ ಮಾಡಿಲ್ಲ. ಜಿಲ್ಲಾಧಿಕಾರಿಗಳ ಟೂರ್ ಪ್ರೋಗ್ರಾಂಗಳು ಮತ್ತು ಡೈರಿಗಳನ್ನು ತರಿಸಿಕೊಂಡು ಸರ್ಕಾರದವರು ಪರಿಶೀಲನೆಮಾಡಬಹುದು. ನಾನು ಹೇಳುವುದಿಷ್ಟೆ, ಸರ್ಕಾರದ ಅಧಿಕಾರಿಗಳು ನಿರ್ವಂಚನೆಯಿಂದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ನಮ್ಮ ಮಂತ್ರಿ

ಮುಂಡಲು ತಕ್ಕ ವ್ಯವಸ್ಥೆಯನ್ನು ಮಾಡಲು ಕ್ರಮಕೈಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಕೊನೆಯದಾಗಿ ನಾನು ಇನ್ನೊಂದು ವಿಷಯವನ್ನು ಹೇಳದಿದ್ದರೆ ನನ್ನ ಕರ್ತವ್ಯವನ್ನು ನಿರ್ವಹಿಸಿದಂತಾಗುವುದಿಲ್ಲ ನನ್ನ ತಾಲ್ಲೂಕ್ ಮಟ್ಟಿಗೆ ಹೇಳುವುದಾದರೆ ಅದು ಯಾವಾಗಲೂ ಬಹಳ ಅಭಾವ ಪ್ರದೇಶ ಅದಕ್ಕೆ ಕಾರಣ ನೀರಾವರಿ ಬಹಳ ಕಡಮೆ ಇದೆ. ಆ ಕೊರತೆ ನೀಗಬೇಕಾದರೆ ಮುಂಚನ ಬೇರೆ ಪ್ರಾಜೆಕ್ಟ್ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಬೇಕು ಆ ಪ್ರಾಜೆಕ್ಟಿನಿಂದ ಒಂದು ಫೀಡರ್ ಚಾನಲ್ ಮುಖಾಂತರ ಕಣ್ವ ಜಲಾಶಯಕ್ಕೆ ನೀರು ಒದಗಿಸುಗ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನನಗೆ ಇಷ್ಟು ಮಾತನಾಡಲು ಒಂದೆರಡು ನಿಮಿಷಗಳ ಕಾಲಾವಕಾಶವನ್ನು ಹೆಚ್ಚಿಗೆ ಕೊಟ್ಟಿದ್ದಕ್ಕಾಗಿ ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, 1966-67ನೇ ವರ್ಷದ ಆಯವ್ಯಯದ ಮೇಲೆ ಮಾತನಾಡಲು ಎರಡನೇ ದಿನವಾದ ಇವತ್ತು ನನಗೆ ಅವಕಾಶ ಸಿಕ್ಕಿತು. ಮೊಟ್ಟ ಮೊದಲನೆಯದಾಗಿ ನಾನು ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಆಧುನಿಕ ಬಸವಣ್ಣನವರಾದ ಶ್ರೀಮಾನ್ ಜತ್ತಿಯವರು ಒಂದು ಬಸವೇಶ್ವರ ಡೈರಿ ಎಂಬುದನ್ನು ನಮಗೆ ಇವತ್ತು ಅಂದರೆ 5-3-66ರಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಬಸವೇಶ್ವರರು ಒಂದು ಮಾತನ್ನು ಹೇಳಿದ್ದಾರೆ. ಅದು ಹೀಗಿದೆ "ಒಂದು ಆಸೆಗೆ ಸಾಸಿರ ವರುಷ ನರಕದೊಳದ್ದುವ ಕೂಡಲ ಸಂಗಮದೇವಾ". ಇದು ಸರ್ಕಾರಕ್ಕೆ ಎಚ್ಚರ ಕೊಡುವುದಕ್ಕೆ ಸರಿಯಾಗಿದೆ. ಇವರು ಒಂದು ಆಸೆಗೋಸ್ಕರ ಒಂದು ಸಾವಿರ ವರ್ಷ ನರಕದಲ್ಲಿ ಇರಬೇಕಾಗಿ ಬರುತ್ತದೆ. ಅಧಿಕಾರಕ್ಕೋಸ್ಕರ ಅಂಟಿಕೊಂಡು ಇರತಕ್ಕಂತಹ ಆ ಒಂದು ದುರಾಶೆಗೋಸ್ಕರ ಜನತೆಯ ಮೇಲೆ ದುರ್ಭರವಾದ ದುಷ್ಪರಿಣಾಮವನ್ನುಂಟುಮಾಡಿ ಇವರ ಒಂದು ಸುಖಕ್ಕೋಸ್ಕರವಾಗಿ ಜನತೆಯ ಕಲ್ಯಾಣ ಮಾಡುವುದನ್ನು ಪೂರ್ತಿಯಾಗಿ ಮರೆತಿದ್ದಾರೆ. ಈ ಒಂದು ಅಧಿಕಾರದ ಆಶೆಯಿಂದ ಇವರು ಒಂದು ಸಾವಿರ ವರ್ಷಗಳ ವರೆಗೆ ನರಕ ಯಾತನೆಯನ್ನು ಅನುಭವಿಸಬೇಕಾಗಿ ಬರುತ್ತದೆ. ಈಗ 66-67ನೇ ವರ್ಷದ ಹಣಕಾಸಿನ ಪರಿಸ್ಥಿತಿಯನ್ನು ವಿವರವಾಗಿ ಸರ್ಕಾರದವರಿಗೆ ಹೇಳಲು ನಾನು ನಿಂತಿದ್ದೇನೆ. ಸ್ವಾತಂತ್ರ್ಯ ಬಂದು 18 ವರ್ಷಗಳು ಮುಗಿದ ಮೇಲೆ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವದರೊಳಗೆ ನಾಲ್ಕು ಜನ ಹಣ ಕಾಸಿನ ಸಚಿವರುಗಳು ಆಸ್ಥಾನವನ್ನು ಬದಲಾವಣೆ ಮಾಡಿದ್ದಾರೆ. ಅವರುಗಳು ಯಾರೆಂದರೆ, ಶ್ರೀ ಟಿ. ಮರಿಯಪ್ಪನವರು, ಶ್ರೀ ಕಂಠಿಯವರು, ಶ್ರೀ ಜತ್ತಿಯವರು ಮತ್ತು ಈಗ ಶ್ರೀ ರಾಮಕೃಷ್ಣ ಹೆಗ್ಗಡೆಯವರು. ಈ ರಾಜ್ಯದ ಬಡ್ಜೆಟ್ಟನ್ನು ನಾನು ಯಾವುದಕ್ಕೆ ಹೋಲಿಸುತ್ತೇನೆಂದರೆ, ಆನೆ ತಿಂದ ಬೇಲದ ಹಣ್ಣಿನ ಹಾಗೆ ಇದೆಯೆಂದು ಹೇಳಬಹುದು. ಏಕೆಂದರೆ, ಇದು ಹೊರಗೆ ಚೆನ್ನಾಗಿದ್ದು ಒಳಗೆ ತಿರುಳಿಲ್ಲದ ಹಾಗೆ ಇದೆ. ಯಾರ ಕಣ್ಣಿಗೂ ಕೂಡ ಇದರ ವಾಸ್ತವಾಂಶವೇ ಕಾಣದ ಹಾಗೆ ಮಾಡಿದ್ದಾರೆ. ಕಾಂಗ್ರೆಸ್ ಟಿಕೆಟಿಗೋಸ್ಕರವಾಗಿ ಈ ಸಾರಿ ಈ ರೀತಿ ಮಾಡಿದ ಹಾಗೆ ಇದೆ. ನೋಡುವುದಕ್ಕೇನೋ ಬಹಳ ಸುಂದರವಾಗಿದೆ. ಶ್ರೀ ರಾಮಕೃಷ್ಣ ಹೆಗಡೆಯವರು ಎಷ್ಟರ ಮಟ್ಟಿಗೆ ಸರ್ವಾಂಗ ಸುಂದರರಾಗಿದ್ದಾರೋ ಅದೇ ರೀತಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯನ್ನು ಅವರು ಚಿತ್ರಿಸಿದ್ದಾರೆ. ಅವರೂ ಸಹ ಟಿಕೆಟ್ ಕೊಡುವ ಕಮಿಟಿಯಲ್ಲಿರುತ್ತಾರೆಂದು ನನಗೆ ತೋರುತ್ತದೆ. ಇವರು ತೋರಿಸಿರತಕ್ಕ ಕೆಲವಾರು ಅಂಶಗಳು ನೀತಿ ಬಾಹಿರವಾದುದಾಗಿದೆ.

ಈ ಸಭೆಯಲ್ಲಿರತಕ್ಕ ನನ್ನ ಸ್ನೇಹಿತರಲ್ಲಿ ಕೆಲವರು ಅಮೃತವನ್ನು ಊಟ ಮಾಡಿ ಅಸತ್ಯವನ್ನು ನುಡಿದು ಸರ್ಕಾರೀ ಅಧಿಕಾರಿಗಳ ಮೇಲೆ ಸರ್ಕಾರಿ ನೌಕರರುಗಳ ಮೇಲೆ ದೂರು ಹೊರಿಸುವುದು ನ್ಯಾಯವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಪ್ರಜಾಪ್ರತಿನಿಧಿಗಳಾಗಿ ಆರಿಸಿ ಬಂದವರು ತಮ್ಮ ಹೃದಯನ್ನು ಚೆನ್ನಾಗಿ ಪರೀಕ್ಷೆ ಮಾಡಿಕೊಳ್ಳದೆ ಅಂತಹ ಒಂದು ನಿಲುವಿಗೆ ಬರುವುದು ಖಂಡಿತವಾಗಿ ಸಾಧುವಾದುದಲ್ಲ. ಅಧಿಕಾರದ ಸೂತ್ರವನ್ನು ಹಿಡಿದಿರತಕ್ಕ ಮಂತ್ರಿಗಳು, ಉಪಮಂತ್ರಿಗಳು ಹಾಗೂ ಪಾರ್ಲಿಮೆಂಟರಿ ಸೆಕ್ರೆಟರಿಗಳು ಸೇರಿ 27 ಜನರು ತಮ್ಮ ರಾಜ್ಯದಾಡಳಿತದ ಬಗ್ಗೆ ಒಂದು ಹೆಚ್ಚಿನ ವಿಚಕ್ಷಣೆಯನ್ನು ತೋರಿಸಿ ರೈತರ ಹಿತದೃಷ್ಟಿಯನ್ನು ಇಂತಹ ಸನ್ನಿವೇಶದಲ್ಲಿ ಎಷ್ಟರಮಟ್ಟಿಗೆ ಕಾಪಾಡಬೇಕೆಂಬುದು ಬಹುಮುಖ್ಯ. ಇದು ಕೇವಲ ಅಧಿಕಾರಿಗಳ ಮೇಲೆಯೇ ಅವಲಂಬನವಾಗಿಲ್ಲ. ಅಧಿಕಾರಿಗಳ ಮೇಲೆ ಒಂದು ವೇಳೆ ಏನಾದರೂ ಕಿಂಚಿತ್ ದೂರು ಇದ್ದರೆ ಅದನ್ನು ನಾವು ಇಲ್ಲಿ ಹೇಳುವ ಕಾಲ ಬೇರೆ ಸಮಯದಲ್ಲಿ ನಮಗೆ ಬರುತ್ತದೆ. ನನ್ನ ಸ್ನೇಹಿತರಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಹೋದ ವರ್ಷಕ್ಕೂ ಈ ವರ್ಷಕ್ಕೂ ಎಷ್ಟೋ ವ್ಯತ್ಯಾಸವಾಗಿದೆ. ಹೋದ ವರ್ಷದ ಪರಿಸ್ಥಿತಿಯೇನು, ಈ ವರ್ಷದ ಪರಿಸ್ಥಿತಿಯೇನು ಎಂಬುವನ್ನು ನೋಡುವುದಾದರೆ, ರಾಜ್ಯದ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ಶ್ರೀ ರಾಮಕೃಷ್ಣ ಹೆಗಡೆಯವರು

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಕರಾರುವಾಕ್ಕಾದ ಚಿತ್ರವನ್ನು ಕೊಟ್ಟಿದ್ದೇನೆಂದು ಹೇಳಿದ್ದಾರೆ. ಅದೂ ಸತ್ಯಕ್ಕೆ ಎಷ್ಟು ದೂರವಾಗಿದೆಯೆಂಬುದನ್ನು ನಾನು ಅಂಕಿ ಅಂಶಗಳಿಂದ ಉದಹರಿಸಿ ಕೊಡಬಲ್ಲೆ.

65-66ನೇ ಸಾಲಿನಲ್ಲಿ 125 ಕೋಟಿ ರೂಪಾಯಿಗಳ ಬಜೆಟ್ಟನ್ನು ಕೊಟ್ಟಿದ್ದರು. ಈ ವರ್ಷದಲ್ಲಿ ಅಂದರೆ 66-67ನೇ ಸಾಲಿನಲ್ಲಿ 156 ಕೋಟಿ ರೂಪಾಯಿಗಳ ಬಜೆಟ್ಟನ್ನು ಮಂಡಿಸಿದ್ದಾರೆ. ಅಂದ ಮೇಲೆ ಹಿಂದಿನ ವರ್ಷ ನಮಗೆ ಬಂದಂತಹ ರೆವಿನ್ಯೂ ರೇಸೀಟ್ಸ್ ಎಷ್ಟು, ಈ ವರ್ಷ ಕರಾರುವಾಕ್ಕಾಗಿ ನಮಗೆ ಬರತಕ್ಕ ಹಣ ಎಷ್ಟೆಂಬುದನ್ನು ಲೆಕ್ಕಹಾಕಿದರೆ, ಇವತ್ತು ಯಾರು ನನ್ನ ಸ್ನೇಹಿತರು ಈ ಬಜೆಟ್ಟಿನಲ್ಲಿ 2 ಕೋಟಿ 53 ಲಕ್ಷ ರೂಪಾಯಿಗಳ ನಿವ್ವಳ ಆದಾಯವನ್ನು ತೋರಿಸಿದ್ದಾರೋ ಅವರು ಇದರಲ್ಲಿ ಇಂದ್ರಜಾಲ, ಮಹೇಂದ್ರಜಾಲ, ಮಾಡಿದ್ದಾರೆಂದು ನನಗೆ ತೋರುತ್ತದೆ ಏಕೆಂದರೆ, ಮುಂದಿನ ವರ್ಷ ಚುನಾವಣೆ ಸಮೀಪಿಸುತ್ತಿರುವುದರಿಂದ ಜನತೆಯ ದೃಷ್ಟಿಯಲ್ಲಿ ಇದು ಯಾವ ರೀತಿಯಲ್ಲೂ ದುಷ್ಪರಿಣಾಮಕಾರಿಯಾಗಬಾರದೆಂದು ಈ ಸಂಸ್ಥಾನದ ಆಯವ್ಯಯ ಪತ್ರದಲ್ಲಿ ಈ ವರ್ಷ ಸರ್ಪ್ಲಸ್ ತೋರಿಸಿದ್ದಾರೆ. ಈ ವರ್ಷದ ಬಜೆಟ್ ಉಳಿತಾಯದ ಬಜೆಟ್ ಎಂದು ಹೊರಗಡೆ ತೋರಿಸಿದ್ದಾರೆ. ಆದರೆ ಇದರೊಳಗಿನ ಇತರ ಸ್ಥಿತಿಗಳು ಅಷ್ಟಾಗಿ ಚೆನ್ನಾಗಿಲ್ಲವೆಂಬುದು ಸರ್ಕಾರದವರಿಗೂ ಗೊತ್ತಿದೆ, ನಮಗೂ ಗೊತ್ತಿದೆ, ಜನತೆಗೂ ತಿಳಿದಿದೆ. ಇದರಲ್ಲಿ ನಿಜವಾಗಿ ಉಳಿತಾಯವಾಗಿಲ್ಲವೆಂದು ನಾನು ಹೇಳಬಹುದು. ಏಕೆಂದರೆ, ಖಜಾನೆ ಖಾಲಿಯಾಗುವಸ್ಥಿತಿಗೆ ಬರುತ್ತಿದೆ. ಅದೂ ಅಲ್ಲದೆ ರಿಜರ್ವ್ ಬ್ಯಾಂಕಿಗೆ ಸಾಲವನ್ನು ತೀರಿಸುವ ಸಲುವಾಗಿ ನಮ್ಮ ಭದ್ರಪತ್ರಗಳನ್ನೂ ಹಾಗೂ ಇತರ ಸೆಕ್ಯೂರಿಟಿ ದಾಖಲಾತಿಗಳನ್ನು ಮಾರಾಟ ಮಾಡುವ ಸ್ಥಿತಿಗೆ ಬಂದಿದ್ದಾರೆ. ಈಗ ಅಮೇರಿಕ, ಇಂಗ್ಲೆಂಡ್, ರಷ್ಯಾ ಮುಂತಾದ ದೇಶಗಳ ಆಶ್ರಯದಿಂದ ನಮಗೆ ಗೋಧಿ, ಜೋಳ, ಅಕ್ಕಿ ಬೇಕು ಎಂದು ಭಿಕ್ಷಾಟನೆ ಮಾಡಿಕೊಂಡು ಹೋಗತಕ್ಕ ಕಾಲ ಸನ್ನಿಹಿತವಾಗಿದೆ. ಇದರಿಂದ ನಮ್ಮ ರಾಜ್ಯದಲ್ಲಿ ಈ 18 ವರ್ಷಗಳಿಂದಲೂ ಎಷ್ಟರ ಮಟ್ಟಿನ ಪುರೋಭಿವೃದ್ಧಿಯಾಗಿದೆ, ದೇಶದ ಕಲ್ಯಾಣವಾಗಿದೆ, ರಾಜ್ಯದಾಭಿವೃದ್ಧಿ ಕಡೆಗೆ ಇವರು ಎಷ್ಟು ಮಟ್ಟಿಗೆ ಗಮನವನ್ನು ಒಯ್ಯುತ್ತಿದ್ದಾರೆ ಎಂಬುದು ಈಗಿನ ಹಣಕಾಸಿನ ಪರಿಸ್ಥಿತಿಯನ್ನು ನೋಡಿದರೇನೇ ಗೊತ್ತಾಗುತ್ತದೆ. ಕೆಲವರು ನನ್ನ ಸ್ನೇಹಿತರು ಇದನ್ನು "ರೊಟೀನ್ ಬಡ್ಜೆಟ್" ಎಂದು ಹೇಳಿದರು. ನಾನು ಹೇಳುತ್ತೇನೆ, ಇದು ಒಂದು ಸೊಸೈಟಿ ಅಥವಾ ಪಂಚಾಯತಿಯ ಬಡ್ಜೆಟ್ ಇದ್ದ ಹಾಗೆ ಇದೆಯೆಂದು. ಅಲ್ಲಿ 150 ರೂಪಾಯಿಗಳು ಬರುತ್ತದೆ, 185 ರೂಪಾಯಿಗಳು ಖರ್ಚಾಗುತ್ತದೆಂದು ಒಂದು ಊಹೆಯ ಮೇಲೆ ಹೇಳುತ್ತಾರೆ. ಹಾಗೆ ಇದು ಆಗಿದೆ, ಅಲ್ಯೂಮಿನಿಯಂ ಕಾರ್ಖಾನೆಗೆ ಸ್ಕೂಲು, ಕಟ್ಟಡಕ್ಕೆ ದುಡ್ಡು ಕೊಡುತ್ತೇವೆ, ರಸ್ತೆಗೆ ಹಣ ಕೊಡುತ್ತೇವೆ ಅದಕ್ಕೆ ಅಷ್ಟು ಕೊಡುತ್ತೇವೆ, ಇದಕ್ಕೆ ಇಷ್ಟು ಕೊಡುತ್ತೇವೆಂದು ಸುಮ್ಮನೆ ಬಾಯಲ್ಲಿ ಹೇಳುವುದು, ಕೊನೆಯಲ್ಲಿ ಖರ್ಚು ಮಾಡುವಾಗ ಅದರ ಮೇಲೆ ಏನು ಇರುವುದಿಲ್ಲವೆಂದು ಗೊತ್ತಾಗುತ್ತದೆ. ಈ ರೀತಿ ಊಹಾಪೋಹದ ಮೇಲೆ ಇಂತಹ ಇಮ್ಯಾಜಿನರಿ ಬಡ್ಜೆಟ್ಟನ್ನು ಇಡುವುದೂ ಸರಿಯಲ್ಲ. ಇದು ಕರಾರುವಾಕ್ಕಾದ ಬಡ್ಜೆಟ್ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಈ ಬಡ್ಜೆಟ್ ಯಾವ ಸ್ಥಿತಿಗತಿಯಲ್ಲಾಗಬೇಕಾಗಿತ್ತೋ ಅಂತಹ ಸ್ಥಿತಿಗತಿಯಲ್ಲಿ ಆಗಿಲ್ಲ. ಆದರೂ ಸರ್ಕಾರದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ಸ್ಥಾನವೇನೋ ಭದ್ರವಾಗುತ್ತದೆ. ಅದಕ್ಕೋಸ್ಕರ ಎಲ್ಲಿ ಹಣಕಾಸಿನ ಕೊರತೆಯಾಗುತ್ತದೋ ಎಂದು ಹಣವನ್ನು ಉಳಿಸಲಿಕ್ಕೆ ಇವರು ಹೊರಟಿದ್ದಾರೆ, ಎಂದು ಅನೇಕರು ಅವರನ್ನು ಹೊಗಳಿದ್ದಾರೆ. ಈ ರೀತಿ ಅವರನ್ನು ಎಲ್ಲರೂ ಹೊಗಳುತ್ತಾ ಇದ್ದರೆ ಅವರು ಏನೇದಾರೂ ಮೈಮರೆತಾರೆಂದು ನಾನು ಸಂಶಯಪಡಬೇಕಾಗಿದೆ. ಸರ್ಕಾರದಲ್ಲಿ ಯಾವ ಪಕ್ಷವೇ ಬರಲಿ, ಅವರು ಅಲ್ಲಿರಲಿ, ಇಲ್ಲಿರಲಿ ಕಂಬಳಿ ಹೊದು ಕೊಂಡು ಮಲಗಪ್ಪಾ, ಲಂಗೋಟಿ ಕಟ್ಟಿಕೊಂಡು ಹೋಗಪ್ಪಾ ಎಂದು ಹೇಳುವ ಹಾಗೆ ಆಗಬಾರದು. ಇನ್ನು ಒಂದು ವಿಷಯವನ್ನು ಆ ಪಕ್ಷದವರಿಗೂ ಈ ಪಕ್ಷದವರಿಗೂ ಹೇಳಬೇಕೆಂದು ಮನಸ್ಸು ಮಾಡುತ್ತೇನೆ.

11-30 A.M.

1965-66 ನೇ ಇಸವಿಯ ಬಡ್ಜೆಟ್ ಪ್ರಾರಂಭ ಆಗುವುದರೊಳಗೆ 125 ಕೋಟಿ ರೂಪಾಯಿಗಳ ಮೈನಸ್ ಮತ್ತು ಪ್ಲಸ್ ಪ್ರಾರಂಭ ಆದಮೇಲೆ ಆ ವರ್ಷದ ಆನ್ಯುಯಲ್ ರೆವಿನ್ಯೂ ರೆಸೀಟ್ಸ್ ಎಷ್ಟು ಎಂದರೆ 118 ಕೋಟಿ ರೂಪಾಯಿಗಳು ಬರಬಹುದು ಎಂದು ಆಯಿತು. ಅಂದಮೇಲೆ 125 ಕೋಟಿ ರೂಪಾಯಿಗಳ ಆನ್ಯುಯಲ್ ರೆಸೀಟ್ಸ್‌ನಲ್ಲಿ 7 ಕೋಟಿ ರೂಪಾಯಿಗಳ ಕೊರತೆ ಉಂಟಾಯಿತು. ಈ ವರ್ಷ 156 ಕೋಟಿ ರೂಪಾಯಿಗಳನ್ನು ಆನ್ಯುಯಲ್ ರೆವಿನ್ಯೂ ರೆಸಿಟ್ಸ್‌ನಲ್ಲಿ ಲೆಕ್ಕಹಾಕಿ, ತೆರಿಗೆಗಳಿಂದ ಬರುವ ಹಣ, ಕೇಂದ್ರ ಸರ್ಕಾರದಿಂದ ತರುವ ಹಣ ಎಲ್ಲವನ್ನೂ ಲೆಕ್ಕಹಾಕಿ, 1965-66ನೇ ಇಸವಿ

ಯಲ್ಲಿ ಕಡಿಮೆ ಬಿದ್ದಂತಹ ಹಣ ಎಲ್ಲವನ್ನು ಲೆಕ್ಕಹಾಕಿ ಬರೀ ತೋರಿಕೆಗೆ 1966-67ನೇ ಇಸವಿಯ ಬಡ್ಜೆಟ್ಟಿನಲ್ಲಿ 2 ಕೋಟಿ 53 ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸಿದ್ದಾರೆ. 1966-67ನೇ ಇಸವಿಯ ಮೈಸೂರು ಸಂಸ್ಥಾನದ ಬಡ್ಜೆಟ್ಟು 135-140 ಕೋಟಿ ರೂಪಾಯಿಗಳಿಗಿಂತ ಕಡಿಮೆ ಆಗುತ್ತದೆ. ಹೀಗಿರುವಾಗ ಯಾವ ಆಧಾರದ ಮೇಲೆ ಈ ವರ್ಷ ಉಳಿತಾಯದ ಬಡ್ಜೆಟ್ಟನ್ನು ತೋರಿಸಿದ್ದಾರೆ? ಸ್ವಲ್ಪ (jugglery of figures) ಕೊಟ್ಟು ದೊಡ್ಡ ದೊಡ್ಡ ಅಂಕಿ ಅಂಶಗಳನ್ನು ಹಾಕಿ ಈ ಬಡ್ಜೆಟ್ಟನ್ನು ತಯಾರು ಮಾಡಿದ್ದಾರೆ. ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಈಗ ನೀವು ಹಾಕಿರತಕ್ಕಂಥ ತೆರಿಗೆಗಳಿಂದ ಎಷ್ಟು ಹಣ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೀರೋ ಅಷ್ಟು ಹಣ ಈ ವರ್ಷ ಅದರಿಂದ ಬರುವುದಕ್ಕೆ ಸಾಧ್ಯವಿಲ್ಲ. ಏತಕ್ಕೋಸ್ಕರ ಎಂದರೆ, ಈ ವರ್ಷ ನಮ್ಮ ದೇಶದಲ್ಲಿ ಅಭಾವ ಪರಿಸ್ಥಿತಿ ಇದೆ. ಈ ವರ್ಷ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ವಸೂಲು ಮಾಡುವುದಿಲ್ಲ. ಅರ್ಬನ್ ಲ್ಯಾಂಡ್ ಟ್ಯಾಕ್ಸ್‌ನಿಂದ ನಿಮಗೆ ಬರತಕ್ಕದ್ದು 45 ಲಕ್ಷ ರೂಪಾಯಿಗಳು ಎಷ್ಟರಮಟ್ಟಿಗೆ ಬರುತ್ತದೋ ಗೊತ್ತಿಲ್ಲ. ಅದಕ್ಕೆ ಹೈಕೋರ್ಟಿನಿಂದಲೋ ಅಥವಾ ಸುಪ್ರೀಮ್ ಕೋರ್ಟಿನಿಂದಲೋ ಸ್ಟೇ ಬರುತ್ತದೆ. ನೀವು ಅದನ್ನೆಲ್ಲಾ ಲೆಕ್ಕ ಹಾಕಿ ಅದರಿಂದ ನಿಮಗೆ ಎಷ್ಟು ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೀರೋ ಅದು ಬಾರದೆ ಇದ್ದರೆ ನಿಮ್ಮ ಬಡ್ಜೆಟ್ಟಿನಲ್ಲಿ 5-6 ಕೋಟಿ ರೂಪಾಯಿಗಳ ಕೊರತೆ ಉಂಟಾಗುತ್ತದೆ. ಆದರೆ ಇವೊತ್ತಿನ ದಿವಸ ನೀವು ಇಷ್ಟೇ ಹಣ ಬರುತ್ತದೆ ಎಂದು ದೊಡ್ಡ ನೋಟಿನ ಕಂತೆಗಳನ್ನು ಗಂಟು ಹಾಕಿ ಇಟ್ಟಿದ್ದೀರಿ. ಇವೊತ್ತಿನ ದಿವಸ ನೀವು ನಮಗೆ ಕೊಟ್ಟಿರುವ ಎಲ್ಲಾ ಕಾಗದ ಪತ್ರಗಳನ್ನೂ ವಿಮರ್ಶೆ ಮಾಡಿ ನಾನು ತಿಳಿದುಕೊಂಡಿರುವ ಹಾಗೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಇದರಲ್ಲಿ ಸರ್ಕಾರದ ಇಲಾಖೆಗಳಾದ ವ್ಯವಸಾಯ ಇಲಾಖೆ, ಸಹಕಾರ ಇಲಾಖೆ, ಪೋಲೀಸ್ ಇಲಾಖೆ, ವಿದ್ಯಾಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆ ಮುಂತಾದ ಇಲಾಖೆಗಳಲ್ಲಿ ಸಂಬಳ ವಗೈರೆಗಳನ್ನು ಕೊಡುವುದಕ್ಕೆ ಹಂಚಿಕೆಯನ್ನು ಹಾಕಿದ್ದಾರೆ. ಯಾವ ರೀತಿಯ ಒಂದು ಗಣನೀಯವಾದ ಕಾರ್ಯವನ್ನು ಸಾಧನೆ ಮಾಡುತ್ತೇವೆ ಎಂಬುದು ಈ ನಮ್ಮ ಹಣಕಾಸಿನ ಆಯವ್ಯಯ ಪಟ್ಟಿಯಲ್ಲಿಲ್ಲ. ಯಾವ ಅಂಶವನ್ನೂ ಸಹ ನಾವು ಇದರಲ್ಲಿ ಕಾಣುತ್ತಿಲ್ಲ. ನಮ್ಮ ಸ್ನೇಹಿತರು ಹೇಳಿದರು 3 ಕೋಟಿ ರೂಪಾಯಿಗಳನ್ನು ಹರಿಜನ ಮತ್ತು ಗಿರಿಜನರ ಮನೆ ಕಟ್ಟುವುದಕ್ಕೆ ಕೊಟ್ಟಿದ್ದಾರೆ, 5-6 ಕೋಟಿ ರೂಪಾಯಿಗಳನ್ನು ರಸ್ತೆಗಳನ್ನು ಮಾಡುವುದಕ್ಕೆ ಮತ್ತು ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಒದಗಿಸಿದ್ದಾರೆ. ಆಸ್ಪತ್ರೆಗಳಿಗೆ ಇಷ್ಟು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ ಎಂದು ಹೇಳಿದರು. ಇದೆಲ್ಲಾ ರೊಟೀನ್ ವರ್ಕ್. ಸ್ವಾಮಿ, ನಾನು ತಮಗೆ ಹೇಳುತ್ತೇನೆ. ಇವೊತ್ತು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂದರೆ, ಇದುವರೆಗೆ ನಮ್ಮ ರಾಜ್ಯದಲ್ಲಿ ಇದ್ದಂತಹ ಸೆಕ್ಯೂರಿಟಿಗಳನ್ನೆಲ್ಲಾ ಮಾರಾಟ ಮಾಡಿ ಇವರು ಸಾಲವನ್ನ ತೀರಿಸುವುದಕ್ಕೆ ಹೊರಟಿದ್ದಾರೆ. ಇನ್ನು ಮುಂದೆ ಇವರು ಯಾವ ಆಧಾರದ ಮೇಲೆ ಸಾಲವನ್ನು ತೆಗೆದುಕೊಳ್ಳುತ್ತಾರೆ? ಈಗಾಗಲೇ 30 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟನ್ನ ಸೆಕ್ಯೂರಿಟಿಗಳ ಮೇಲೂ 19 ಕೋಟಿ ರೂಪಾಯಿಗಳನ್ನು ನಾನ್ ಸೆಕ್ಯೂರಿಟಿ ಓವರ್ ಡ್ರಾಫ್ಟನ್ನೂ ಸರ್ಕಾರದವರು ತೆಗೆದುಕೊಂಡಿದ್ದಾರೆ. ಇನ್ನು ಮುಂದೆ ಯಾವ ಆಧಾರದ ಮೇಲೆ ರಿಜರ್ವ್ ಬ್ಯಾಂಕಿನವರು ಓವರ್ ಡ್ರಾಫ್ಟನ್ನು ಕೊಡುತ್ತಾರೆ ಎಂಬುದನ್ನ ಹೇಳಲಿಲ್ಲ. ಹೀಗಿದ್ದರೂ ಕೂಡ ನಮ್ಮ ಸ್ನೇಹಿತರು ಕೆಲವರು ಈ ಬಡ್ಜೆಟ್ಟನ್ನು ಹೊಗಳಿದ್ದಾರೆ. ಆ ರೀತಿ ಹೊಗಳುವುದಕ್ಕೂ ಒಂದು ಮಿತಿ ಇದೆ. ಸಾಲ ಮಾಡುವುದು ಅನಿವಾರ್ಯ, ಓವರ್‌ಡ್ರಾಫ್ಟ್ ವ್ಯವಹಾರ ಮಾಡುವಂಥಾದ್ದು ಅನಿವಾರ್ಯ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಾಲ ಮಾಡಿ ತಂದಂಥ ಹಣವನ್ನು ಜನತೆಗಾಗಿ ಎಷ್ಟರಮಟ್ಟಿಗೆ ವಿನಿಯೋಗ ಮಾಡಿದ್ದೀರಿ? ಮೈಸೂರು ಸಂಸ್ಥಾನದಲ್ಲಿರತಕ್ಕ ನಮ್ಮ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ನಿಮಗೆ ಯೋಗ್ಯತೆ ಇದೆಯೆ? ಸಾಲವನ್ನು ತೀರಿಸುವುದಕ್ಕೆ ಯೋಗ್ಯತೆ ಇದೆಯೇ ಎಂದು ಸರ್ಕಾರದವರನ್ನು ಕೇಳುತ್ತೇನೆ. ಪರ್‌ಕ್ಯಾಪಿಟಿ ಇನ್‌ಕಂ ಅನ್ನು ಈ ರಾಜ್ಯದಲ್ಲಿ ಜಾಸ್ತಿ ಮಾಡುವುದಕ್ಕೆ ಡೆವಲಪ್‌ಮೆಂಟ್ ಎಕಾನಮಿ ಮಾಡುತ್ತೇವೆ ಎಂದು ಹೇಳಿದರು. ಇವರು ಮಾಡಿರುವುದನ್ನು ನೋಡಿದರೆ ಇದರಲ್ಲಿ ಏನೂ ಇಲ್ಲ. ಬರೀ ಹಿರಿಯೂರಿನ ಬೂದುಕುಂಬಳಕಾಯಿ. ಪರ್‌ಕ್ಯಾಪಿಟಾ ಇನ್‌ಕಂ ಎಷ್ಟು, ಪರ್‌ಕ್ಯಾಪಿಟಾ ಟ್ಯಾಕ್ಸೇಷನ್ ಎಷ್ಟು ಎಂಬುದನ್ನು ನೋಡಿದರೆ, ಈ ಮೈಸೂರು ರಾಜ್ಯದಲ್ಲಿ ಇವರು ಮಾಡುತ್ತಿರುವುದೆಲ್ಲಾ ಬರೀ ಒಂದು ತೋರಿಕೆ. ಈ ರಾಜ್ಯಕ್ಕೆ ಬೃಹದಾಕಾರವಾದ ಒಂದು ಮಂತ್ರಿಮಂಡಲ ಬೇಕು, ಪ್ರತಿನಿತ್ಯ ಬೋರ್ಡುಗಳು, ಕಮೀಷನ್‌ಗಳು ಅದಕ್ಕೆ ಚೇರ್ಮನ್‌ಗಳು ಇವುಗಳನ್ನೆಲ್ಲಾ ಕ್ರಿಯೇಟ್ ಮಾಡುತ್ತಿದ್ದಾರೆ. ಅಡ್ವೈಜರುಗಳನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ರಾಷ್ಟ್ರ ಕಲ್ಯಾಣವನ್ನು ಸಾಧನೆ ಮಾಡತಕ್ಕ ಯಾವ ಸೂಚನೆಗಳೂ ಇದರಲ್ಲಿ ಇಲ್ಲ ಎಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ಪುಟ 36, 37, 38, 39 ಇವುಗಳನ್ನು ತಿರುವಿಹಾಕಿ ನೋಡಿದೆ. ಒಂದು ಅಂಶವೂ ಕೂಡ ಅದರಲ್ಲಿ ಆಶಾದಾಯಕವಾಗಿಲ್ಲ. ಆಮೇಲೆ ಪುಟ 65, 66, 67 ರಲ್ಲಿ ಹೇಳಿರುವಹಾಗೆ ನಮಗೆ ಬರಬೇಕಾದ ಬಾಕಿಯನ್ನ ಏತಕ್ಕೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವಸೂಲು ಮಾಡಿಲ್ಲ? ಈ ತೆರಿಗೆಯಿಂದ ಕೂಡಿರುವ ಬಡ್ಜೆಟ್ಟನ್ನು ಇಡುವುದಕ್ಕಿಂತ, ತೆರಿಗೆ ರಹಿತ ಬಡ್ಜೆಟ್ಟನ್ನು ಇಟ್ಟು ಒಂದು ಪಕ್ಷ 10 ಕೋಟಿ ರೂಪಾಯಿಗಳ ಕಡಿಮೆ ಬಡ್ಜೆಟ್ಟನ್ನು ಇಟ್ಟಿದ್ದರೂ ಸಹ ನಾವು ಒಪ್ಪಿಕೊಳ್ಳುತ್ತಿದ್ದೆವು. ಎಂಪ್ಲಾಯ್‌ಮೆಂಟ್ ಪೊಟೆನ್ಸಿಯಾಲಿಟಿಯನ್ನ ಹೆಚ್ಚು ಮಾಡಿದ್ದೇವೆ, ಹರಿಜನರು ಮತ್ತು ಗಿರಿಜನರ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನ ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಮೈನರ್ ಇರಿಗೇಷನ್ನಿಗೆ ಟೆಂಪೋಕ್ರಿಯೇಟ್ ಮಾಡಿದ್ದೇವೆ, ಫುಡ್‌ಪ್ರೊಡಕ್ಷನ್ನಿಗೆ ಹೆಚ್ಚಿನ ಹಣವನ್ನ ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ನಿಜವಾಗಿ ಇದೆಲ್ಲ ಮಾಡಿದ್ದರೆ 10 ಕೋಟಿ ರೂಪಾಯಿಗಳ ಡಿಫಿಸಿಟ್ ಬಡ್ಜೆಟ್ಟನ್ನು ಇಟ್ಟಿದ್ದರೂ ನಾನು ಒಪ್ಪುತ್ತಿದ್ದೆ. ಈ ವರ್ಷದ ಬಡ್ಜೆಟ್ಟು ಸರ್ವಾಂಗ ಸುಂದರವಾಗಿದೆ ಎಂದು ನಮ್ಮ ಸ್ನೇಹಿತರು ಹೇಳಿದರು. ಯಾವ ಆಧಾರದ ಮೇಲೆ ಯಾವ ಕವಿಯ ಉತ್ಪ್ರೇಕ್ಷೆಯಿಂದ ಕೂಡಿದಂತಹ ಮಾತುಗಳನ್ನು ಉಪಯೋಗಿಸಿ ಹೇಳಿದರೋ ಅದು ನನಗೆ ಅರ್ಥವಾಗುವುದಿಲ್ಲ. ಆದರೆ ನೀವು ಬಾಯಿಂದ ಹೇಳಿದ ಮಾತ್ರಕ್ಕೆ ಅಂಕಿ ಅಂಶಗಳೇನೂ ಬದಲಾವಣೆ ಆಗುವುದಿಲ್ಲ. ಸರ್ಕಾರದವರು ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ಹೇಳುವುದು ನಿಮ್ಮ ಕರ್ತವ್ಯ. ಇವೊತ್ತಿನ ದಿವಸ ಇದರಲ್ಲಿ ಹೇಳಿರತಕ್ಕ ಎಲ್ಲಾ ಅಂಕಿ, ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮುಂದಿನ ಪರಿಸ್ಥಿತಿಯನ್ನು ಲೆಕ್ಕ ಹಾಕಿದರೆ ಇವೊತ್ತು ಖಾಲಿ ಇರತಕ್ಕ ಖಜಾನೆಗೆ ಎಷ್ಟು ಹಣ ಬರುತ್ತದೆ? ಇದರಲ್ಲಿ ತಾವು 6 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದೀರಿ, ಯಾವುದಕ್ಕೆ ಹೆಚ್ಚು ಖರ್ಚು ಬರುತ್ತದೆ, ಯಾವುದನ್ನ ಕಡಿಮೆ ಮಾಡುತ್ತೀರಿ ಎಂಬುದನ್ನೂ ಕೂಡ ಫೈನಾನ್ಷಿಯಲ್ ಮೆಮೋರಾಂಡಂನಲ್ಲಾಗಲೀ ಬಡ್ಜೆಟ್ ಸ್ಟೇಟ್‌ಮೆಂಟಿನಲ್ಲಾಗಲೀ ತಿಳಿಸಿಲ್ಲ. ಮೈನರ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಒಂದು ಟೆಂಪೋಕ್ರಿಯೇಟ್ ಮಾಡಿದ್ದೇವೆ. ಅದಕ್ಕಾಗಿ ಹೆಚ್ಚಿನ ಹಣವನ್ನು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಯಾವ ಭಾಗದಲ್ಲಿ ಓದಿದರೂ ಅದರ ಅಂಕಿ ಅಂಶಗಳು ದೊರೆಯುವುದಿಲ್ಲ. ಈ ವರ್ಷ ಮೈನರ್ ಇರಿಗೇಷನ್ 2¼ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಆನೆಯ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯನ್ನು ಹಾಕಿದಂತಾಗಿದೆ. ಇವೊತ್ತಿನ ದಿವಸ ದೇಶದಲ್ಲಿ ಜನ ಅನ್ನ ಬೇಕು, ಅನ್ನ ಬೇಕು ಎಂದು ಕೂಗಾಡುತ್ತಾ ಇರುವಾಗ ಯಾವುದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕೋ ಅದಕ್ಕೆ ಹೆಚ್ಚು ಹಣವನ್ನ ಒದಗಿಸುವುದಿಲ್ಲ. ರೈತರಿಗೆ ಉಪಕಾರ ಮಾಡತಕ್ಕ ಕೆಲಸಗಳಿಗೆ 2¼ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಸ್ಕೂಲುಗಳು ಸರಿಯಾಗಿ ಇಲ್ಲದೆ ಇರುವ, ಮಕ್ಕಳು ಇದ್ದರೆ ಸ್ಕೂಲು ಕಟ್ಟಡಗಳು ಇಲ್ಲದೆ ಇರುವ ಮತ್ತು ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲದೆ ಇರುವ ವಿದ್ಯಾ ಇಲಾಖೆಗೆ 29 ಚಿಲ್ಲರೆ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಆಸ್ಪತ್ರೆಗಳಿದ್ದರೆ ಡಾಕ್ಟರುಗಳಿಲ್ಲ, ಡಾಕ್ಟರುಗಳಿದ್ದರೆ ಔಷಧಿಯಿಲ್ಲ, ಕಾಂಪೌಂಡರುಗಳಿಲ್ಲ ಇಂಥಾ ಪಬ್ಲಿಕ್ ಹೆಲ್ತ್ ಇಲಾಖೆಗೆ 4-5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಆದರೆ ಮನುಷ್ಯನ ಕೂಳಿಗೆ, ಆಹಾರವನ್ನು ಉತ್ಪಾದನೆ ಮಾಡತಕ್ಕ ಮೈನರ್ ಇರಿಗೇಷನ್ನಿಗೆ ಕೇವಲ 2¼ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದು ಏನೇನೂ ಸಾಲದು. ಮೈಸೂರು ಸರ್ಕಾರದವರು ಜೋಳಿಗೆಯನ್ನು ಹಾಕಿಕೊಂಡು ಭಿಕ್ಷೆ ಮಾಡುವ ಪರಿಸ್ಥಿತಿ ಎಷ್ಟು ವರ್ಷಗಳವರೆಗೆ ಮುಂದುವರಿಯುತ್ತದೆಯೋ ನನಗೆ ಗೊತ್ತಾಗುವುದಿಲ್ಲ. ಅದಕ್ಕೋಸ್ಕರ ನಾನು ಹೇಳುವುದು ಮೈಸೂರಿನ ಹಣಕಾಸಿನ ಖಾತೆಯನ್ನು ಹಿಡಿದಿರತಕ್ಕ ಅರ್ಥ ಸಚಿವರು ಹದಿನೆಂಟು ವರ್ಷಗಳಿಂದ ಮಾಡುತ್ತಿರುವಂತೆ ಅಲ್ಲಿ ಇಲ್ಲಿ ಅಂಕೆ ಸಂಖ್ಯೆಗಳನ್ನು ಸೇರಿಸಿ ಇಲ್ಲಿ ಹೇಳಿರುವಂತೆ ಮಾಡಬೇಡಿ. ನಮ್ಮ ಮಾನ್ಯ ಅರ್ಥ ಸಚಿವರು ಯುವಕರು ಮತ್ತು ಸುಂದರವಾಗಿರುವಂತಹವರು ಇಲ್ಲಿ ಸರ್‌ಪ್ಲಸ್ ಬಡ್ಜೆಟ್ಟು ತಂದಿದ್ದೇವೆಂದು ಹೇಳಿದರೆ ಅದು ಸರಿಯಾಗುವುದಿಲ್ಲ. ನಾನು ಮಾನ್ಯ ಮಂತ್ರಿಗಳಮೇಲೆ ಹೇಳುತ್ತಿಲ್ಲ. ಸರಕಾರದಲ್ಲಿ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಎಂಬುದು ಇದೆ, ಅದರಿಂದ ಎಲ್ಲರೂ ಇದಕ್ಕೆ ಜವಾಬುದಾರರಾಗಿರುತ್ತಾರೆ. ಆದುದರಿಂದ ನಿಮ್ಮ ಸರಕಾರ ಎಲ್ಲ ಜನರಿಗೂ ಸಮಾಧಾನವಾಗುವಂತೆ ಯಾವ ರೀತಿಯಾದ ಡೆವಲಪ್‌ಮೆಂಟ್ ಕೆಲಸಗಳನ್ನು ಮಾಡಬೇಕೋ ಅದರಂತೆ ಮಾಡಿದ್ದೀರಾ ಮತ್ತು ಅವನ್ನು ಎಷ್ಟುಮಟ್ಟಿಗೆ ಕಾರ್ಯಗತ ಮಾಡಿದ್ದೀರಿ ಎಂದರೆ ತಾವೇನೂ ಈ ದಿಕ್ಕಿನಲ್ಲಿ ಯಾವ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ನನಗನಿಸುತ್ತದೆ. ಪ್ಯಾಸೆಂಜರು ವೆಹಿಕಲ್ ಟ್ಯಾಕ್ಸ್ ಹಾಕಬೇಕೆಂದು ಗುಡ್ಸ್ ವೆಹಿಕಲ್ ಟ್ಯಾಕ್ಸ್ ಹಾಕಬೇಕೆಂದು ಹಾಕಿದ್ದೀರಿ, ಇದರಿಂದ ಇಲ್ಲಿಯವರೆಗೆ ತಮಗೆ ಬಂದಿರುವ ಹಣ ಎಷ್ಟು? ನೀವು ನಿಮ್ಮಲ್ಲಿರುವ ಸೆಕ್ಯೂರಿಟಿಗಳನ್ನು ಮಾರುವುದಕ್ಕೆ ಹೊರಟರೆ ನಾಳೆ ನಿಮಗೆ ರಿಸರ್ವ್ ಬ್ಯಾಂಕಿನವರು ಯಾವ ಆಧಾರದಮೇಲೆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ನೀವು ನಿಮ್ಮಲ್ಲಿರುವ ಸೆಕ್ಯೂರಿಟಿಗಳನ್ನು ಮಾರಾಟ ಮಾಡುತ್ತೀರಿ, ನಾಳೆ ನಿಮ್ಮಲ್ಲಿರುವ ಫ್ಯಾಕ್ಟರಿಗಳನ್ನು ಮಾರುತ್ತೀರಿ, ಆದಾದಮೇಲೆ

ಭದ್ರಾವತಿಯಲ್ಲಿರುವ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನ್ನು ಮಾರಾಟ ಮಾಡುವುದಕ್ಕೆ ಹೋಗುತ್ತೀರಿ. ಅನಂತರ ಇನ್ನೂ ಏನೇನನ್ನೋ ಮಾರಾಟ ಮಾಡುವ ಕಾಲ ಬರುತ್ತದೆ. ಹಾಗಾದರೆ ನಿಮ್ಮಲ್ಲಿ ಮುಂದೆ ಉಳಿಯುವುದೇನು? ನಿಮ್ಮಲ್ಲಿರುವ ಆಸ್ತಿಪಾಸ್ತಿಗಳನ್ನೆಲ್ಲಾ ಮಾರಾಟ ಮಾಡಿದಮೇಲೆ ನಿಮಗೆ ಯಾವ ಆಸ್ತಿಪಾಸ್ತಿಗಳು ಉಳಿಯುತ್ತವೆ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ನಿಮ್ಮ ಹದಿನೆಂಟು ವರ್ಷಗಳ ಆಡಳಿತದಲ್ಲಿ ನಾಲ್ಕು ಪಂಚವಾರ್ಷಿಕ ಯೋಜನೆಗಳಾದರೂ ನಿಮ್ಮ ಸ್ಥಿತಿಗಳು ಎಷ್ಟುಮಟ್ಟಿಗೆ ಮುಂದೆ ಹೋಗಬೇಕಾಗಿತ್ತೋ ಅಷ್ಟು ಮಟ್ಟಿಗೆ ಮುಂದೆ ಹೋಗಲಿಲ್ಲ. ಇದರಿಂದ ನಿಮ್ಮನ್ನು ಯಾವ ಭಾಷೆಯಲ್ಲಿ ಕರೆಯಬೇಕೋ ನನಗಂತೂ ತಿಳಿಯದು. ನಾನಾದರೂ ಸರಕಾರದಲ್ಲಿ ಕೇಳುವುದು ನಿಮ್ಮ ಸ್ಥಿತಿಗತಿಗಳು ಉತ್ತಮವಾಗಿದೆಯೇ ಎನ್ನುವುದು. ಮೊನ್ನೆ ತಾನೆ ನಮ್ಮ ಮಾರಾಮತ್ತು ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಶರಾವತಿ ಯೋಜನೆಗಾಗಿ ಕೋಟಿ ಕೋಟಿಗಟ್ಟಲೆ ಎಂದರೆ ನೂರು ಕೋಟಿಯಷ್ಟು ಖರ್ಚು ಮಾಡಿ ಅದರಿಂದ ಉತ್ಪಾದನೆಯಾದಂತಹ ವಿದ್ಯುಚ್ಛಕ್ತಿಯನ್ನು ಇವೊತ್ತು ನಮ್ಮ ರಾಜ್ಯದಲ್ಲಿ ಉಪಯೋಗ ಮಾಡಲು ಅವಕಾಶವಿಲ್ಲ ಎಂದು ಇದನ್ನು ನಮ್ಮ ಹೊರಗಿನ ಪ್ರಾಂತಗಳಾದ ಮದರಾಸು, ಕೇರಳ ಹಾಗೂ ಗೋವಾ ಈ ಪ್ರದೇಶಗಳಿಗೆ ಹಂಚಲು ಹೊರಟಿದ್ದಾರೆ. ನೀವು ಇಲ್ಲಿ ಹಾಕಿರತಕ್ಕ ಹತ್ತು ಜನರೇಟಿಂಗ್ ಸ್ಟೇಷನ್ನುಗಳೂ ಪೂರ್ತಿಯಾಗಿ ಮುಗಿದು ಉತ್ಪಾದನೆ ಮಾಡುವಾಗ ಇಲ್ಲಿ ಅದಕ್ಕೆ ತಕ್ಕಂತೆ ಯಾವ ಕೈಗಾರಿಕೆಗಳನ್ನೂ ನೀವು ಮಾಡುತ್ತಿಲ್ಲ, ಎಲ್ಲ ವಿದ್ಯುಚ್ಛಕ್ತಿಯನ್ನೂ ಹೊರಗಿನ ಪ್ರಾಂತಗಳಿಗೆ ಹಂಚಲು ಹೊರಟಿದ್ದೀರಿ. ಈಗ ಒಂದು ಜನರೇಟಿಂಗ್ ಸ್ಟೇಷನ್ನಿನಿಂದ ಬರುವ ವಿದ್ಯುಚ್ಛಕ್ತಿಯನ್ನು ನಮ್ಮ ಮೈಸೂರು ರಾಜ್ಯ ಉಪಯೋಗಿಸಿಕೊಳ್ಳಲು ಸುಮಾರು ನೂರು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಬೇಕಾಗುತ್ತದೆ. ಈಗ ನಿಮ್ಮಲ್ಲಿರುವ ಕೋಟಾವನ್ನು ನೋಡಿದರೆ ನೀವು ಎಲ್ಲೆಲ್ಲಿ ಯಾವ ಯಾವ ರೀತಿಯಾದ ಸ್ಕೀಂಗಳನ್ನು ಮಾಡಿ ಯಾವ ಇಂಡಸ್ಟ್ರಿಗಳನ್ನು ಮಾಡಬೇಕೆಂದು ವ್ಯವಸ್ಥೆ ಮಾಡಿದ್ದೀರಿ ಎಂದು ಇಲ್ಲಿ ಕೇಳಬೇಕಾಗಿದೆ. ಯಾವ ಯಾವ ಇಂಡಸ್ಟ್ರಿಗಳಿಗೆ ಲೈಸನ್ಸ್‌ಗಳನ್ನು ಕೊಟ್ಟಿದ್ದೀರಿ? ರಾಜ್ಯಪಾಲರ ಭಾಷಣದಲ್ಲಿ ಹಾಗೂ ತಮ್ಮ ಭಾಷಣದಲ್ಲಿಯಾಗಲೀ ಇದರ ಬಗ್ಗೆ ಒಂದು ಶಬ್ದವನ್ನಾದರೂ ಹೇಳಿದ್ದರೆ ನಾನು ಸರಕಾರದ ನೀತಿಯನ್ನು ಒಪ್ಪುತ್ತಿದ್ದೆ. ಮೈಸೂರು ಸರಕಾರದವತಿಯಿಂದ ಹೊಸದಾಗಿ ಒಂದು ಇಂಡಸ್ಟ್ರಿಯನ್ನಾದರೂ ಮಾಡಲು ಇಲ್ಲಿಯವರೆಗೆ ಆಗಲಿಲ್ಲ. ಹಾಗೆ ನೀವು ಇದುವರೆಗೆ ಮಾಡಿದ್ದೇವೆ ಎಂದು ಎಲ್ಲಾದರೂ ಒಂದನ್ನು ತೋರಿಸಿದರೆ ನಾನು ಮೇಲೆ ಹೇಳಿದ ಎಲ್ಲ ಮಾತುಗಳನ್ನೂ ವಾಪಸ್ಸು ತೆಗೆದುಕೊಂಡು ನಿಮಗೆ ಶರಣಾಗುತ್ತೇನೆ. ಸುಮಾರು ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಿ ಉತ್ಪಾದನೆ ಮಾಡಿದಂತಹ ವಿದ್ಯುಚ್ಛಕ್ತಿಯನ್ನು ಇಂದು ನೀವು ಮದರಾಸು, ಕೇರಳ, ಬೊಂಬಾಯಿ ಇತ್ಯಾದಿ ಪ್ರಾಂತಗಳಿಗೆ ಹಂಚುವುದಕ್ಕೆ ಹೊರಟರೆ ನಿಮ್ಮಲ್ಲಿ ಏನು ಉಳಿಯುತ್ತದೆ? ಮುಂದೆ ನೀವೂ ಪುರಂದರದಾಸರಂತೆ ಭಿಕ್ಷೆಗೆ ಹೊರಡಬೇಕು ಅಷ್ಟೇ. ಮೈಸೂರು ಸರ್ಕಾರ ಜನಕ್ಕೆ ಯಾವ ರೀತಿಯಾದ ಇನಿಷಿಯೇಟೀವ್ ಕೊಟ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಹೊರಟಿದ್ದೀರಿ? ನಿಮಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಶಕ್ತಿ ಇಲ್ಲ. ಆದುದರಿಂದ ಜನ ನಿಮ್ಮ ಕೈಯಲ್ಲಿ ಅಧಿಕಾರ ಕೊಟ್ಟು ಆಡಳಿತ ಮಾಡಿ ಎಂದು ಹೇಳುವಾಗ ನಿಮಗೆ 27 ಜನರ ಮಂತ್ರಿ ಮಂಡಲ ಏತಕ್ಕಾಗಿ ಇರಬೇಕು? ಒಂದು ಐದಾರು ಜನ ಮಂತ್ರಿಗಳಿದ್ದರೆ ಸಾಕು, ಹಳ್ಳಿಗಳಲ್ಲಿರುವ ಪಟೇಲ ಶ್ಯಾನುಭೋಗರುಗಳು ಲೆಕ್ಕಪತ್ರಗಳನ್ನು ಬರೆಯುವಂತೆ ಇಲ್ಲಿಯೂ ಅವರು ಲೆಕ್ಕಪತ್ರಗಳನ್ನು ಬರೆದುಕೊಂಡು ಇರುತ್ತಾರೆ.

ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾಗ ಆಡಳಿತ ಪಕ್ಷದವರು ಸವಾಲು ಹಾಕಿದರು, ನಮ್ಮ ಪಕ್ಷದವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಅದರಿಂದ ನಮ್ಮನ್ನೇ ಜನ ಮೆಚ್ಚುತ್ತಾರೆಂದು ನೀವು ಮೈಸೂರು ದೇಶದಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಆಡಳಿತದಲ್ಲಿ ಉಳಿಸಿದ್ದೀರಿ ಎಂದು ನಾಳೆ ಇಲ್ಲಿ ನಮ್ಮ ಸ್ಟೇಟ್‌ಮೆಂಟಿಗೆ ಉತ್ತರ ಕೊಡುವಾಗ ತಾವು ಇಷ್ಟು ಕೋಟಿಯಷ್ಟು ಹಣ ಉಳಿತಾಯವಾಗಿದೆ ಎಂದು ಯಾವ ಬಾಬಿನಲ್ಲಾದರೂ ಕೂಡ ತೋರಿಸಿದರೆ ನಾನು ಮುಂದೆ ಇದರ ಬಗ್ಗೆ ಒಂದು ಚಕಾರ ಶಬ್ದವನ್ನೂ ಇಲ್ಲಿ ಮಾತನಾಡುವುದಿಲ್ಲ. ನಿಮ್ಮ ಕೈಯಲ್ಲಿ ಕೊಟ್ಟಿರುವ ಹಣವನ್ನು ಯಾವ ಯಾವ ರೀತಿಯಲ್ಲಿ ಉಳಿತಾಯ ಮಾಡಿದ್ದೀರಿ ಎನ್ನುವುದನ್ನು ಹೇಳುವುದು ಬಿಟ್ಟು ಇಲ್ಲಿ ನಮ್ಮನ್ನು ಯಾವ ಯಾವ ಮೇಲೆ ಎಷ್ಟೆಷ್ಟು ತೆರಿಗೆ ವಿಧಿಸಬಹುದು ಎನ್ನುವುದರ ಬಗ್ಗೆ ನಮಗೆ ಸೂಚನೆಗಳನ್ನು ಕೊಡಿ ಎಂದು ಕೇಳುವುದು ನ್ಯಾಯವೇ? ನಿಮ್ಮ ಕೈಯ್ಯಲ್ಲಿ ಆಡಳಿತ ನಡೆಸುವುದಕ್ಕೆ ಶಕ್ತಿ ಇಲ್ಲ. ಅಲ್ಲಿ ಇಲ್ಲಿ ಕೆಲವು ಅಂಕೆ ಸಂಖ್ಯೆಗಳನ್ನು ಕೊಟ್ಟು, ತೆರಿಗೆ ಜನಕ್ಕೆ ಹೇಗೆ ಹಾಕಬೇಕು ಎನ್ನುವ ಸೂಚನೆಗಳು ನಮ್ಮಿಂದ ಬರಬೇಕು ಎಂದು ಹೇಳಿದರೆ ಹೊರಗಿರುವ ಜನ ನಮ್ಮನ್ನು ಹೊರಕ್ಕೆ ಬಂದಾಗ ಕಲ್ಲಿನಿಂದ ಹೊಡೆಯಬೇಕೆಂದು ಉದ್ದೇಶಿಸಿ ನಮ್ಮನ್ನು ಹತ್ತಿಕ್ಕಬೇಕೆಂದಿದ್ದೀರೇನು? ಇದರಿಂದ ಸರಕಾರಕ್ಕೆ ನಾನು ಒಂದು ಎಚ್ಚರಿಕೆಯನ್ನು ಇಲ್ಲಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕೊಡುತ್ತಿದ್ದೇನೆ. ನಿಮ್ಮ ಹಣಕಾಸಿನ ಪರಿಸ್ಥಿತಿ ಇಂದು ದೇಶದಲ್ಲಿ ಬಹಳ ಅಸ್ತವ್ಯಸ್ತವಾಗಿದೆ. ಪ್ರತಿಯೊಂದಕ್ಕೂ ನೀವು ಕೇಂದ್ರ ಸರಕಾರಕ್ಕೆ ಹೋಗಿ ಕೈ ಒಡ್ಡುತ್ತಿದ್ದೀರಿ. ಇದು ಇಲ್ಲಿ ಎಕ್ಸ್‌ಟ್ರಾರ್ಡಿನರಿ ಖರ್ಚು ಎಂದು ಹೇಳುತ್ತ ಬರುತ್ತಿದ್ದೀರಿ, ಇದರಿಂದ ನಾನು ಹೇಳುವುದು ತಮ್ಮಲ್ಲಿ ಈಗಿರುವ ಸಿ. ಡಿ. ಹಾಗೂ ಎನ್. ಇ. ಎಸ್. ಈ ಬಾಬಿಗಾಗಿ ವೆಚ್ಚ ಮಾಡುತ್ತಿರುವುದನ್ನೆಲ್ಲಾ ನಿಲ್ಲಿಸಿ ಈ ಇಲಾಖೆಗಳನ್ನು ಮೊದಲು ರದ್ದುಪಡಿಸಿ ಇದರಿಂದ ಎಷ್ಟೋ ಹೆಚ್ಚು ಖರ್ಚು ಉಳಿತಾಯವಾಗುತ್ತದೆ. ಅಲ್ಲದೆ ಮೈಸೂರು ರಾಜ್ಯದಲ್ಲಿ ಹೆಚ್ಚಾಗಿರತಕ್ಕ ಐ. ಎ. ಎಸ್. ಹಾಗೂ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆಯನ್ನೂ ಸಾಧ್ಯವಾದಷ್ಟು ರಿಟ್ರೆಂಚು ಮಾಡಬೇಕು ಮತ್ತು ಕೆಲವು ಇಲಾಖೆಗಳಲ್ಲಿ ಓವರ್‌ಕ್ರೌಡೆಡ್ ಆಗಿರುವ ಅಧಿಕಾರಿಗಳ ಬಳಗವನ್ನು ಆದಷ್ಟೂ ಕಡಿಮೆ ಮಾಡಿ ಎಂದರೆ ಇದರಲ್ಲಿ ಶೇಕಡಾ 25 ರಷ್ಟು ಜನರನ್ನು ತೆಗೆದುಬಿಡಬಹುದು. ಅಲ್ಲದೆ ಈಗ ನೂರು ಕೋಟಿ ರೂಪಾಯಿಗಳ ವೆಚ್ಚದಿಂದ ತಯಾರಾದ ಶರಾವತಿ ಯೋಜನೆಯು ಜನರೇಟಿಂಗ್ ಸ್ಟೇಷನನ್ನು ಉತ್ಪಾದನೆ ಪ್ರಾರಂಭ ಮಾಡುವ ಹೊತ್ತಿಗೆ ಸರಕಾರದ ವತಿಯಿಂದಲೇ ಕೆಲವು ಕೈಗಾರಿಕೆಗಳನ್ನು ಮಾಡಿದರೆ ಅದರಿಂದ ನಿರುದ್ಯೋಗಿಗಳಾಗಿರುವ ಜನರನ್ನೂ ಇದರಲ್ಲಿ ಸೇರಿಸಲು ಸಾಧ್ಯವಾಗುತ್ತದೆ, ಇದನ್ನು ಸರಕಾರ ಯೋಚನೆ ಮಾಡಬೇಕು. ಪ್ರತಿಯೊಂದು ಕಡೆಯಲ್ಲಿಯೂ ಹೊಸದಾಗಿ ಇಲಾಖೆಗಳನ್ನು ತೆರೆದು ಅದಕ್ಕಾಗಿ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಲು ಹೋಗಬೇಡಿ. ಇಲಾಖೆಗಳಿಂದ ರಿಟ್ರೆಂಚ್ ಆದವರನ್ನೂ ಬೇರೆ ಕೈಗಾರಿಕೆಗಳಲ್ಲಿ ಸೇರಿಸಬಹುದು. ಆಗ ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿಯೂ ಅನುಕೂಲವಾಗುತ್ತದೆ—ಎಂದು ಸಲಹೆ ಮಾಡಬೇಕಾಗಿದೆ. ಸರಕಾರದ ಹಣಕಾಸಿನ ಸ್ಥಿತಿ ಸರಿಯಾಗಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನಾನು ಇಲ್ಲಿ ಸುಮಾರು ಐದು ವರ್ಷಗಳಿಂದಲೂ ಹೇಳುತ್ತಲೇ ಬರುತ್ತಿದ್ದೇನೆ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರಿಗಳನ್ನು ಪ್ರೈವೇಟು ಸೆಕ್ಟರ್‌ವತಿಯಿಂದ ಮಾಡುವುದನ್ನು ಬಿಟ್ಟು ಸರಕಾರದ ವತಿಯಿಂದಲೇ ಮೈಸೂರು ರಾಜ್ಯದ ಸುತ್ತಮುತ್ತಲಿನಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಹಿಂದೆ ನಮ್ಮ ರಾಜ್ಯದಲ್ಲಿ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರಂತಹ ಮಹಾನುಭಾವರು ಒಂದು ಸಲ ಹೇಳಿದ್ದರು, industrialise or perish ಎಂದು. ಅವರು ಸುಮಾರು ನೂರು ವರ್ಷ ಕಾಲ ಬಾಳಿ ಬದುಕಿದಂತಹ ಮಹಾನುಭಾವರು ಅವರ ಬಗ್ಗೆ ನಮ್ಮ ಮೈಸೂರು ರಾಜ್ಯ ಯಾವ ರೀತಿ ನಡೆದುಕೊಂಡಿದೆ ಎಂದರೆ ಮೈಸೂರು ರಾಜ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಅದರ ಮ್ಯಾಪೇ ಇಲ್ಲ. ಇಷ್ಟು ಕೀಳು ಪರಿಸ್ಥಿತಿಗೆ ಬರಲು ಇದಕ್ಕೆ ಕಾರಣ ಯಾರು ? ತಾವು ಪ್ರೈವೇಟು ಎಂಟರ್‌ಪ್ರೈಸ್ ಆಗಲೀ ಪಬ್ಲಿಕ್ ಸೆಕ್ಟರ್ ಆಗಲೀ ಅದರಲ್ಲಿ ನೀವು ಏನು ಮಾಡಬೇಕಾಗಿದೆ ಏನೇನು ಸವಲತ್ತುಗಳನ್ನು ಕೊಟ್ಟಿದ್ದೀರಿ ಎಂದು ಇಲ್ಲಿ ನಾನು ಕೇಳುತ್ತಿದ್ದೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕೆಲವು ಕಡೆಗಳಲ್ಲಿ ಕೋ-ಆಪರೇಷನ್ ಬೆಳೆಯಬೇಕೆಂದು ಎಲ್ಲ ಕಡೆಗಳಲ್ಲಿಯೂ ಕೋ-ಆಪರೇಟೀವ್ ಷುಗರ್ ಮಿಲ್ಸ್ ಎಂದು ಮಾಡಬೇಕೆಂದು ಹೊರಟು ಎಲ್ಲ ಕಡೆಗಳಲ್ಲಿಯೂ ಸಕ್ಕರೆ ಕಾರ್ಖಾನೆಗಳಾದವು ಆದರಿಂದ ಬೇಕಾದಷ್ಟು ಸಕ್ಕರೆ ಬರುವಂತೆ ಮಾಡಿ ಈಗ ಎಲ್ಲರಿಗೂ ಇಲ್ಲಿ ಷುಗರ್ ಕಂಪ್ಲೆಂಟು ಜಾಸ್ತಿಯಾಗಿದೆ ಎಂದು ಹೇಳುತ್ತ ಬರುತ್ತಿದ್ದಾರೆ. ಇಷ್ಟು ಷುಗರ್ ಫ್ಯಾಕ್ಟರಿಗಳಾದರೂ ಏತಕ್ಕಾಗಿ ಮಾಡಬೇಕು ? ಗದಗ್‌ನಲ್ಲಿ ಒಂದು ಷುಗರ್ ಮಿಲ್ ಆಗಬೇಕೆಂದು ಮಾಡಿದರು. ಮೈಸೂರು ಸರಕಾರದ ಅರ್ಥಮಂತ್ರಿಗಳು ಯುವಕರು ಬಹಳ ಎಚ್ಚರಿಕೆಯಿಂದ ಇರತಕ್ಕವರು ಎಂದು ನಾನು ಅವರಿಗೆ ಇಲ್ಲಿಂದ ಯಾವ ಸರ್ಟಿಫಿಕೇಟನ್ನೂ ಕೊಡಲಿಲ್ಲವಲ್ಲ. ಅವರ ಪಕ್ಷದ ಸದಸ್ಯರೇ ಅವರಿಗೆ ಸರ್ಟಿಫಿಕೇಟು ಕೊಟ್ಟು ಅದನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕೆಂದು ಹೇಳಿದರು. ನಾನು ಹೇಳುವುದು ಜನಕ್ಕೆ ಆಹಾರ ಧಾನ್ಯ ದೊರಕಿಸಿ ಕೊಡಿ ಎಂದು. ಇದರ ಬಗ್ಗೆ ಏನಾದರೂ ಮಾಡಿದ್ದೀರಾ ? ಇಲ್ಲೆಲ್ಲಾ ಎಂದರೆ ಗದಗ್‌ನಲ್ಲಿ ಒಂದು ಕಾಟನ್ ಸ್ಪಿನಿಂಗ್ ಮಿಲ್ ಮಾಡುವುದಕ್ಕಾಗಿ 12 ಸಾವಿರ ಸ್ಪಿಂಡಲ್‌ಗಳನ್ನು ಕೊಟ್ಟು ಇನ್ನೊಂದು ಕಡೆ 12 ಸಾವಿರ ಸ್ಪಿಂಡಲ್‌ಗಳನ್ನು ಕೊಟ್ಟು ಇಂಡಸ್ಟ್ರಿ ಮಾಡಿದರೆ ಹಣಕಾಸಿನ ಸಚಿವರಿಗೆ ತೃಪ್ತಿಯಾಯಿತೇ ? ನಮ್ಮ ದೇಶದಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ಮದರಾಸು, ಬೊಂಬಾಯಿ, ಕೇರಳ ಹಾಗೂ ಇತರ ಭಾಗಗಳಿಗೆ ಕೊಟ್ಟು ಅವರು ಕೈಗಾರಿಕೆಗಳನ್ನು ಮಾಡುವಂತೆ ನೀವು ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೀರಿ ನಿಮ್ಮ ನಾಲ್ಕನೇ ಯೋಜನೆಯಲ್ಲಿ ಎಂದು ಇಲ್ಲಿ ಕೇಳಬೇಕಾಗಿದೆ, ಮತ್ತು ಎಷ್ಟು ಹಣವನ್ನು ಇದಕ್ಕಾಗಿ ಎಲ್ಲಿ ಒದಗಿಸಿದ್ದೀರಿ ಎನ್ನುವುದನ್ನು ನೋಡಿದರೆ ನಿಮಗೇ ಗೊತ್ತಾಗುತ್ತದೆ.

[MR. SPEAKER in the Chair.]

ಮೈಸೂರು ಕೈಗಾರಿಕೆಯಲ್ಲಾಗಲಿ ಅಥವಾ ವ್ಯವಸಾಯ ಮುಂತಾದ ಯಾವುದೇ ಕ್ಷೇತ್ರದಲ್ಲಾಗಲಿ ಮುಂದುವರೆದಿಲ್ಲ. ಅಂದಮೇಲೆ ಕಳೆದ 18 ವರ್ಷಗಳಿಂದ ಮಾಡಿರುವುದೇನು ? ನಾನು ಮಂತ್ರಿಯಾಗಬೇಕು, ನನ್ನ ಕಡೆಯವರಿಗೆ ಐ. ಎ. ಎಸ್. ಮತ್ತು ದೊಡ್ಡ ದೊಡ್ಡ ಹುದ್ದೆಗಳನ್ನು ಕೊಡಿಸಬೇಕು, ಪ್ರಮೋಷನ್ ಕೊಡಿಸಬೇಕು ಎಂದು ಯೋಚನೆಮಾಡುತ್ತಾ ಇದರಲ್ಲೇ ಕಾಲ ಕಳೆದಿದ್ದಾರೆ. ಹೀಗೆ ಕಾಲಹರಣ ಮಾಡಿರುವುದರಿಂದ ಯಾವುದನ್ನು ಅಭಿವೃದ್ಧಿಪಡಿಸುವುದಕ್ಕೂ ಕಾಲವಾಗಲಿ ಶಕ್ತಿಯಾಗಲಿ ಇಲ್ಲದೆ ಹೋಗಿದೆ. ವ್ಯವಸಾಯವನ್ನೇ ಒಂದು ಕೈಗಾರಿಕೆ ಎಂದು ಭಾವಿಸಬೇಕು ಎಂದು ಅನೇಕರು ಒತ್ತಾಯ ಮಾಡಿದರು. ವ್ಯವಸಾಯವನ್ನು ಅಭಿವೃದ್ಧಿಮಾಡುವುದಕ್ಕೆ ಒಂದು ಆಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಮಾಡಬೇಕೆಂದು ಅಣ್ಣಾರಾಯರು ಹೇಳಿದಮೇಲೆ ಮೊನ್ನೆತಾನೆ ಮಾತುಕೊಟ್ಟಿರಿ. ನೀವು ಬರೀ ಅಧಿಕಾರವನ್ನು ಹಂಚಿಕೆ ಮಾಡಿಕೊಳ್ಳುವುದರಲ್ಲೇ ಕಾಲ ಕಳೆದಿರಿ. ವಯಸ್ಸಾಗಿರುವ ಮುಖ್ಯಮಂತ್ರಿಗಳಿಗೆ ಇಲ್ಲದಿರುವ ಹೊರೆ ಹೊರಿಸಿದ್ದೀರಿ.

Bell rang

I do not want to displease the Chair and at the same time, I do not want to encroach upon others time. Please give me another five minutes.

Mr. SPEAKER.—If the party allows, I have no objection.

Sri C. J. MUCKANNAPPA.—Let not a particular Member be blamed by other Members. The chair is putting me in an embarrassing position.

Mr. SPEAKER.—I am not putting member in an embarrassing position. The Hon'ble Member, by his conduct, is putting me in an embarrassing position.

Sri C. J. MUCKANNAPPA.—What is that conduct, Sir ?

Mr. SPEAKER.—Taking the time of others, by 10 minutes, 20 minutes, and so on is not fair. The Member may do what he pleases. All the time that he takes, will be set off against his party.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಣಕಾಸಿನ ಸಚಿವರು ಬಹಳ ಕಷ್ಟಪಟ್ಟು ಒಂದು ಕಂಪ್ಯಾರಿಟಿವ್ ಸ್ಟೇಟ್‌ಮೆಂಟ್ ತಯಾರುಮಾಡಿ ಕೊಟ್ಟಿದ್ದಾರೆ. ಆದರೆ ಈ ದಿವಸ ವ್ಯವಸಾಯಕ್ಕೆ ಖರ್ಚುಮಾಡಿರುವುದೆಷ್ಟು. ಎಷ್ಟು ಭೂಮಿ ಸಾಗುವಳಿಗೆ ಬಂದಿದೆ, ಉತ್ಪತ್ತಿ ಎಷ್ಟಾಗಿದೆ ಎಂಬ ವಿಚಾರಗಳನ್ನೇನೂ ತಿಳಿಸಿರುವುದಿಲ್ಲ. ಈ ದಿವಸ 20 ಲಕ್ಷ ಟನ್ ಉತ್ಪತ್ತಿ ಕಡಮೆಯಾಗಲು ಕಾರಣವೇನು ? ಇದನ್ನು ಅರ್ಥಮಾಡಿಕೊಳ್ಳಬೇಕು. ಇದಕ್ಕೆ ಕಾರಣ ಇರಬೇಕು. ನೀವು ವ್ಯವಸಾಯವನ್ನು ಉಪೇಕ್ಷೆಮಾಡಿದ್ದೀರಿ. ಎಷ್ಟು ಟ್ರಾಕ್ಟರುಗಳನ್ನು ಕೊಂಡುಕೊಳ್ಳಲಾಗಿದೆ. ಗೊಬ್ಬರ ಗುಳ ಎಷ್ಟುಕೊಡಲಾಗಿದೆ ಎಂಬ ವಿವರಗಳನ್ನೆಲ್ಲಾ ಹೇಳಿದ್ದರೆ ಸ್ವಲ್ಪ ಸಮಾಧಾನವಾಗುತ್ತಿತ್ತು. ಈ ದಿವಸ ನಮ್ಮ ರಾಜ್ಯದಲ್ಲಿ ಹೆಚ್ಚು ಆಹಾರ ಬೆಳೆದು.

Mr. SPEAKER.—I am bringing it to the notice of the Whip because no Member of his party should object to his taking 40 minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಒತ್ತಡ ತರುವುದಾದರೆ ನಾನು ಕುಳಿತು ಬಿಡುತ್ತೇನೆ, ಸ್ವಾಮಿ.

Mr. SPEAKER.—He may do whatever he likes. But, let him not try to cast reflections.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಅವಕಾಶ ಕೊಡುತ್ತೀರೆಂದು ನಂಬಿದ್ದೆ ವಿಪ್‌ಕೂಡ ಅವಕಾಶ ಕೊಡುತ್ತಾರೆ.

Mr. SPEAKER.—Let him give one hour. I do not object.

Sri C. J. MUCKANNAPPA.—Thank you Sir. ಇಷ್ಟು ಹೇಳಿ ಇಲ್ಲಿಗೇ ನಿಲ್ಲಿಸಿ ಕುಳಿತುಕೊಳ್ಳುತ್ತೇನೆ.

Mr. SPEAKER.—I do not mind if the Member sits. He is thinking that I am bringing about disharmony between him and his Whip.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—23 ರಿಂದ 3 ನೆಯ ತಾರೀಖಿನವರೆಗೆ ನಾನು ಕುಳಿತು ಲೆಕ್ಕ ಹಾಕಿದೆ......

Mr. SPEAKER.—I know that it is suggested that 360 minutes have been taken by me. But most of it has been taken on the Points of orders raised by Members. Members raise Points of Orders. I know that remark has been made by the Hon'ble Member, and that is why I am taking this opportunity to explain the postion. This Member seems to have remarked that 360 minutes have been taken by the Speaker. If that is correct, it is on account of the Points of orders raised. by Members. Further observation is that on the Points of Orders raised, rulings have not been given. There must be consistency in what is said.

Hon'ble Member, Sri Kambli may begin his speech.

† ಶ್ರೀ ಟಿ. ಕೆ. ಕಂಬ್ಳಿ (ಕುಂದುಗೋಳ).—ಮಾನ್ಯ ಅಧ್ಯಕ್ಷರೆ, 1966-67 ನೆಯ ಸಾಲಿನ ಆಯ ವ್ಯಯ ಪಟ್ಟಿಯನ್ನು ಸಮರ್ಥ ರೀತಿಯಿಂದ ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಸೂಚಿಸ ಬಯಸುತ್ತೇನೆ. ಕೆಲವು ಮಾನ್ಯ ಸದಸ್ಯರು ಈ ಅಯವ್ಯಯ ಪಟ್ಟಿಯನ್ನು ಬಹಳ ಕಟುವಾದ ರೀತಿಯಲ್ಲಿ ಟೀಕೆಮಾಡಿದರು. ಅದಕ್ಕೆ ನನ್ನಮತ ಹೀಗಿದೆ. ಯಾವಾಗಲೂ ಟೀಕೆ ಇರಬೇಕು, ಆದರೆ ವಿಘಾತಕವಾಗಿರಬಾರದು ಎಂಬುದು ನನ್ನ ಮೊದಲ ಸೂಚನೆ. ಏಕೆಂದರೆ ಇಲ್ಲಿ ಕೂಡಿರುವ ನಾವೆಲ್ಲರೂ ಕೆಲಸಗಾರರು. ನಮ್ಮ ಮುಂದಿರುವ ಕೆಲಸ ಸುಗಮವಾಗಿ ಸಾಗಬೇಕೆಂಬುದೇ ನಮ್ಮೆಲ್ಲರ ಉದ್ದೇಶ. ಆ ಕೆಲಸ ಕುಂಠಿತವಾಗುವ ರೀತಿಯಲ್ಲಿ ಟೀಕೆಮಾಡಿದರೆ ಕೆಲಸವಾಗುವುದಿಲ್ಲ ವೆಂಬುದು ನನ್ನ ಅಭಿಪ್ರಾಯ. ಅದಕ್ಕಾಗಿ ಟೀಕೆ ಮಾಡುವುದರಲ್ಲಿ ಒಂದು ಇತಿಮಿತಿ ಇರಬೇಕೆಂದು ಸವಿನಯವಾಗಿ ಸೂಚಿಸುತ್ತೇನೆ.

ಎಲ್ಲ ಜನರೂ ಈ ವರ್ಷದ ಬಜೆಟ್ ಉಳಿತಾಯದ ಬಜೆಟ್ಟಾಗುವುದಿಲ್ಲ, ಕೊರತೆ ಬಜೆಟ್ಟಾಗು ವುದು ಎಂದು ಭಯಪಟ್ಟಿದ್ದರು. ಆದರೆ ಬಹಳ ಚತುರತೆಯಿಂದ, ಬುದ್ಧಿವಂತಿಕೆಯಿಂದ ಸರ್‌ಪ್ಲಸ್ ಬಜೆಟ್ಟನ್ನು ಮಾಡಿರುವುದರಿಂದ ಮಾನ್ಯ ಆರ್ಥಿಕ ಸಚಿವರು ಅಭಿನಂದನೆಗೆ ಅರ್ಹರಾಗಿದ್ದಾರೆ. ಏಕೆಂದರೆ, ಈಗ ಕೆಲವು ದುರ್ಘಟನೆಗಳು ನಡೆದಿವೆ, ಆಹಾರದ ಪರಿಸ್ಥಿತಿ ಭೀಕರವಾಗಿದೆ, ಹೀಗೆ ಬಹಳ ಕಠಿಣ ಪರಿಸ್ಥಿತಿ ಇದೆ. ಆಹಾರದ ಕೊರತೆ ಬಹಳ ದಿವಸಗಳಿಂದಲೂ ಇದೆ. ಹಿಂದೆ ಪರ ದೇಶದವರು ರಾಜ್ಯಭಾರ ನಮ್ಮದೇಶದಲ್ಲಿ ಮಾಡುತ್ತಿದ್ದಾಗ ಇಂಥ ಪರಿಸ್ಥಿತಿ ಬಂದಾಗ ಕೆಲವರು ಸಾಯುತ್ತಿದ್ದರು. ಆದರೆ ಈಗ ಸ್ವರಾಜ್ಯ ಬಂದಿರುವುದರಿಂದ ನಮ್ಮ ಸರ್ಕಾರದವರು ಬಹಳ ಕಷ್ಟ ಪಟ್ಟು ಎಲ್ಲಾ ರೀತಿಯಿಂದಲೂ ಸಹಾಯಮಾಡಿ ಬಹಳ ಸುಗಮ ರೀತಿಯಿಂದ ಆಡಳಿತ ನಡೆಸಿಕೊಂಡು ಹೋಗಿದ್ದಾರೆ. ಇನ್ನೂ ಸ್ವಲ್ಪ ಆಸ್ಥೆಯಿಂದ ಕೆಲಸಮಾಡಬೇಕೆಂದು ಅಷ್ಟುಮಾತ್ರ ನಾನು ಹೇಳ ಬಲ್ಲೆ. ಬಹಳ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸಮಾಡಬೇಕು. ಈಗ ಮಳೆ ಇಲ್ಲದೆ ತೊಂದರೆಯಾ ಗಿದೆ. ಆದುದರಿಂದ ನೀರಾವರಿ ಸೌಕರ್ಯ ಜಾಗ್ರತೆ ಒದಗಬೇಕು, ಗೊಬ್ಬರ, ಬೀಜ ಒದಗಿಸ ಬೇಕು.

12 NOON

ನಮ್ಮ ರಾಜ್ಯದೊಳಗೆ ನೀರಾವರಿ ಸೌಕರ್ಯ ಬಹಳ ಕಮ್ಮಿಯಿದೆ ಬೇರೆ ರಾಜ್ಯಗಳಲ್ಲಿ ನೀರಾ ವರಿ ಬಹಳ ಜಾಸ್ತಿ ಇದೆ. ಹಳೇಮೈಸೂರು ಏನಿತ್ತು, ಅದು ಹೋಗಿ ವಿಶಾಲ ಮೈಸೂರಾದಮೇಲೆ ಈ ನೀರಾವರೀ ಸೌಕರ್ಯ ಬಹಳ ಕಡಿಮೆಯಾಗಿದೆಯೆಂದು ನನ್ನ ಅಭಿಪ್ರಾಯ. ಹಳೇಮೈಸೂರಿನಲ್ಲಿ ರುವ ನೀರಾವರಿ ಸೌಕರ್ಯಗಳು ಹೊಸ ಮೈಸೂರಿಗೆ ವಿಸ್ತರಣೆ ಮಾಡಬೇಕೆಂದು ತಾವು ತಿಳಿಯ ಬೇಕು. ಘಟಪ್ರಭಾ, ಮಲಪ್ರಭಾ, ಕೃಷ್ಣಾ ನೀರಾವರಿ ಕೆಲಸಗಳು ಬಹಳ ಸ್ಥಗಿತವಾಗಿದೆ, ತ್ವರಿತಗತಿಯಿಂದಾಗಬೇಕೆಂದು ಹೇಳುತ್ತೇನೆ. ಘಟಪ್ರಭಾ, ಯೋಜನೆಯನ್ನು ತೆಗೆದುಕೊಂಡು 6-7 ವರ್ಷವಾದರೂ ಸಹ ಅದರ ಕೆಲಸ ಕುಂಠಿತವಾಗಿದೆ, ಇದು 30 ಕೋಟಿ ರೂಪಾಯಿಗಳ ಯೋಜನೆ

3-4 ಲಕ್ಷ ಎಕರೆ ಜಮೀನುಗಳಿಗೆ ನೀರಾವರಿಯಾಗುವಂಥದ್ದು. ಆದರೆ ಅದನ್ನು ಬಹಳ ಕಡಿಮೆ ಆಸಕ್ತಿಯಿಂದ ನೋಡುತ್ತಾರೆಂದು ಹೇಳಬಲ್ಲೆ. ಹೋದವರ್ಷ ಈ ಯೋಜನೆಗೆ ಒಂದು ಕೋಟಿ 46 ಲಕ್ಷ ಇದ್ದರೆ, ಈ ವರ್ಷ ಬರೀ 45 ಲಕ್ಷ ಇಟ್ಟಿದ್ದಾರೆ. ಅದು ಬಹಳ ಕಡಿಮೆಯೆಂದು ಹೇಳಬಲ್ಲೆ. ಈ ಯೋಜನೆ ಹೆಚ್ಚು ಹಣ ಇಟ್ಟು ಜಾಗ್ರತೆ ಕೆಲಸವಾದರೆ, ಆಹಾರ ಸಮಸ್ಯೆ ಹೋಗಬಹುದು. ಇದೇ ರೀತಿಯಲ್ಲಿ ನವಿಲತೀರ್ಥ ಯೋಜನೆಗೂ ಸಹ ಹೆಚ್ಚಿನರೊಕ್ಕ ಇಟ್ಟು ತ್ವರಿತಗತಿಯಿಂದ ಕೆಲಸ ಮಾಡಿದರೆ ನಮ್ಮ ಜಿಲ್ಲೆಗೇ ಅಲ್ಲದೆ ಬೆಳಗಾಂ, ಧಾರವಾಡ ಜಿಲ್ಲೆಗಳಿಗೂ ಹೆಚ್ಚಿನ ಅನುಕೂಲ ವಾಗುತ್ತದೆ. ಹೋದ ಸಾಲಿಗೆ ಈ ಯೋಜನೆಗೆ 87 ಲಕ್ಷ ರೂಪಾಯಿ ಇಟ್ಟು ಅದರಲ್ಲಿ ಕೇವಲ 60 ಲಕ್ಷವಾತ್ರಖರ್ಚಾಗಿದೆ,ಈ ಸಾಲಿಗೆ 70 ಲಕ್ಷ ಇಟ್ಟಿದ್ದಾರೆ.ಇದನ್ನು ನೋಡಿದರೆ ಬಹಳಕಡಿಮೆಯೆಂದು ನನ್ನ ಅಭಿಪ್ರಾಯ. ಆದ್ದರಿಂದ ಹೆಚ್ಚಿನ ದುಡ್ಡು ಇಟ್ಟು ಬೇಗನೆ ಮುಗಿಸಿದರೆ ನೀರಾವರಿ ಸಮಸ್ಯೆ ಬಗೆಹರಿಯುತ್ತದೆ. ಅದೇ ಪ್ರಕಾರ ಕೃಷ್ಣಾನದಿ ಮತ್ತು ಆಲಮಟ್ಟಿ ಯೋಜನೆಗಳನ್ನು ಮಾಡಿದರೆ ನಮ್ಮ ಹೊಸ ಮೈಸೂರಿಗೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ನಮ್ಮ ಹೊಸ ಮೈಸೂರೊಳಗೆ ನೀರಾವರಿ ಬಹಳ ಕಮ್ಮಿಯಿದೆ. ಇನ್ನೂ 3-4 ನೀರಾವರಿ ಯೋಜನೆಗಳಿವೆ, ಅವುಗಳನ್ನು ಬೇಗನೆ ಮಾಡಬೇಕೆಂದು ಸರ್ಕಾರದಲ್ಲಿ ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ. ನೀರಿನದು ಆದನಂತರ ಬೀಜದ್ದು ಅಷ್ಟೇ ಅವಶ್ಯಕ. ಗೋದಿ, ಜೋಳ, ರಾಗಿ, ಬತ್ತ, ನವಣೆ, ಸಜ್ಜೆ ಇಂಥವು ಏನಿವೆ, ಇವುಗಳ ಬೀಜವನ್ನು ಪರದೇಶದಿಂದ ತರಿಸಬೇಕು. ನಮ್ಮ ದೇಶದ ಬೀಜಗಳನ್ನು ಉಪಯೋಗಿಸಿ ದರೆ ಹೆಚ್ಚು ಫಸಲು ಆಗುವುದಿಲ್ಲ.

ಅದೇ ಪರದೇಶದ ಹೈಬ್ರಿಡ್ ಸೀಡ್ಸ್ ಉಪಯೋಗಿಸಿದರೆ ಒಂದಕ್ಕಿಂತ ನಾಲ್ಕರಷ್ಟು ಬೆಳೆಯು ಬಹುದೆಂದು ನನ್ನ ಅಭಿಪ್ರಾಯ. ಒಂದು ಎಕರೆಗೆ ಕೇವಲ 4 ಚೀಲ ಮುಂಚೆ ಬರುತ್ತಿತ್ತು, ಈಗ ಒಂದು ಎಕರೆಗೆ 15 ಚೀಲ ಬೆಳೆಯಾಗುತ್ತದೆ, ಈ ಹೈಬ್ರಿಡ್ ಉಪಯೋಗಿಸುವುದರಿಂದ. ಆದ್ದರಿಂದ ಈ ಹೈಬ್ರಿಡ್ ಬೀಜ ಅವಶ್ಯಕ. ಎಲ್ಲಾ ಕಡೆಯೂ ಈ ಹೈಬ್ರಿಡ್ ಪುರವಟ್ಟಾಗುವುದಿಲ್ಲ. ನಮ್ಮರ್ ಕ್ರಾಪ್ ಕಾಲದಲ್ಲಿ ಈ ಬೀಜವು ಹೆಚ್ಚಿನ ಪ್ರಮಾಣದ್ದು ಬೇಕು. ಸರ್ಕಾರದವರು ಇದರ ಕಡೆ ಹೆಚ್ಚಿನ ಗಮನ ಕೊಡಬೇಕು. ಬೀಜ ಸರಿಯಾಗಿ ಸಿಗದಿದ್ದರೆ ಆಹಾರದ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಸಕಾಲದಲ್ಲಿ ಎಲ್ಲಾ ತರಹ ಹೈಬ್ರಿಡ್ ಬೀಜಗಳನ್ನು ಒದಗಿಸಬೇಕು. ಅದೇ ಪ್ರಕಾರ ಗೊಬ್ಬರ ಒದಗಿಸಬೇಕು. ಬೀಜ ಏನು ಒಂದು ಎಕರೆಗೆ ಕೊಡುತ್ತಾರೆ, ಅದರ 10ರಷ್ಟು ಗೊಬ್ಬರ ವನ್ನು ಒಂದು ಎಕರೆಗೆ ಕೊಡಬೇಕು. ಬೀಜ, ಗೊಬ್ಬರ, ನಂತರ ಬುಲ್‌ಡೋಜರ್ ಮತ್ತು ಟ್ರಾಕ್ಟರ್‌ಗಳನ್ನು ಒದಗಿಸಬೇಕು. ನಮ್ಮಲ್ಲಿ ಟ್ರಾಕ್ಟರ್‌ಗಳು ಸಿಕ್ಕುವುದಿಲ್ಲ. ಸಿಕ್ಕಿದರೂ ಕೂಡ ಒಬ್ಬ ರೈತರಿಗೆ ಸಿಕ್ಕಬೇಕಾದರೆ ಬಹಳ ಕಷ್ಟವಿದೆ. ಒಂದು ಟ್ರಾಕ್ಟರ್ ಬೆಲೆ ಏನಿದೆ ಅದರ 3 ಪಟ್ಟು 4 ಪಟ್ಟು ಸರ್ವಿಸಸ್ ಕೊಡುತ್ತದೆ. ಮತ್ತೆ ಅದನ್ನು ರೈತನು 20 ಸಾವಿರಕ್ಕೆ ಮಾರುತ್ತಾನೆ. ಇದರ ಅವಶ್ಯಕತೆ ಬಹಳ ಜಾಸ್ತಿಯಿರುವುದರಿಂದ ರೈತರಿಗೆ ಸರಿಯಾಗಿ ಮುಟ್ಟುವಂತೆ ಮತ್ತು ಸರಿಯಾದ ಬೆಲೆಗೆ ಸಿಕ್ಕುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು. ಒಂದು ಮಿಷನ್ ರಿಜಿಸ್ಟರ್ ಆಗಬೇಕಾದರೆ 3 ತಿಂಗಳಾಗಬೇಕು. ಅದಕ್ಕೆ ರಿಜಿಸ್ಟ್ರೇಷನ್ ಕೋಟಾ ಸಿಸ್ಟಮ್ ಇರಬೇಕು. ಹಳೇ ಮೈಸೂರಿನಲ್ಲಿ ಈ ಸಿಸ್ಟಮ್ ಇಲ್ಲ. ಬೊಂಬಾಯಿಯಲ್ಲಿ ಇದೆ. ಒಮ್ಮೆ ಸ್ಯಾಂಕ್ಷನ್ ಆದರೆ ಕಡಿಮೆಯೆಂದರೆ 15 ದಿವಸ ಅಥವಾ 1 ತಿಂಗಳೊಳಗೆ ಅದು ರೈತನಿಗೆ ಮುಟ್ಟ ಬೇಕು. ಏಕೆಂದರೆ ಈಗ 6 ತಿಂಗಳಾದರೂ ಸಹ ರೈತನಿಗೆ ಮುಟ್ಟುತ್ತಾ ಇಲ್ಲ. ಒಂದು ಸ್ಕೀಮನ್ನು ಹೀಗೆ ಮಾಡಬೇಕು, ಏನೆಂದರೆ ರೈತನು ಬೆಳೆಯುವ ಬೆಳೆಗೆ ಕ್ರಾಪ್ ಪ್ರೊಡಕ್ಷನ್ ವಿಮೆಯನ್ನು ಮಾಡಿಸಿದರೆ ಸಮಸ್ಯೆ ಬಗೆಹರಿದೀತು. ನಮ್ಮ ರಾಜ್ಯದೊಳಗೆ ಇದನ್ನು ಮಾಡಬೇಕು. ರೈತನಿಗೆ ಸ್ಟ್ಯಾಂಡರ್ಡ್ ಎಕರೆ ಮೇಲೆ, ಯಾರು ಇಂತಿಷ್ಟು ಎಕರೆ ಬಿತ್ತುತ್ತಾರೋ ಅವರಿಗೆ ಅಸೆಸ್‌ಮೆಂಟ್ ಇಲ್ಲವೆಂದು ಮಾಡಿದರೆ ಬೇಗನೆ ಆಹಾರ ಸಮಸ್ಯೆ ಬಗೆಹರಿಯುತ್ತದೆ. ಬೇರೆ ಕಡೆ ಲಕ್ಷಾಂತರ ರೂಪಾಯಿಗಳು ಹೋಗುವುದಕ್ಕಿಂತ ನಮ್ಮ ಒಕ್ಕಲಿಗರಿಗೆ ಈ ರೀತಿಯ ಅನುಕೂಲಗಳನ್ನು ಮಾಡಿದರೆ ಅನ್ಯಾಯವಿಲ್ಲ. ರೈತನು ಒಂದು ಅಥವಾ ಎರಡು ಸ್ಟ್ಯಾಂಡರ್ಡ್ ಎಕರೆಗೆ ಆಹಾರ ಧಾನ್ಯ ಬಿತ್ತಿದರೆ ಅವನಿಗೆ ಅಸೆಸ್‌ಮೆಂಟ್ ಮಾಫಿ ಮಾಡಿದರೆ, ಆಹಾರ ಧಾನ್ಯದ ಸಮಸ್ಯೆ ಬಹಳ ಸುಲಭವಾಗಿ ಬಗೆಹರಿದೀತು ಎಂದು ನನ್ನ ಭಾವನೆ. ಇದನ್ನು ಆದಷ್ಟು ಜಾಗ್ರತೆ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ.

ನಮ್ಮ ಕಡೆ ಹಿಂದೆ ಚಿಕ್ಕ ಪುಟ್ಟ ಅರಸರು ಇದ್ದರು. ಸಾಂಗ್ಲಿ, ರಾಮದುರ್ಗ, ಮುಧೋಳ ಮುಂತಾದ 18 ಸ್ಟೇಟ್‌ಗಳು ಇದ್ದವು. ಅಲ್ಲಿಯ ಪ್ರದೇಶ ಬಹಳ ಹಿಂದುಳಿದಿದೆ. ಅಲ್ಲಿ ರಸ್ತೆ ಇಲ್ಲ, ಕುಡಿಯುವ ನೀರಿಲ್ಲ. ಅಲ್ಲಿಯ ಹಿಂದುಳಿದ ಭಾಗಗಳಿಗೆ ಹೆಚ್ಚಿನ ಗಮನಕೊಡಬೇಕೆಂದು ಹೇಳ ಬಯಸುತ್ತೇನೆ. ರಸ್ತೆಗೆ ಬಹಳ ದುಡ್ಡು ಖರ್ಚುಮಾಡುತ್ತೀರಿ. ಅದರಿಂದ, ಎಲ್ಲಿ ಹಿಂದುಳಿದ

(ಶ್ರೀ ಟಿ. ಕೆ. ಕಂಬ್ಳಿ)

ಹಾಗ ಇದೆಯೋ ಅಲ್ಲಿ ಇವನ್ನೆಲ್ಲಾ ಸರಿಪಡಿಸಬೇಕೆಂದು ಕೇಳಿಕೊಂಡು, ನನಗೆ ಇಷ್ಟು ಮಾತ ನಾಡಲು ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, 1966-67ನೇ ವರ್ಷದ ಆಯುವ್ಯಯ ಪಟ್ಟಿಯನ್ನು ನಮ್ಮ ಹೊಸ ಅರ್ಥಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರು ಈ ಸಭೆಯಲ್ಲಿ ಮಂಡಿಸಿದ್ದಾರೆ. ಹಿಂದೆ ಮಂಡಿಸಿದಂತಹ ಶ್ರೀಮಾನ್ ಜತ್ತಿಯವರು ಕೂಡಾ ಈ ಆಯುವ್ಯಯ ಪಟ್ಟಿಯನ್ನು ಮಂಡಿಸಿದಾಗ, ಸರ್ಕಾರದ ಧೋರಣೆ ಮತ್ತು ಆರ್ಥಿಕ ಪರಿಸ್ಥಿತಿ ಕೆಡುತ್ತಾ ಬಂದಿದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಹೇಳಿದ್ದಾರೆ. ಬಹುಮತ ಪಡೆದಿರತಕ್ಕಂತಹ ಈ ಕಾಂಗ್ರೆಸ್ ಸರ್ಕಾರವು ಈ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬಹುದು ಮತ್ತು ಒಳ್ಳೆಯ ಆಡಳಿತ ಬರಬಹುದೆಂದು ನಾವು ಈ ನಮ್ಮ ನಾಲ್ಕು ವರ್ಷಗಳ ಅನುಭವದಲ್ಲಿ ನಿರೀಕ್ಷಿಸುತ್ತಾ ಇದ್ದೆವು. ಆದರೆ ನಮ್ಮ ಆಶೆ ನಿರಾಶೆಯಾಯ್ತು. ಅವರಿಗೆ ಆ ಯೋಗ್ಯತೆ ಇಲ್ಲ. ನಮ್ಮ ಆರ್ಥಿಕ ಪರಿಸ್ಥಿತಿಯು ಬಹಳ ಶೋಚನೀಯ ಮತ್ತು ಅಶಕ್ತತೆಯ ಒಂದು ಪರಿಸ್ಥಿತಿಯನ್ನು ಬಹಳ ಕಣ್ಣೀರನ್ನು ಸುರಿಸಿಕೊಂಡು ನಮ್ಮ ಹಣಕಾಸಿನ ಸಚಿವರು ಆಯುವ್ಯಯ ಪಟ್ಟಿಯಲ್ಲಿ ಹೇಳಿದ್ದಾರೆ. ಪ್ರಪಂಚದಲ್ಲಿ ಎಷ್ಟೋ ದೇಶಗಳು ಸ್ವಾತಂತ್ರ್ಯವನ್ನು ಪಡೆದಿವೆ. ಯುದ್ಧದ ಅಪಘಾತಕ್ಕೆ ಸಿಕ್ಕಿದರೂ ಕೂಡ, ದೇಶವನ್ನು ಕೆಲವೇ ವರ್ಷಗಳಲ್ಲಿ ಸುಸಜ್ಜಿತವಾಗಿ ಶಕ್ತಿಯುತ ದೇಶವನ್ನಾಗಿ ಮಾಡಿದಂತಹ ಸರ್ಕಾರಗಳನ್ನು ಜ್ಞಾಪಿಸಿಕೊಳ್ಳಬಹುದು. ಶ್ರೀಮಾನ್ ರಾಚಯ್ಯನವರೂ ಕೂಡ ಜಪಾನಿಗೆ ಹೋಗಿದ್ದಾರೆ; ನಮ್ಮ ಆರ್ಥಿಕ ಮಂತ್ರಿಗಳು ಕೂಡ ವಿದೇಶ ಯಾತ್ರೆಯನ್ನು ಮಾಡಿದ್ದಾರೆ. ಆ ದೇಶವಾದರೋ, ಯುದ್ಧದಿಂದ ನಾಶವಾದರೂ, ಕೇವಲ 8-10-15 ವರ್ಷಗಳಲ್ಲಿ ಪ್ರಪಂಚದಲ್ಲೇ ಹೆಸರೆನಿಸಿಕೊಳ್ಳುವಂತಹ ಒಂದು ಭದ್ರವಾದ ರಾಜ್ಯವನ್ನು ಕಟ್ಟಿದ್ದಾರೆ. ಒಳ್ಳೆಯ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಟ್ಟಿ, ಶಾಂತಿಯುತವಾದ ಮತ್ತು ಭದ್ರವಾದ ದೇಶಗಳಲ್ಲಿ ಅತೀ ಪ್ರಾಮುಖ್ಯವಾದಂತಹ ಕೆಲವು ದೇಶಗಳ ಹೆಸರುಗಳನ್ನು ನಾವು ಇಂದು ಕೇಳುತ್ತಿದ್ದೇವೆ. ಉದಾಹರಣೆಗೆ ಜಪಾನ್ ದೇಶ, ಸಣ್ಣ ದೇಶವಾದ ಮಲೇಸಿಯಾ ದೇಶ ಮೊದಲಾದುವುಗಳನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಅಲ್ಲಿರುವ ನೈಸರ್ಗಿಕ ಸಂಪತ್ತು ನಮ್ಮಲ್ಲಿರತಕ್ಕಷ್ಟು ಇಲ್ಲವಾದರೂ ಕೂಡ ಪ್ರಬಲವಾಗಿ ಬೆಳೆದು, ಜನರಿಗೆ ಉತ್ಪಾದನಾ ಅವಕಾಶಗಳನ್ನು ಸರ್ಕಾರ ಕೊಟ್ಟು ಪ್ರಪಂಚದಲ್ಲೇ ಒಳ್ಳೆಯ ಹೆಸರನ್ನು ಗಳಿಸಿದೆ. ಇಂಡಿಯಾ ದೇಶ ಏಷ್ಯಾ ಖಂಡದಲ್ಲೇ ದೊಡ್ಡ ದೇಶ. ಸಂಪತ್ತನ್ನು ಹೊಂದಿರತಕ್ಕಂತಹ ದೇಶ. ಆದರೆ ನಾವು ಈ ದಿವಸ, ಈ 18 ವರ್ಷಗಳ ಕಾಂಗ್ರೆಸ್ ರಾಜ್ಯಭಾರದಲ್ಲಿ ಏನನ್ನು ಸಾಧನೆ ಮಾಡಿದ್ದೇವೆ ಎನ್ನತಕ್ಕಂತಹ ಪ್ರಶ್ನೆ ಮೂಲಭೂತವಾಗಿ ಬರುತ್ತದೆ. ಈಗ ಭಾರತಾದ್ಯಂತ ನಮ್ಮ ಮೈಸೂರಿನ ಆಯುವ್ಯಯ ಪಟ್ಟಿಯ ಬಗ್ಗೆ ಮಾತನಾಡುವಾಗ ಭಾರತದ ಚಿತ್ರವನ್ನು ಎಳೆಯತಕ್ಕಂತ ಗೋಜಿಗೆ ಹೋಗದೆ ಇದ್ದರೂಕೂಡ, ನಮ್ಮ ಆರ್ಥಿಕ ಪರಿಸ್ಥಿತಿ ಕೇಂದ್ರದ ನೆರವಿನ ಆಗುಹೋಗುಗಳ ಮೇಲೆ ನಿಂತಿದೆ ಎಂದು ಹೇಳಬೇಕಾಗಿದೆ. ನಮ್ಮ ಹಣಕಾಸಿನ ಸಚಿವರು ಕೂಡ ನಮ್ಮ ಯೋಜನಾ ಆಯೋಗದ ಉಪಾಧ್ಯಕ್ಷರಾದಂತಹ ಅಶೋಕ ಮೆಹ್ತಾರವರನ್ನು ಭೇಟಿಮಾಡಿ, ಅವರು ಈ ಮೈಸೂರು ದೇಶದ ಆರ್ಥಿಕ ಪರಿಸ್ಥಿತಿಯನ್ನು ತಿಳಿದು ಯಾವ ಆಶಯಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಒಂದು ನಿರ್ದಿಷ್ಟವಾದ ಅಂಕಿಅಂಶಗಳ ಮೂಲಕ ಈ ಸಭೆಗೆ ತಿಳಿಸಿಲ್ಲ. ಕೋಟಿಗಟ್ಟಲೆ ಹಣವನ್ನು ಕೊಡತಕ್ಕಂತಹ ಭರವಸೆಯನ್ನು ಆಯೋಗ ಸಮಿತಿಯವರು ಕೊಟ್ಟಿದ್ದಾರೆಂದು ಹೇಳಿದರು. ಆದರೆ ಈಗ ಕೇಂದ್ರದ ಸಚಿವರಾಗಿರತಕ್ಕಂತಹ ಶ್ರೀ ಅಶೋಕ ಮೆಹ್ತಾರವರು ಉಪಾಧ್ಯಕ್ಷತೆಯನ್ನು ವಹಿಸಿಕೊಂಡಾಗ, ಮೈಸೂರು ರಾಜ್ಯದಲ್ಲಿ ಕೇಂದ್ರದಿಂದ ಕೊಟ್ಟಂತಹ ಹಣವನ್ನು ಸರಿಯಾದ ರೀತಿನೀತಿಗಳಲ್ಲಿ ಖರ್ಚುಮಾಡದೆ ಯೋಜನೆ ಯಶಸ್ವಿಯಾಗಿಲ್ಲ ಮತ್ತು ಪರಿಪೂರ್ಣವಾಗಿಲ್ಲ ಎಂದು ಅಧಿಕಾರಿಗಳಿಗೆ ಮತ್ತು ಮೈಸೂರು ಸರ್ಕಾರಕ್ಕೆ ಪತ್ರದ ಮೂಲಕ ತಿಳಿಸಿದ್ದಾರೆ. ಶ್ರೀ ಅಶೋಕ ಮೆಹ್ತಾರವರಿಂದ ಬಂದಂತಹ ಪತ್ರವನ್ನು ಎಲ್ಲಾ ಇಲಾಖೆಗಳಿಗೆ ಕಳಿಸಿದಾಗ ಆಶ್ಚರ್ಯವಾಯ್ತು. ಕೋಟಿಗಟ್ಟಲೆ ಕೊಟ್ಟಂತಹ ಹಣವನ್ನು ಸರ್ಕಾರ ಯೋಜನೆಗಳು ಯಶಸ್ವಿಯಾಗದಂತಹ ರೀತಿನೀತಿಗಳಲ್ಲಿ ಖರ್ಚುಮಾಡತಕ್ಕಂತಹ ಕಾರಣವೇನು? ಇದು ಸರ್ಕಾರದ ಅಶಕ್ತತೆಯೇ ಎಂದು ನಾವು ಭಾವಿಸಬೇಕೋ? ಅಥವಾ ಇವರು ಹಾಕಿದಂತಹ ತೆರಿಗೆಗಳನ್ನು ಕೊಟ್ಟಂತಹ ಜನರಿಗೆ ಯಾವ ನೇರವಾದ ಸಹಾಯವನ್ನು ಕೊಟ್ಟಿದೆಯೆಂದು ಕೇಳಬೇಕೇ? ಅಥವಾ ಜನರನ್ನು ಹಸಿವಿನ ದವಡೆಯಲ್ಲಿ ಸಾಯಿಸಬೇಕೆನ್ನುವುದು ಸರ್ಕಾರದ ಉದ್ದೇಶವೇ ಎಂದು ನಾನು ಈ ಸಮಯದಲ್ಲಿ ಪ್ರಶ್ನೆ ಮಾಡಬೇಕಾಗಿದೆ.

ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದ ಕಾಲದಲ್ಲಿ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿಡತಕ್ಕಂತ ಸಮಯದಲ್ಲಿ ಮೈಸೂರು ದೇಶದಲ್ಲಿ ನಾವು ಕಾಣುತ್ತಿರುವುದು ಏನು ? ಯಾವ ಹಳ್ಳಿಗಳಲ್ಲೂ ಕೂಡ ಕುಡಿಯಲು ನೀರಿಲ್ಲ. ಯಾವ ಯೋಜನೆಗಳೂ ಯಶಸ್ವಿಯಾಗಿಲ್ಲ. ಇದರಿಂದ ಎಲ್ಲೆಲ್ಲೂ ಆಹಾರದ ಸರಿಸ್ಥಿತಿ ಉತ್ಕಟವಾಗಿದೆ. ಈ ಪರಿಸ್ಥಿತಿಯನ್ನು ನೀವು ಯಾವ ಯೋಜನೆಯಿಂದ ಪರಿಣಾಮಕಾರಿಯಾಗಿ ಎದುರಿಸಬೇಕೆಂದು ಇದ್ದೀರಿ ಎನ್ನುವ ಚಿತ್ರವನ್ನು ನೀವು ಆಯವ್ಯಯ ಪಟ್ಟಿಯಲ್ಲಿ ಇಟ್ಟಿದ್ದೀರಾ, ಎಂದು ನಾನು ಪ್ರಶ್ನೆ ಮಾಡುತ್ತೇನೆ. ಸ್ವಾಮಿ, ಕೇಂದ್ರ ನೆರವನ್ನು ಕೊಡಲಿಲ್ಲ, ಅದರಿಂದ ನಮ್ಮ ಆಂತರಿಕವಾದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ತೆರಿಗೆ ಒಂದು ಕಡೆ ಹಾಕುತ್ತೀರಿ. ಅರ್ಥಸಚಿವರು ಅದೇ ರೀತಿ ಈ ರಾಜ್ಯದಲ್ಲಿ ಮಿತವ್ಯಯದ ವಿಚಾರದಲ್ಲೂ 24ನೇ ಪುಟದಲ್ಲಿ ಹೇಳಿದ್ದಾರೆ. ಮಿತವ್ಯಯ ಸಾಧಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಯಿತು ಎಂದು. ನಾನಾದರೂ ಪ್ರಶ್ನೆಮಾಡುತ್ತೇನೆ, ಈ ಆಯವ್ಯಯ ಪಟ್ಟಿಯಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೋ ಅದು ಸತ್ಯಕ್ಕೆ ದೂರವಾದಂತಹ ಮಾತು; ಯಾಕೆಂದರೆ, ಅಧಿಕಾರಿಗಳಿಂದ ಸುಳ್ಳು ಅಂಕಿಅಂಶಗಳನ್ನು ಕ್ರೋಢೀಕರಿಸಿ, ಈ ಸಭೆಯ ಮುಂದಿಟ್ಟಂತಹ ಈ ವಿಚಿತ್ರವಾದಂತಹ ಬಜೆಟ್ ನಮಗೆ ಆಶ್ಚರ್ಯವನ್ನುಂಟುಮಾಡಿದೆ. ಯಾವ ಆಶೆಯೂ ಕೂಡ ಸಾಮಾನ್ಯ ಜನತೆಗೆ ಈ ಬಜೆಟ್ಟಿನಿಂದ ಸಿಗುವುದಿಲ್ಲ. ಈ ಸರ್ಕಾರ ಯಾವ ಮಿತವ್ಯಯವನ್ನು ಸಾಧಿಸಿದೆ ? ಸರ್ಕಾರ ತನ್ನ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕೆ ಒಂದು ಕಡೆ ತೆರಿಗೆ ಹಾಕುತ್ತಿದೆ. ಅದೇ ರೀತಿ ಮಿತವ್ಯಯ ಸಾಧನೆ ಮಾಡುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಇಂತಹ ರೂಪುರೇಖೆಗಳನ್ನು ಹೊಂದಿರತಕ್ಕಂತಹ ವಿಚಾರಗಳು ನಮ್ಮ ಮುಂದಿರುವಾಗ, ಈ ಸರ್ಕಾರದವರು, ಈ ನಾಲ್ಕು ವರ್ಷಗಳ ಅವಧಿಯಲ್ಲಿ, ಯಾವುವನ್ನು ಯಶಸ್ವಿಯಾಗಿ ಸಾಧಿಸಿದ್ದಾರೆಂದು ನಾನು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ.

ತೆರಿಗೆಯನ್ನು ಕೊಟ್ಟಂಥ ಸಾಮಾನ್ಯಜನತೆ ಅದರಿಂದ ಸುಖವನ್ನೂ ಸೌಲಭ್ಯವನ್ನೂ ಅತಿಶೀಘ್ರವಾಗಿ ಅಪೇಕ್ಷೆ ಪಡುವುದು ಈ ಪ್ರಜಾಪ್ರಭುತ್ವದಲ್ಲಿ ಸಂಪ್ರದಾಯ. ಈ ಅಧಿಕಾರ ನಾವೇ ಇಟ್ಟುಕೊಳ್ಳಬೇಕು. ಅಧಿಕಾರವನ್ನು ನಾವು ಇಟ್ಟುಕೊಂಡು ಜನತೆಗೆ ನಾವು ಯಾವ ಉಪಕಾರವನ್ನೂ ಮಾಡಬಾರದು ಎನ್ನತಕ್ಕಂಥದ್ದು ಕಾಂಗ್ರೆಸ್ಸಿನ ನೀತಿಯೆ ? ಮೈಸೂರಿನಲ್ಲಿ ಸಾಮಾನ್ಯ ಜನರಿಗೆ ಸಂಘಟನೆ ಮಾಡತಕ್ಕ ಶಕ್ತಿ ಇಲ್ಲ, ಅವರು ಅಶಕ್ತತೆಯಿಂದ ಕುಳಿತಿದ್ದಾರೆ. ಅವರು ಈ ದೇಶದಲ್ಲಿ ಯಾವ ಸರ್ಕಾರದ ಮೇಲೂ ಕೆಟ್ಟ ಪರಿಣಾಮ ಆಗತಕ್ಕಂಥ ಚಳುವಳಿಯನ್ನು ಹಿಂಸಾತ್ಮಕ ಕಾರ್ಯಗಳನ್ನು ಮಾಡುತ್ತಾ ಇಲ್ಲ ಎನ್ನುವ ಒಂದು ಆಶೆ ತಮ್ಮ ಮನಸ್ಸಿನಲ್ಲಿ ಏನಾದರೂ ಇದೆಯೇ ? ಈ ದಾರುಣ ಪರಿಸ್ಥಿತಿಯಲ್ಲೂ ಕೂಡ ಸರ್ಕಾರ ಮೂರ್ಖರಂತೆ ವರ್ತನೆ ಮಾಡುವುದನ್ನು ಯಾವ ಸಾಮಾನ್ಯ ಜನರೂ ಕೂಡ ಪ್ರಜಾ ಪ್ರಭುತ್ವದಲ್ಲಿ ಸಹಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ಮಾನ್ಯ ಕಂಬಳಿಯವರು ಹೇಳಿದರು ಟೀಕೆ ಮಾಡುವುದಕ್ಕೂ ಕೂಡ ಇತಿ ಮಿತಿ ಇವೆ ಎಂದು. ನಾವು ಟೀಕೆ ಮಾಡತಕ್ಕಂಥ ಕಾಲದಲ್ಲಿ ನಿರ್ದಿಷ್ಟವಾದ ಸಲಹೆಗಳನ್ನು ಸಭೆಯಲ್ಲಿ ಕೊಟ್ಟಿದ್ದೇವೆ. ಅವುಗಳಲ್ಲಿ ಎಷ್ಟು ನಿರ್ದಿಷ್ಟವಾದ ಸಲಹೆಗಳನ್ನು ತಾವು ಅನುಕರಣ ಮಾಡಿದ್ದಾರೆ ಎಂದು ಹೇಳಲಿ, ಎಲ್ಲರಿಗೂ ಗೊತ್ತಾಗುವ ರೀತಿಯಲ್ಲಿ ವಿರೋಧ ಪಕ್ಷದವರು ಎಷ್ಟೋ ಸಲಹೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಎಷ್ಟು ಸಲಹೆಗಳನ್ನು ಒಪ್ಪಿಕೊಂಡಿದ್ದೀರಿ ಎಂದು ಹೇಳಿ. ಆಹಾರ ಪರಿಸ್ಥಿತಿ ಕೆಟ್ಟಾಗ ಮಂತ್ರಿಮಂಡಲವನ್ನು ಹೆಚ್ಚು ಮಾಡಿ ಕೊಂಡಾಗ ಫಾರೆಸ್ಟ್ ಲ್ಯಾಂಡ್ ಇತಿ ಮಿತಿ ಇಲ್ಲದೆ ಹಂಚಿದಾಗ, ರೆವಿನ್ಯೂ ಲ್ಯಾಂಡನ್ನು ದರಖಾಸ್ತಿನಲ್ಲಿ ಸಿಕ್ಕಾಪಟ್ಟೆ ತಮ್ಮವರೇ ಆದಂಥ ಜನಗಳಿಗೆ ಹಂಚಿದಾಗ, ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾದಾಗ ನಾವು ಎಲ್ಲಾ ಅಂಶಗಳನ್ನೂ ತಮ್ಮ ಮುಂದೆ ಇಟ್ಟಾಗ, ತಾವು ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ! ಉದಾಹರಣೆಗೆ ಹೇಳಬೇಕು ಎಂದರೆ, ಪಂಚಾಯಿತಿ ರಾಜ್ಯದ ಬಿಲ್ಲನ್ನು ತಾವು ತಂದಿರಿ. ದೇಶದಲ್ಲಿ ಆಡಳಿತ ವಿಕೇಂದ್ರೀಕರಣ ಆಗಬೇಕು ಎಂದು ಹೇಳಿದಿರಿ. ಶ್ರೀಮಾನ್ ಕೊಂಡಜ್ಜಿಬಸಪ್ಪನವರ ಕಮಿಟಿಯನ್ನು ಮಾಡಿ ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿದಿರಿ. ಆ ಕಮಿಟಿ ದೇಶಾದ್ಯಂತ ಸುತ್ತಿ ಒಂದು ನಿರ್ದಿಷ್ಟವಾದ ಸೂತ್ರವನ್ನು ತಂದು, ಪಂಚಾಯಿತಿ ರಾಜ್ಯ ಬಿಲ್ಲು ತರಬೇಕು, ಪಂಚಾಯಿತಿ ರಾಜ್ಯ ಆಗಬೇಕು ಎಂದು ಹೇಳಿತು. ಪಂಚಾಯಿತಿ ರಾಜ್ಯ ಬಿಲ್ಲನ್ನು ನೀವು ತರುತ್ತೀರಿ ಎಂದು ಹಣಕಾಸಿನ ಆಯೋಗ ಸಮಿತಿಗೆ ತಾವು ಏನಾದರೂ ತಿಳಿಸಿದ್ದರೆ, ಅದರ ಪ್ರಕಾರ 5 ಕೋಟಿ ರೂಪಾಯಿ ಬರಬಹುದಾಗಿತ್ತು, ಅದರಿಂದ 5 ವರ್ಷಕ್ಕೆ ಬಹುಶಃ ನಮಗೆ 25 ಕೋಟಿ ರೂಪಾಯಿ ಸಿಕ್ಕುತ್ತಾ ಇತ್ತು. 25 ಕೋಟಿ ಗ್ರಾಮಾಂತರ ಪ್ರದೇಶಕ್ಕೆ ಹಂಚಿ, ಗ್ರಾಮಾಂತರ ಪ್ರದೇಶಗಳ ಯೋಜನೆ ಯಶಸ್ವಿಯಾಗಿ ಮಾಡಿದ್ದರೆ, ನಿಜವಾಗಿ ದೇಶದಲ್ಲಿ ಗ್ರಾಮಪಂಚಾಯಿತಿಗಳು ಸುಭದ್ರವಾಗಿ ಇದ್ದು ಹಳ್ಳಿಯ ಸಾಮಾನ್ಯ ಜನತೆಗೆ ಬೇಕಾದಂಥ ಕುಡಿಯುವ ನೀರಿನ ಸೌಲಭ್ಯ ಮತ್ತು ಎಲ್ಲಾ ಸೌಲಭ್ಯಗಳು ಸಿಕ್ಕುತ್ತಾ ಇತ್ತು. ಬಹುಶಃ ಇದನ್ನು ಮುಂದೂಡತಕ್ಕ ವಿಚಾರ ನೋಡಿದರೆ

(ಶ್ರೀ ಕೆ. ಲಕ್ಕಪ್ಪ)

ಪ್ರಜಾಪ್ರಭುತ್ವದಲ್ಲಿ ಇವರಿಗೆ ಯಾವ ನಂಬಿಕೆ ಇದೆ ? ಈ ಒಂದು ತರ್ತು ಪರಿಸ್ಥಿತಿ ನೆಪದಲ್ಲಿ ಮಾಡಿದ ಕೆಲಸ ಏನು ಎಂದರೆ ಪ್ರಜಾಪ್ರಭುತ್ವ ಅಧಿಕಾರವನ್ನು ಪ್ರಯೋಗ ಮಾಡತಕ್ಕಂಥ ಜನತೆಯ ಅಧಿಕಾರವನ್ನು ಮೊಟಕು ಮಾಡತಕ್ಕಂಥ ಹಿಂಸಾ ಕೃತ್ಯಗಳನ್ನು ತಾವು ಮಾಡಿದಿರಿ. ಎಲ್ಲೆಲಿ ತಮಗೆ ಸಹಾಯ ಅನುಕೂಲತೆ ಇಲ್ಲ, ಎಲ್ಲೆಲ್ಲಿ ತಮ್ಮನ್ನು ವಿರೋಧ ಮಾಡುತ್ತಾರೆ ಅಲ್ಲಿ ಜನಗಳ ಬಾಯನ್ನು ಮುಚ್ಚಿಸಿ ಅವರನ್ನು ಜೈಲಿನಲ್ಲಿ ಹಾಕಿಸಿ, ಈ ರೀತಿಯಾಗಿ ತುರ್ತು ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಜನರನ್ನು ಜೈಲಿನಲ್ಲಿ ಹಾಕತಕ್ಕಂಥ ಕೃತ್ಯದಲ್ಲಿ ತೊಡಗಿದರೇ ಹೊರತು, ಆಹಾರ ಪರಿಸ್ಥಿತಿ ಉತ್ಕಟವಾಗಿದ್ದ ಕಾಲದಲ್ಲಿ ಯಾವ ಜನಗಳಿಗೆ ಸಹಾಯವನ್ನು ಕೊಡಬೇಕೋ, ಅದಕ್ಕೆ ಒಂದು ನಿರ್ದಿಷ್ಟವಾದ ಯೋಜನೆಗಳನ್ನು ಹಾಕಲಿಲ್ಲ. ಆಹಾರ ಪರಿಸ್ಥಿತಿ ಬಗ್ಗೆ ನಾವು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದೇವೆ ; ಮುಂದೆ ಖರ್ಚು ಮಾಡುತ್ತಾ ಇದ್ದೇವೆ. ಮತ್ತು ಸಹಸ್ರಾರು ರೈತರಿಗೆ ಬೀಜಕ್ಕಾಗಿ ನೇರವಾಗಿ ಸಹಾಯ ಮಾಡಿದ್ದೇವೆ ಎಂದು ಆಯವ್ಯಯದ ಪಟ್ಟಿಯಲ್ಲಿ ಹೇಳಿದ್ದೀರಿ. ನಾನಾವರೂ ಪ್ರಶ್ನೆ ಮಾಡುತ್ತೇನೆ; ನನ್ನ ಜೊತೆಯಲ್ಲಿ ಅರ್ಥಿಕ ಮಂತ್ರಿಗಳಾಗಲಿ ಅಥವಾ ಮಾನ್ಯ ಸದಸ್ಯರು ಯಾರೇ ಬರಲಿ ಯಾವ ಜಿಲ್ಲೆಯಲ್ಲಿ ನೀವು ಕೊಟ್ಟಂಥ ಹಣದಿಂದ ಬೀಜವನ್ನು ಮೈಸೂರು ರಾಜ್ಯದಲ್ಲಿ ಯಾರಾದರೂ ಸಂಗ್ರಹಣ ಮಾಡಿದ್ದಾರೆಯೇ, ಈ ಆಹಾರ ಪರಿಸ್ಥಿತಿ ಉತ್ಕಟವಾದಾಗ ರೈತನಿಗೆ ಬೀಜವನ್ನು ಕೊಟ್ಟು ಬೆಳೆಯನ್ನು ಅಭಿವೃದ್ಧಿ ಮಾಡುವುದಕ್ಕೆ ನೇರವಾಗಿ ಯಾರಾದರೂ ಸಹಾಯ ಮಾಡಿದ್ದಾರೆಯೇ ಎನ್ನುವುದನ್ನು ನೋಡಬಹದು. ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಯಾರು ಎಂದು ಬಹುಶಃ ಯಾವ ವಿಲೇಜ್ ಲೆವೆಲ್ ವರ್ಕರ್ಸಿಗೂ ಕೂಡ ಗೊತ್ತಿಲ್ಲ. ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಅಂಕಿಅಂಶಗಳನ್ನು ತಾವು ಹೇಳಿದಿರಿ. ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಏನು ತಾಲ್ಲೂಕು ಬೋರ್ಡು ಇಲಾಖೆಯಲ್ಲಿ ಇಟ್ಟಿದ್ದಾರೆ ಅವರಿಗೆ ಯಾವ ಬೀಜವನ್ನು ತಯಾರು ಮಾಡುವುದಕ್ಕೆ ಸಹಾಯ ಮಾಡಿಲ್ಲ, ಬೀಜ ಉತ್ಪಾದನೆ ಮಾಡಿ ಯಾವ ಸಹಕಾರ ಸಂಘಗಳಿಗೂ ಜನಗಳಿಗೂ ಹಂಚಲಿಲ್ಲ. ಜಿರಾಯಿತಿ ಬಗ್ಗೆ ಆಹಾರ ಪರಿಸ್ಥಿತಿ ಉತ್ಕಟ ಆದಾಗ ಏನು ಹಣ ಕೊಟ್ಟಿದ್ದೀರಿ ಅದನ್ನು ಖರ್ಚು ಮಾಡಿಲ್ಲ. ಎರಡನೆಯ ಬೆಳೆಗೆ ಮತ್ತು ಇರತಕ್ಕ ಬೆಳೆಯನ್ನು ಉಳಿಸಬೇಕು ಎನ್ನತಕ್ಕಂತ ಬಗ್ಗೆ ಹಣವನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ. ಎಷ್ಟು ಜಿಲ್ಲೆಗಳಲ್ಲಿ ನೀವು ಕೊಟ್ಟಂಥ ಹಣದಿಂದ ಅಧಿಕಾರಿಗಳು ಯಶಸ್ವಿಯಾಗಿ ಬೆಳೆಯನ್ನು ಉಳಿಸಲು ಪ್ರಯತ್ನ ಪಟ್ಟಿದ್ದಾರೆ. ಅಂಕಿ ಅಂಶಗಳನ್ನು ತರಿಸಿ ನೋಡಿದರೆ ಬಹುಶಃ ನಿಮಗೆ ಗೊತ್ತಾಗುತ್ತದೆ. ನಿಮ್ಮ ಸರ್ಕಾರದಲ್ಲಿ ನಿಮ್ಮ ಕೈಕೆಳಗೆ ಇರತಕ್ಕಂಥ ಅಧಿಕಾರಿಗಳು ಎಷ್ಟರಮಟ್ಟಿಗೆ ಯಶಸ್ವಿಯಾಗಿ ಕೆಲಸ ಮಾಡುತ್ತಾರೆ ಎಂದು. ಉದಾಹರಣೆಗೆ ಹೇಳಬೇಕು ಎಂದರೆ, 1964 ನೇ ಇಸವಿಯಲ್ಲಿ ಕ್ಷಾಮ ಬಂದಾಗ 30 ಸಹಸ್ರ ರೂಪಾಯಿಗಳನ್ನು ತುಮಕೂರು ಜಿಲ್ಲೆಗೆ ಬಹುಶಃ ಡಿಸೆಂಬರ್ ತಿಂಗಳಿನಲ್ಲಿ ಕೊಟ್ಟರು. ಸಾಮೂಹಿಕವಾಗಿ ಬಾವಿಗಳನ್ನು ತೆಗೆದು ಬಂದಂಥ ನೀರಿನ ಸಹಾಯದಿಂದ ಬೆಳೆಗಳನ್ನು ರಕ್ಷಣೆ ಮಾಡಬಹುದು ಎಂದು ಹೇಳಿ. ಹೆಚ್ಚಿಗೆ ನೀರು ಇರತಕ್ಕ ಪ್ರದೇಶದಲ್ಲಿ ಬಾವಿ ತೆಗೆದು ಜನಕ್ಕೆ ಕೂಲಿಗಳನ್ನು ಕೊಡಬೇಕು ಎಂದು ಆದೇಶ ಕೊಟ್ಟರು. ಆದರೆ ಈ ದಿವಸದವರೆಗೂ ಕೆಲಸವನ್ನು ಮಾಡಿದ ಕೂಲಿ ಜನರಿಗೆ, ಆಹಾರ ಅನ್ನವೇ ಇಲ್ಲದೆ ಸಾಯುತಕ್ಕ ಜನರಿಗೆ, ಇದುವರಗೆ ಕೂಲಿ ಕೊಡದೇ ಇರುವುದಕ್ಕೆ ಕಾರಣ ಏನು ? ಇದು ಉಚಿತವೇ ? ಪಂಪುಸೆಟ್ಟು ವಿತರಣೆ ಬಗ್ಗೆ ಏನಾದರೂ ವಿಚಾರಿಸಿದ್ದೀರಾ ? ಎಷ್ಟು ರೀತಿಯಿಂದ ತೆರಿಗೆ ಹಣವನ್ನು ತಂದು ನಿಮ್ಮ ಅಧಿಕಾರಿಗಳು ಪೋಲು ಮಾಡುತ್ತಾರೆ ? ಮತ್ತು ಪೋಲು ಮಾಡುತ್ತಾ ಇದ್ದಾರೆ ? ಆದರೆ ಇದುವರೆಗೆ ಯಾವ ಕಾರ್ಯಕ್ರಮವನ್ನೂ ಯಾತಕ್ಕೆ ಹಾಕಿಲ್ಲ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಬಹುಶಃ ನೀವು ಅಧಿಕಾರದಲ್ಲಿ ಇರತಕ್ಕವರು. ಅಧಿಕಾರಿಗಳ ಮಾತಿಗೆ ಬೆರಗಾಗ ಬೇಕಾಗುತ್ತದೆ, ಪುಡಾರಿಗಳು ಇರುತ್ತಾರೆ, ಅವರನ್ನು ಬೆಂಬಲಿಸಬೇಕಾಗುತ್ತದೆ, ಅವರ ಸಹಾಯ ಬೇಕಾಗುತ್ತದೆ. ಇದರಿಂದಾಗಿ ಯಾವ ಫಲವೂ ಸಿಕ್ಕುತ್ತಾ ಇಲ್ಲ. ಪ್ರಜೆಗಳ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಯೋಜನೆಗಳನ್ನು ಯಶಸ್ವಿ ಮಾಡಿ, ಆಹಾರವನ್ನು ಹೆಚ್ಚಿಸಬೇಕು ಎಂದು ಇದ್ದೀರಿ. ಕೋಟಿ ಕೋಟಿ ರೂಪಾಯಿ ಕೇಂದ್ರದಿಂದ ತಂದು ಮತ್ತು ಅಮೇರಿಕಾದಿಂದ ತಂದು ನೀವು ಖರ್ಚು ಮಾಡಿರತಕ್ಕ ಹಣ ಯಶಸ್ವಿಯಾಗಿದ್ದರೆ ಬಹಶಃ ಜನ ಅನ್ನ ಇಲ್ಲದೆ, ಆಹಾರ ಇಲ್ಲದೆ ನಮ್ಮ ಹಳ್ಳಿಗಳಲ್ಲಿ ಸಾಯುತ್ತಾ ಇರಲಿಲ್ಲ. ಮಂತ್ರಿಗಳು ಕೇಳಿದರು. ಯಾರಾದರೂ ಅನ್ನ ಇಲ್ಲದೆ ಸತ್ತ ನಿದರ್ಶನ ಒಂದನ್ನಾದರೂ ಕೊಡಿ ಎಂದು. ಅದು ಮಾಗಡಿ ತಾಲ್ಲೂಕಿನ ಗೌರಕೆರೆಗೆ ಹೋಗಿ, ಹೆಬ್ಬೂರು ಕ್ಷೇತ್ರದ ಗಂಗವಾಕನಹಳ್ಳಿಗೆ ಹೋಗಿ. ಅಲ್ಲಿ 5 ಜನ ಮಾರ್ಚಿ ತಿಂಗಳಿನಲ್ಲಿ ವಿಷ ತಿಂದು ಸತ್ತಿರತಕ್ಕ ದಾರುಣ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು. ಅರ್ಥಿಕ ಮಂತ್ರಿಗಳು ಮತ್ತು ಮರಾಮತ್ತು ಶಾಖೆಯ ಮಂತ್ರಿಗಳು ತುಮಕೂರಿಗೆ ಬಂದಾಗ ಏನು ವಾಗ್ದಾನ ಮಾಡಿದಿರಿ ? ಕಾಂಗ್ರೆಸ್

ಆಫೀಸಿನಲ್ಲಿದ್ದಂಥ ಪುಡಾರಿಗಳ ಮಾತನ್ನು ಕೇಳಿ ನೈಜ ಚಿತ್ರವನ್ನು ತಿಳಿದುಕೊಳ್ಳಲಿಲ್ಲ. ತುಮಕೂರು ಜಿಲ್ಲೆಯಲ್ಲಿ ಪದೇ ಪದೇ ಮಳೆ ಇಲ್ಲದೆ ಅಭಾವದಿಂದ ಜನಗಳು ಕಷ್ಟಪಡುವುದನ್ನು ಗಮನಕ್ಕೆ ತೆಗೆದು ಕೊಳ್ಳಲಿಲ್ಲ. ಯಾವ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆ ಮಾಡು ತ್ತೇನೆ. ಸ್ಪಿಲ್ ಓವರ್ ಹಣ ಇದೆಯೆಂದು ಹೇಳಿದರು. ಈ ಸ್ಪಿಲ್ ಓವರ್ ಹಣಕ್ಕೆ ಯಾವ ಅಧಿಕಾರ ಕಾರಣರು ? ಅಂತಹ ಪ್ರಾಜೆಕ್ಟುಗಳನ್ನು ನೀವು ಮಂಜೂರು ಮಾಡುವುದಕ್ಕೆ ಕಾರಣ ಏನು ? ಜನತೆ ಅನ್ನ ಇಲ್ಲದೆ ಸಾಯಬೇಕೇ ಎಂದು ಪ್ರಶ್ನೆ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ 15 ವರ್ಷದಿಂದ ಕಂದಾಯ ಕೊಡಲಿಲ್ಲವೇ? ನಿಮಗೆ ಏನು ಅನಾನುಕೂಲವಾಗಿದೆ ? ನಮ್ಮ ಜಿಲ್ಲೆಯಲ್ಲಿ ಏನು ಕಾರ್ಯಕ್ರಮ ಮಾಡಿಲ್ಲದೇ ಇರುವುದರಿಂದ, ನಿಮ್ಮ ತಪ್ಪನ್ನು ಒಪ್ಪಿಕೊಳ್ಳಲೇಬೇಕು. ಈ ಶಿಕ್ಷೆ ಯನ್ನು ತಾವು ಅನುಭವಿಸಲೇ ಬೇಕು.

12-30 P.M.

ಸ್ವಾಮಿ, ಸಾಲ ಸೋಲಗಳನ್ನು ಹಂಚತಕ್ಕ ಸರಕಾರದ ರೀತಿ ನೀತಿ ಪ್ರಶ್ನೆ ಮಾಡ ಬೇಕಾಗಿದೆ. ರೈತರಿಗೆ ಸಾಲ ಕೊಡುತ್ತೇವೆ ಎಂದು ಅವರು ಹೇಳಿದರು. ಇವರು ಸಾಲ ಕೊಡುವ ಯೋಜನೆ ಯಾವ ರೀತಿ ಇದೆ ಎಂದರೆ, ತಾಲ್ಲೂಕು ಬೋರ್ಡಿನವರಾಗಲಿ ಅಭಿವೃದ್ಧಿ ಬ್ಯಾಂಕಿನವರಾಗಲಿ ಇವರ ಮನುಷ್ಯ ಅಧಿಕಾರದಲ್ಲಿದ್ದರೆ ಮಾತ್ರ ಅಭಿವೃದ್ಧಿ ಮಂಡಲ ಸಾಲ ಹಂಚಬೇಕು ಎಂದು ಇದ್ದಂತೆಯೇ ಸರಕಾರದ ಆದೇಶ ಬಂದು ಬಿಡುತ್ತದೆ. ಇಲ್ಲದಿದ್ದರೆ ಹಣ ಕೊಡಲು ಆಗುವುದಿಲ್ಲ ಎಂದು ಆದೇಶ ಬಂದು ಬಿಡುತ್ತದೆ. ಈ ಹಣ ತೆಗೆದುಕೊಂಡು ಕಾಂಗ್ರೆಸ್ ಕಛೇರಿಗೆ ಹೋಗುತ್ತಾರೆ. ಸರಕಾರ ಸಾರ್ವಜನಿಕರಿಗೋಸ್ಕರ ಇಲ್ಲ. ಬಂಡವಾಳಗಾರರು, ಕಂಟ್ರಾಕ್ಟರರು, ಲೈಸೆನ್ಸದಾರರು, ಕಳ್ಳ ವ್ಯಾಪಾರ ಮಾಡತಕ್ಕವರ ಜೊತೆಯಲ್ಲಿ ಇವರ ಸ್ನೇಹ ಇದೆ. ಇವರು ಅಲ್ಲಲ್ಲಿ ತಮ್ಮ ಏಜೆಂಟರನ್ನು ಇಟ್ಟಿದ್ದಾರೆ. ಹಳ್ಳಿಗಳಲ್ಲಿ ಏಜೆಂಟರು ಇದ್ದಾರೆ. ಕಳ್ಳಕಾಕರ ಗೂಂಡಾ ಜನರ ನೇರವಾದ ಸಂಪರ್ಕ ಇಟ್ಟುಕೊಂಡು ಸರಕಾರದಿಂದ ಬರತಕ್ಕ ಎಲ್ಲಾ ಪ್ರಯೋಜನವನ್ನು ಇವರೇ ಪಡೆಯುತ್ತಿದ್ದಾರೆ. ಇಂಥವರು ವಿಶ್ವಾಸ ಗಳಿಸಿಕೊಂಡಿದ್ದಾರೆ. ಈ ಲಂಚಕೋರ ಸರಕಾರ ದಿವಾಳಿ ಎದ್ದಿದೆ. ತಾವು ಮಂತ್ರಿಗಳಾಗಿರಬಹುದು. ನಾನು ಒಂದು ಕಠಿಣವಾದ ಮಾತು ಆಡುತ್ತೇನೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮನ್ನು ಹೆದರಿಸುತ್ತೀರಿ. ನಿಮ್ಮ ಮನಸ್ಸಿನಲ್ಲಿರುವುದು ಸತ್ಯಕ್ಕೆ ದೂರ ವಾದುದು. ಇಂಥ ಸರಕಾರ ಹೋಗುವುದಕ್ಕೆ ಯಾವ ಪ್ರಯತ್ನ ಮಾಡಬೇಕೋ ಅದನ್ನು ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಇಂಥ ಸರಕಾರ ದೇಶದಲ್ಲಿ ಇರಬಾರದು. ಇಂಥ ಸರಕಾರ ಕೂಡಲೇ ಹೋಗದೇ ಇದ್ದರೆ ಸಾಮಾನ್ಯ ಜನ ಬಹುಶಃ ಈ ದೇಶದಲ್ಲಿ ಇರಲಾರದು ಎಂಬ ಭಾವನೆ ನಮಗೆ ಬಂದಿದೆ. ಈ ದೇಶದಲ್ಲಿ ಸಾಮಾನ್ಯ ಜನಕ್ಕೆ ಏನೂ ಪ್ರಯೋಜನವಾಗಿಲ್ಲ. ಸ್ವಾಮಿ, ಈ ಸಾಲಗಳನ್ನು ಹಂಚತಕ್ಕಂಥ ರೀತಿ ನೀತಿ ಹೇಗಿದೆಯೆಂದರೆ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಸಾಲಗಳನ್ನು ಹಂಚ ಬೇಕು ಎಂದು ಆದೇಶ ಕೊಟ್ಟಿದ್ದಾರೆ. ನಮ್ಮ ತುಮಕೂರು ಜಿಲ್ಲೆಯ ಉದಾ ಹರಣೆ ತೆಗೆದುಕೊಳ್ಳೋಣ. ಸಾಮಾನ್ಯ ಜನರು ತೆರಿಗೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಯಾವ ಹಳ್ಳಿಯಲ್ಲಿ ಯಾವ ಸಾಮಾನ್ಯ ಜನತೆಗೆ ನೇರವಾಗಿ ಸಹಾಯ ದೊರಕಿದೆ ? ಸರಕಾರ ಏನಾದರೂ ಮಾಡಿದೆಯೇ ? 30 ಬಾವಿಗಳನ್ನು ತುಮಕೂರು ಜಿಲ್ಲೆಯಲ್ಲಿ ಮಾಡುತ್ತೇವೆಂದು ಹೇಳಿದ್ದರು ಸ್ವಾಮಿ, ಈ ಮೂವತ್ತು ಜನ ಯಾರು ? ಅಂದರೆ ತುಮಕೂರಿನಲ್ಲಿ ವ್ಯಾಪಾರ ಮಾಡತಕ್ಕಂಥ ಜನ, ತುಮಕೂರಿ ನಲ್ಲಿ ಮಂಡೀ ಪೇಟೆ ನಡೆಸತಕ್ಕಂಥ ಜನ, ಅಧಿಕಾರದಲ್ಲಿರತಕ್ಕ ಜನ ಈ ದಿವಸ ಸಾಲಕ್ಕೆ ಅರ್ಜಿ ಹಾಕಿದ್ದಾರೆ. ಅವರಿಗೆ ಸಾಲ ಮಂಜೂರು ಮಾಡಿದ್ದಾರೆ. ಸಾಮಾನ್ಯ ಜನತೆ ಇವರು ಕೊಟ್ಟಂಥ ಸಾಲ ಪಡೆದು ಜಮೀನು ಉಳಿಮೆ ಮಾಡಿದ್ದಾರೆಯೇ ? ಮೈಸೂರು ಸಂಸ್ಥಾನದಲ್ಲಿ ಸಹಸ್ರಾರು ಬಾವಿಗಳನ್ನು ತೆಗೆಯಲು ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಹಾಗಾದರೆ ಈ ಹಣ ಪಡೆದು ಎಷ್ಟು ಜನ ಬಾವಿ ತೆಗೆದಿದ್ದಾರೆ ? ಇವರೆಲ್ಲರೂ ಹಣ ತೆಗೆದುಕೊಂಡು ಕಾಂಗ್ರೆಸ್ ಆಫೀಸಿಗೆ ಹೋಗಿ ಯಾವ ಬಾವಿ ತೆಗೆಯದೇ ಇದ್ದಾರೆ. ಅಂಥವರ ಕಡೆಯಿಂದ ಹಣ ವಾಪಸು ವಸೂಲ್ಮಾಡುವು ದಕ್ಕೆ ಅಧಿಕಾರಿಗಳು ಕೂಡ ಅಶಕ್ತರಾಗಿದ್ದಾರೆ. ಇಂಥ ಅಂಕಿಅಂಶಗಳನ್ನು ಸೇರಿಸಿ ಕೊಟ್ಟಿದ್ದೀರಿ. ತೆರಿಗೆಯ ಮೂಲಕ ಕೊಡುವಂಥ ಹಣ ಸರಿಯಾಗಿ ಹಂಚಿಕೆ ಮಾಡದೇ ಇರುವ ಪ್ರಯುಕ್ತ ಸರಕಾರ ಇಂಥ ಆರ್ಥಿಕ ಪರಿಸ್ಥಿತಿ ಎದುರಿಸಬೇಕಾಗಿದೆ. ಇಂಥ, ಸರಕಾರ ನೈತಿಕವಾಗಿ ರಾಜೀನಾಮೆ ಕೊಡಲೇ ಬೇಕಾಗಿದೆ.

ಸ್ವಾಮಿ, ಈ ಹೊಸ ಆಯವ್ಯಯ ಪಟ್ಟಿಯಲ್ಲಿ ಹೊಸ ನಮೂನೆ ಎಂದರೆ ಸಾಮಾನ್ಯ ಜನಕ್ಕೆ ತೆರಿಗೆ ಹಾಕತಕ್ಕಂಥಾದ್ದು ಇವರ ಯೋಜನೆಯಲ್ಲಿದೆ. ಅವರನ್ನು ಕೇಳುತ್ತೇನೆ, ಮೈಸೂರು ದೇಶದಲ್ಲಿ ಏನು ಹೊಸದಾಗಿ ಸಾಧನೆ ಮಾಡಿದ್ದೀರಿ ? ಮೂರು ನಾಲ್ಕು ಹೊಸ ತೆರಿಗೆಗಳ ಹೆಸರನ್ನು

(ಶ್ರೀ ಕೆ. ಲಕ್ಕಪ್ಪ)

ಹೇಳಿದ್ದೀರಿ. ಸಾಮಾನ್ಯ ಜನಕ್ಕೆ ತೆರಿಗೆ ಹಾಕತಕ್ಕದರಲ್ಲಿ ಒಂದು ವಿಚಿತ್ರವಾದ ಮಾಡಿದ್ದೀರಿ. ಸಾಮಾನ್ಯ ಜನಕ್ಕೆ ನೀವು ತೆರಿಗೆ ಹಾಕತಕ್ಕಂಥ ನೀತಿಯನ್ನು ಪ್ರದರ್ಶನ ಮಾಡಿರುವುದು ಯಾವ ಶಕ್ತಿಯಿಂದ ಮಾಡುತ್ತೀರಿ ಎನ್ನತಕ್ಕಂಥಾದ್ದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಸಮಾನ್ಯ ಜನಕ್ಕೆ ಯಾವ ಪ್ರಯೋಜನವೂ ಆಗಿಲ್ಲ. ನೀವು ಮಾಡಿರತಕ್ಕಂಥ ಯೋಜನೆಗಳು ಯಶಸ್ವಿಯಾಗಿಲ್ಲ. ಯಾರಿಗೂ ಪ್ರಯೋಜನವಾಗಿಲ್ಲ ಎಂಬುದನ್ನು ನೀವೇ ನಿಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದೀರಿ. ನಿಮ್ಮ ಆಯವ್ಯಯ ಪಟ್ಟಿಯಲ್ಲಿ ಒಪ್ಪಿಕೊಂಡಿದ್ದೀರಿ. ಸಾಮಾನ್ಯ ಜನ ದೇಶವಲ್ಲಿ ಶೇಕಡ 85 ರಷ್ಟು ಭಾಗ ಇದ್ದಾರೆ. ರೈತನ ಮೇಲೆ ತೆರಿಗೆ ಹಾಕತಕ್ಕದ್ದನ್ನು ಚೆನ್ನಾಗಿ ಯೋಚನೆ ಮಾಡಬೇಕು. ಇಲ್ಲವಾದರೆ, ಸಾಮಾನ್ಯ ಜನರ ಶಾಪ ವಿಷ ಆಗುವುದಿಲ್ಲವೇ ಎಂದು ಪ್ರಶ್ನೆ ಮಾಡುತ್ತೇನೆ.

ಇನ್ನು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಿಜಲಿಂಗಪ್ಪನವರ ಮಂತ್ರಿಮಂಡಳಿ ಎಷ್ಟು ಅಪಖ್ಯಾತಿ ಪಡೆದಿದೆ ಎಂಬ ಮಾತನ್ನು ನಾವು ಹೇಳಿದ್ದೇವೆ. ಬಜೆಟ್ಟಿನಲ್ಲಿ ಆರ್ಥಿಕ ಪರಿಸ್ಥಿತಿ ವಿವರಣೆ ಮಾಡತಕ್ಕ ಕಾಲದಲ್ಲಿ ಭ್ರಷ್ಟಾಚಾರ ನೀತಿಯಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಕೈಗಾರಿಕೆ ಕ್ಷೇತ್ರದಲ್ಲಿ ಹಾಕಿದ ಹಣ ದುರುಪಯೋಗವಾಗಿದೆ ಎಂಬುದನ್ನು ನಾನು ಕೇಳಿದ ಒಂದು ಪ್ರಶ್ನೆಯ ಮೂಲಕ ಒಪ್ಪಿಕೊಂಡಿದ್ದೀರಿ. ಅನೇಕ ಜಲಾಶಯಗಳಿಗೆ ಹಾಕಿದ ಹಣ ಕಂಟ್ರಾಕ್ಟರ ವಶವಾಗಿದೆ. ಕೋಟ್ಯಾಂತರ ರೂಪಾಯಿ ಅಲ್ಲದಿದ್ದರೂ ಲಕ್ಷಾಂತರ ರೂಪಾಯಿಯಾದರೂ ಹಾಗೆ ಆಗಿದೆ ಎಂದು ಒಪ್ಪಿಕೊಂಡಿದ್ದೀರಿ. ಈ ರೀತಿ ನೀವು ಹಣ ಹಾಕಿದರೆ ಅದರ ನೈತಿಕ ಹೊಣೆಯನ್ನು ಹೊರಬೇಕಾಗುತ್ತದೆ. ನಿಜಲಿಂಗಪ್ಪನವರ ಮಂತ್ರಿಮಂಡಳಿದ ಪ್ರಭಾವ ಪದೇ ಪದೇ ವ್ಯಕ್ತವಾಗಿದೆ. ಆಂಧ್ರ ದೇಶದವರು ಮದ್ರಾಸ್ ದೇಶದವರು ಮತ್ತು ಎಲ್ಲಾ ದೇಶದವರೂ ಕೇಂದ್ರ ಸರಕಾರದ ಮೇಲೆ ಹೇರಳವಾಗಿ ಪ್ರಭಾವ ಬೀರಿ ಅವರು ತಮ್ಮ ಶಕ್ತಿಯಿಂದ ಹಿಡಿತ ಇಟ್ಟುಕೊಂಡು, ಕೇಂದ್ರ ಸರಕಾರದಿಂದ ದೊರೆಯುವ ಸಹಾಯದಿಂದ ಹಣವನ್ನು ತಂದು ತಮ್ಮ ಯೋಜನೆಗಳನ್ನು ಯಶಸ್ವಿಯಾಗಿ ಮಾಡಿ ಮೂರರಷ್ಟು ಆದಾಯ ಹೆಚ್ಚಿಸಿಕೊಂಡು ಪ್ರಗತಿ ಸಾಧನೆ ಮಾಡಿಕೊಂಡಿರುವುದು ಇದು ನಿಜಲಿಂಗಪ್ಪನವರ ಮಂತ್ರಿಮಂಡಳಿಕ್ಕೆ ನಾಚಿಕೆಯಾಗುವುದಿಲ್ಲವೇ ಎಂಬ ಪ್ರಶ್ನೆ ನಾನು ಮಾಡುತ್ತೇನೆ.

ಸಮಗ್ರ ಅಯವ್ಯಯ ಪಟ್ಟಿಯ ಚಿತ್ರವನ್ನು ನಾವು ನೋಡುವುದಾದರೆ, ಸರ್ಕಾರ ತನ್ನ ಅಶಕ್ತತೆಯನ್ನು ತೋರಿ, ಈ ಎಲ್ಲ ಯೋಜನೆಗಳೂ ಅಯಶಸ್ವಿಯಾಗಿ ಆಹಾರ, ನೀರು ಮತ್ತು ಮೇವು ಈ ದೇಶದಲ್ಲಿಲ್ಲದ ಒಂದು ಕಠಿಣ ಪರಿಸ್ಥಿತಿಯನ್ನು ಅವರು ತಂದಿದ್ದಾರೆ. ಈ ರೀತಿಯಾಗಿ ಅವರು ತಮ್ಮ ರಾಜಕೀಯವನ್ನು ಮಾತ್ರ ಮಾಡಿ ಅಧಿಕಾರವನ್ನು ಇಟ್ಟುಕೊಳ್ಳಬೇಕೆಂಬ ಒಂದು ಉದ್ದೇಶವನ್ನು ಬಿಟ್ಟರೆ ಜನತೆಯ ಹಿತ, ಸಾಮಾನ್ಯ ಜನತೆಯ ಹಿತದೃಷ್ಟಿ ಅವರಿಗೆ ಇಲ್ಲ, ಅವರು ರಾಜೀನಾಮೆಯನ್ನು ನೀಡಬೇಕೆಂದು ಒತ್ತಾಯ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೆ, 1966-67ನೇ ಸಾಲಿನ ಬಜೆಟ್ಟನ್ನು ನಾನು ವಿರೋಧಿಸುತ್ತ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಸ್ವಾಮಿ, ಅನೇಕ ಮಾನ್ಯ............

Sri C. J. MUCKANNAPPA.—There is no quorum.

Mr. SPEAKER.—How many are there, please count——19 only...

(Bell was rung and quorum was formed)

If the Members are not interested, I am also less interested. They agreed to sit till 1-30 P. M.

Sri SIDDAIAH KASHIMATH.—Let it be adjourned.

ಶ್ರೀ ಕೆ. ಲಕ್ಕಪ್ಪ.—ಮಂತ್ರಿಗಳು ಇಪ್ಪೊಂದು ಜನರಿದ್ದಾರೆ, ಅವರೆಲ್ಲಾ ಎಲ್ಲಿ ಹೋದರು ?

Mr. SPEAKER.—This Member must kindly have some control on himself. My poor friend Sri Revanasiddappa has been dragged in. He has been indisposed. He told me day before yesterday, yesterday and today also. Why should he not have rest ?

Sri K. LAKKAPPA.—He is poor on account of the bad policy of the Government.

Mr. SPEAKER.—Is Sri Lakkappa suggesting that he should go away from here ?

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಈ ದೇಶದಲ್ಲಿ ಕ್ಷಾಮ ಬಂದಿರತಕ್ಕ ದುರ್ಭರ ಪರಿಸ್ಥಿತಿಯಲ್ಲಿ ಸರ್ಕಾರ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ, ಮಾಡುತ್ತಾ ಇಲ್ಲ, ಮುಂದೆಯೂ ಮಾಡುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಕೂಡ ನಮಗೂ ಹಾಗೂ ಜನತೆಗೂ ಬಂದಿದೆ. ಕಳೆದ ವರ್ಷವೂ ಕೂಡ ಬೆಳೆ ಸರಿಯಾಗಿ ಆಗದೆ ಈ ಸಾರಿ ಸಂಪೂರ್ಣವಾಗಿ ಬೆಳೆ ನಷ್ಟವಾಗಿ ಜನಗಳಿಗೆ ಆಹಾರವಿಲ್ಲದೆ, ದನಕರುಗಳಿಗೆ ಮೇವು ಇಲ್ಲದೆ, ಕುಡಿಯುವುದಕ್ಕೆ ನೀರಿಲ್ಲವೆ ಇರತಕ್ಕ ಪರಿಸ್ಥಿತಿಯಲ್ಲಿ ತಿಂಗಳುಗಳು. ಕಳೆದರೂ ಕೂಡ ಸರಿಯಾದ ವ್ಯವಸ್ಥೆಯನ್ನು ಮಾಡದೇ ಇರುವುದು ಸರ್ಕಾರದ ಅದಕ್ಷತೆಯನ್ನು ತೋರಿಸುತ್ತದೆ. ಕ್ಷಾಮದ ದವಡೆಯಿಂದ, ಹಸಿವಿನಿಂದ ಜನ ಮುಕ್ತರಾಗಬೇಕು, ಆಹಾರದ ಕೊರತೆಯನ್ನು ನೀಗಿಸಿ ಅವರ ಪ್ರಾಣಗಳನ್ನು ಉಳಿಸಿಕೊಳ್ಳಬೇಕು, ಮತ್ತು ಈ ಕಾರ್ಯಗಳನ್ನು ಮಾಡುವ ಜವಾಬ್ದಾರಿ ಸರ್ಕಾರದ್ದು ಆಗಿರಬೇಕು. ಹಾಗೆಯೇ ದನಗಳೂ ಕೂಡ ನಮ್ಮ ದೇಶದ ಸಂಪತ್ತಿನಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸಿವೆ. ದನಗಳು ಕೂಡ ಮೇವು ಇಲ್ಲದೆ, ಕುಡಿಯುವುದಕ್ಕೆ ನೀರಿಲ್ಲದೆ ರೈತರಿಗೆ ಅವುಗಳನ್ನು ಸಾಕುವುದಕ್ಕೆ ಶಕ್ತಿ ಇಲ್ಲದೆ ಒಂದೊಂದು ರಾಸನ್ನೂ ಕೂಡ ನಾಲ್ಕೈದು ರೂಪಾಯಿಗಳಿಗೆ ಮಾರಿದಂಥ ದಾರುಣ ವರದಿಗಳು ನಮಗೆ ಬಂದಿವೆ. ಇಂಥ ಪರಿಸ್ಥಿತಿ ಇದ್ದರೂ ಕೂಡ ಆಹಾರ ಮತ್ತು ಮೇವಿನ ಕೊರತೆಯನ್ನು ನೀಗುವಂಥ ಸಾಹಸಕ್ಕೆ ಕೈಹಾಕದೆ ಇರತಕ್ಕದ್ದು ಸರಕಾರದ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಸರ್ಕಾರ ಈ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡತಕ್ಕದ್ದು ಅದರ ಪ್ರಥಮ ಕರ್ತವ್ಯವಾಗಿದೆ.

[MR. DEPUTY SPEAKER in the Chair]

ಸ್ವಾಮಿ, ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಆಹಾರವನ್ನು ಕೊಡುತ್ತಿದ್ದಾರೆ. ಎರಡು ಸಾವಿರ ಪ್ರಜಾ ಸಂಖ್ಯೆ ಇರುವ ಊರುಗಳಿಗೆ ಎರಡು ಮೂಟೆ ಅಥವಾ ಮೂರು ಮೂಟೆ ಪ್ರಕಾರ ಕೊಡುತ್ತಿದ್ದಾರೆ. ಇದರಿಂದ ಒಂದು ತಿಂಗಳಿಗೆ ಎಷ್ಟು ಜನರು ಎಷ್ಟು ಹೊತ್ತು ಊಟವನ್ನು ಮಾಡಬಹದು, ಅವರು ಜೀವವನ್ನು ಉಳಿಸಿಕೊಳ್ಳಬಹುದು ಎನ್ನುವುದನ್ನು ಯೋಚನೆ ಮಾಡಬೇಕು. ಸರ್ಕಾರ ಆಹಾರವನ್ನು ಸರಬರಾಜು ಮಾಡುವ ವಿಚಾರದಲ್ಲಿ ಏನೇನೂ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಜನರನ್ನು ಹಸಿವಿನ ದವಡೆಗೆ ಸಿಕ್ಕಿಸಿ ಅವರು ಅಸು ನೀಗತಕ್ಕ ಪ್ರಸಂಗವನ್ನು ಒದಗಿಸಿದೆ ಈ ಸರ್ಕಾರ. ಇದಕ್ಕಿಂತ ಕರ್ತವ್ಯ ಬಾಹಿರವಾದಂಥ ಕಾರ್ಯ ಬೇರೊಂದಿಲ್ಲ. ಸರ್ಕಾರ ಇನ್ನು ಮುಂದಾದರೂ ಕೂಡ ಅಗತ್ಯ ಕ್ರಮಗಳನ್ನು ತೆಗೆದುಕೊಂಡು ಗ್ರಾಮಾಂತರ ಜನರಿಗೆ ಆಹಾರವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

Sri SIDDAIAH KASHIMATH.—Again there is no quorum. It is better to adjourn.

Sri C. J. MUCKANNAPPA.—None of the Members is willing to sit. There are only 14 or 15 Members. Why this compulsion ? In the morning Session, it is always so.

Mr. DEPUTY SPEAKER.—Let Shri Byrappaji finish his speech at least.

(Bell was ringing and quorum was formed)

Sri S. R. KANTHI (Minister for Education).—There is quorum.

ಶ್ರೀ ಬಿ. ಬೈರಪ್ಪಾಜಿ.—ವ್ಯವಸಾಯ ಖಾತೆ ಈ ದೇಶದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರಬೇಕಾದ್ದು, ಪಡೆಯಬೇಕಾದ್ದು ಮುಖ್ಯವಾಗಿದೆ. ಆದರೆ ಈ ಖಾತೆಯ ಕರ್ತವ್ಯ ಸರಿಯಾದ ರೀತಿಯಲ್ಲಿ ನಿರ್ವಹಣೆಯಾಗುತ್ತಿಲ್ಲ. ಅತೃಪ್ತಿ ಅಸಮಾಧಾನ ಈ ಖಾತೆಯಲ್ಲಿ ತುಂಬಿದೆ. ಇದನ್ನು ಸರಿಪಡಿಸದೆ ಇರತಕ್ಕದ್ದು ಸರ್ಕಾರದ ಅದಕ್ಷತೆಯನ್ನು ತೋರಿಸುತ್ತದೆ. ವ್ಯವಸಾಯ ಇಲಾಖೆಯಲ್ಲಿ ಅನೇಕ ರೀತಿಯ ಮಾರ್ಪಾಡುಗಳನ್ನು ಮಾಡಬೇಕಾದ್ದಿದೆ. ಬೆಳೆಯನ್ನು ಇಟ್ಟಂಥ ಕಾಲದಲ್ಲಿ ರೋಗ ಬಂದರೆ ಅದನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಅಲ್ಲದೆ ಅಂಥ ಸಂದರ್ಭಗಳಲ್ಲಿ ತಿಳುವಳಿಕೆ

(ಶ್ರೀ ಬಿ. ಬೈರಪ್ಪಾಜಿ)

ಯನ್ನು ಕೊಟ್ಟು ಆ ರೋಗವನ್ನು ನಿವಾರಣೆ ಮಾಡತಕ್ಕ ಏರ್ಪಾಡು ಕೂಡ ಸರಿಯಾದ ರೀತಿ ಆಗುತ್ತಾ ಇಲ್ಲ. ಉದಾಹರಣೆಗೆ ತುರುವೇಕೆರೆ ತಾಲ್ಲೂಕಿನಲ್ಲಿ ಒಂದು ಕಡೆ ಸುಮಾರು ಒಂದೂವರೆ ಸಾವಿರ ಎಕರೆ ಪ್ರದೇಶದಲ್ಲಿ ಬೆಳೆ ಇಟ್ಟಿರುವ ಕಡೆ ಹುಳು ಬಿದ್ದು ತಿಂಗಳುಗಟ್ಟಲೆ ಆದರೂ ಕೂಡ ಅದನ್ನು ರಕ್ಷಿಸತಕ್ಕ ವ್ಯವಸ್ಥೆಯನ್ನು ಮಾಡಿಲ್ಲ. ಈ ರೀತಿ ಅನೇಕ ಕಡೆ ಆಗುತ್ತಿದೆ. ಈ ಒಂದು ಅವ್ಯವಸ್ಥೆ ತಪ್ಪಬೇಕು ಮತ್ತು ತಕ್ಷಣ ಮುತುವರ್ಜಿ ವಹಿಸತಕ್ಕ ಆಡಳಿತ ವ್ಯವಸ್ಥೆ ಇರಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತ ವಿರೋಧ ಪಕ್ಷದವರು ಸುಮ್ಮನೆ ಟೀಕೆ ಮಾಡುತ್ತಾರೆ. ಸರ್ಕಾರಕ್ಕೆ ಬರತಕ್ಕ ಆದಾಯವನ್ನು ಯಾವ ರೀತಿ ಹೆಚ್ಚಿಸಬೇಕು ಎನ್ನುವುದನ್ನು ಹೇಳಬೇಕು ಎಂದು ಸವಾಲನ್ನು ಹಾಕಿದರು. ಅವರೆ ನಾವಾದರೂ ಕೂಡ ಸವಾಲು ಹಾಕತಕ್ಕದ್ದು ಇದು. ನಾವು ನಿಮಗೆ ಹಣವನ್ನು ಉಳಿತಾಯ ಮಾಡತಕ್ಕ, ಜನರಿಗೆ ಹೆಚ್ಚಿನ ತೆರಿಗೆಯನ್ನು ಹೊರಿಸದೆ ಇರತಕ್ಕ ಮಾರ್ಗಗಳನ್ನು ತೋರಿಸಿಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ಅನೇಕ ವರ್ಷಗಳಿಂದ ಪದೇ ಪದೇ ನಾವು ಹೇಳುತ್ತ ಬಂದಿದ್ದೇವೆ, ನಿಮ್ಮಲ್ಲಿರತಕ್ಕ ಈ 27 ಜನ ಸೈನಿಕ ಮಂತ್ರಿಮಂಡಲವೇನಿದೆ ಅದರಲ್ಲಿ ಕೆಲವರನ್ನಾದರೂ ಕಡಮೆ ಮಾಡಿ ಮಿತವ್ಯಯವನ್ನು ಸಾಧಿಸಿದ್ದೇವೆ ಎಂದು ತೋರಿಸಿಕೊಡಿ, ನಾವಾದರೂ ಕೂಡ ಒಂದಲ್ಲ ಕೋಟ್ಯಾಂತರ ರೂಪಾಯಿ ಉಳಿತಾಯ ಮಾಡತಕ್ಕ, ರೈತರ ಮೇಲೆ ಹೆಚ್ಚಿನ ತೆರಿಗೆಯನ್ನು ಹೊರಿಸದೆ ಇರತಕ್ಕ ರೀತಿಗಳನ್ನು ಹೇಳುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶಾಸನ ಸಭೆಯನ್ನು ಕರೆಯದೆ ಒಂದು ಲಕ್ಷ ರೂಪಾಯಿ ಉಳಿತಾಯ ಮಾಡಿದ್ದಾರೆ !

ಶ್ರೀ ಬಿ. ಬೈರಪ್ಪಾಜಿ.—ಆಡಳಿತ ಪಕ್ಷದಲ್ಲಿರುವ ಮಂತ್ರಿಮಂಡಲ ಮಾರ್ಗದರ್ಶನ ಮಾಡತಕ್ಕದ್ದು ಅದರ ಕರ್ತವ್ಯ. ಇದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳುವುದರಲ್ಲಿ ನಾನು ಇಷ್ಟಪಡುತ್ತೇನೆ.

ಇನ್ನು ಪಿ. ಡಬ್ಲ್ಯು.ಡಿ. ಇಲಾಖೆಯಲ್ಲಿ ಬಹು ಮುಖ್ಯಪಾತ್ರವನ್ನು ವಹಿಸಿರತಕ್ಕ ಶಾಖೆಯೆಂದರೆ, ಮೈನರ್ ಇರಿಗೇಷನ್. ಈ ಶಾಖೆಯನ್ನು ಅಭಿವೃದ್ಧಿಪಡಿಸಿದೆ ಹೋದರೆ ಆಹಾರ ಕೊರತೆಯನ್ನು ಈ ದೇಶದಲ್ಲಿ ನೀಗಬೇಕೆಂಬ ಏನು ಗುರಿಯನ್ನು ಇವರು ಇಟ್ಟುಕೊಂಡಿದ್ದಾರೋ ಅದು ಸಾರ್ಥಕವಾಗುವುದಿಲ್ಲ. ಕೇವಲ ಈ ವರ್ಷ 290 ಲಕ್ಷ ರೂಪಾಯಿಗಳನ್ನು ಮಾತ್ರ ಈ ಬಾಬಿಗೆ ಇವರು ಮೀಸಲಾಗಿಟ್ಟಿದ್ದಾರೆ. ಇದು ಯಾವುದಕ್ಕೂ ಸಹ ಸಾಲದಾಗಿದೆ. ಈಗಿನ ಸನ್ನಿವೇಶದಲ್ಲಿ ಬಹು ಮುಖ್ಯ ಪಾತ್ರವನ್ನು ಈ ಇಲಾಖೆ ವಹಿಸಬೇಕಾಗಿದೆ. ತಕ್ಷಣ ರೈತರಿಗೆ ಪ್ರತಿಫಲವನ್ನು ಕೊಡತಕ್ಕ ಈ ಒಂದು ಮೈನರ್ ಇರಿಗೇಷನ್ ಸ್ಕೀಂ ಏನಿದೆ ಇದಕ್ಕೆ ಹೆಚ್ಚಿನ ರೀತಿಯಲ್ಲಿ ಮಹತ್ವವನ್ನು ಕೊಡುವುದು ಸರ್ಕಾರದ ಕರ್ತವ್ಯ. ಇಂತಹ ಒಂದು ಬಡ್ಜೆಟ್ ಭಾಷಣದಲ್ಲಿ ಅನೇಕ ಸೂಚನೆಗಳನ್ನು ನಾವು ಹಿಂದಿನಿಂದಲೂ ಕೊಟ್ಟಿದ್ದೇವೆ. ಕಳೆದ ಬಡ್ಜೆಟ್ ಅಧಿವೇಶನದಲ್ಲಿಯೂ ಕೂಡ ಕಮ್ಯೂನಿಟಿ ವೆಲ್ಸನ್ನು ನೀರು ಬರುವ ಕಡೆಗಳಲ್ಲೆಲ್ಲಾ ಹತ್ತಾರು ಕಡೆಗಳಲ್ಲಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕೂಡಲೇ ತೆಗೆಸಬೇಕೆಂದೂ ಆ ಮೂಲಕ ರೈತರಿಗೆ ವ್ಯವಸಾಯ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕೆಂದೂ ಅನೇಕ ರೀತಿಯಲ್ಲಿ ಹೇಳಿದ್ದೇವೆ. ಆದರೆ ಇಲ್ಲಿಯ ತನಕ ಆ ಬಗ್ಗೆ ಸರ್ಕಾರ ಯಾವ ಒಂದು ಯೋಚನೆಯನ್ನೂ ಕೂಡ ಮಾಡಲಿಲ್ಲ. ಸಾಮಾನ್ಯವಾಗಿ ಒಬ್ಬ ರೈತ ಬಾವಿಯನ್ನು ತೆಗೆಯಬೇಕು ಎಂದು ಹೇಳಿದರೆ ಅವನಿಗೆ ಸುಮಾರು 5 ರಿಂದ 10 ಸಾವಿರ ರೂಪಾಯಿಗಳವರೆಗೆ ಹಣ ಖರ್ಚಾಗುತ್ತದೆ. ನಮ್ಮ ದೇಶದಲ್ಲಿ ರೈತರು ಅಷ್ಟು ಹಣವನ್ನು ಖರ್ಚುಮಾಡಿ ಒಂದೊಂದು ಬಾವಿಯನ್ನು ತೆಗೆಯುವುದು ಬಹಳ ವಿರಳ. ಆದ್ದರಿಂದ ನಾಲ್ಕಾರು ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕಮ್ಯೂನಿಟಿ ವೆಲ್‌ಗಳನ್ನು ತೆಗೆಸಲಿಕ್ಕೆ ಸರ್ಕಾರದವರು ಏರ್ಪಾಡುಮಾಡಿ ತನ್ಮೂಲಕ ರೈತರು ವ್ಯವಸಾಯ ಮಾಡುವಂತೆ ವ್ಯವಸ್ಥೆ ಮಾಡಬೇಕು. ಇದರಿಂದಾದರೂ ದೇಶದ ಆಹಾರ ಕೊರತೆ ನೀಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದ್ದರಿಂದ ಮೈನರ್ ಇರ್ರಿಗೇಷನ್ನಿಗೆ ಕೇವಲ 290 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ನಿಗದಿ ಮಾಡಿರುವುದು ಬಹಳ ಅತ್ಯಲ್ಪ. ಈ ಹಣವನ್ನು ಹೆಚ್ಚುಮಾಡಿ ರೈತರಿಗೆ ಹೆಚ್ಚಿನ ಪರಿಹಾರವನ್ನು ಒದಗಿಸುವ ರೀತಿಯಲ್ಲಿ ಮಾಡಬೇಕಾಗಿತ್ತು. ಅದನ್ನು ಈ ಸಾರಿಯೂ ಮಾಡಲಿಲ್ಲ. ಅದನ್ನು ಇನ್ನು ಮುಂದಾದರೂ ಮಾಡಬೇಕೆಂದು ನಾನು ಸರ್ಕಾರದವರಿಗೆ ಸೂಚನೆ ಕೊಡುತ್ತೇನೆ. ಇನ್ನು ಸರ್ಕಾರದ ಆಧಾರ ಅಥವಾ ಆಶ್ರಯದ ಮೇಲೆ ನಡೆಯುತ್ತಾ ಇರತಕ್ಕ ಅನೇಕ ಸಂಸ್ಥೆಗಳಲ್ಲಿ ಎಷ್ಟೋ ಲೋಪದೋಷಗಳಿವೆ. ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿನಲ್ಲಿ ಬಾವಿಗಳಿಗಾಗಿ

ಸಾಲಕೊಡುವ ವ್ಯವಸ್ಥೆಯನ್ನು ಸರ್ಕಾರ ಈಚೆಗೆ ಮಾಡಿತ್ತು. ಆ ಬಗ್ಗೆ ಈ ವರ್ಷದಲ್ಲಿ ಅನೇಕ ನ್ಯೂನತೆಗಳನ್ನು ನಾವು ಕಂಡಿದ್ದೇವೆ. ಸರ್ಕಾರ ಆ ಬಗ್ಗೆ ಸರಿಪಡಿಸುವ ವ್ಯವಸ್ಥೆಯನ್ನೇನೂ ಈ ವರೆಗೆ ಮಾಡಲಿಲ್ಲ. ಕೇಂದ್ರ ಜಮೀನು ಅಭಿವೃದ್ಧಿ ಬ್ಯಾಂಕಿನವರು 2 ಕೋಟಿ ರೂಪಾಯಿಗಳಿಗೆ ಒಂದು ಡಿಬೆಂಚರ್ ಫ್ಲೋಟ್ ಮಾಡಿದರು. ಸರ್ಕಾರ 50 ಲಕ್ಷ ರೂಪಾಯಿಗಳನ್ನು ಅವರ ಭಾಗವನ್ನು ಕೊಂಡರು. ಇನ್ನುಳಿದ ಮೊಬಲಗನ್ನು ಅವರ ಮೇಲೆ ಹೊರಿಸಿದರು. ನಾಲ್ಕು ಸಾವಿರ ರೂಪಾಯಿಗಳನ್ನು ನಾವು ಹೇಳುವವರಿಗೆ ಇವರು ಮಂಜೂರು ಮಾಡಬೇಕೆಂದು ಹೇಳಿದರು. ಅದಕ್ಕೆ ಕೇಂದ್ರ ಬ್ಯಾಂಕಿನವರು ಒಪ್ಪಿದರೂ ಇವರು ಕೇವಲ ಒಂದು ತಾಲ್ಲೂಕಿಗೆ 20–30 ಬಾವಿಗಳಿಗೆ ಆರೀತಿ ಹಣವನ್ನು ಮಂಜೂರು ಮಾಡಲಿಕ್ಕೆ ಇವರ ಕೈಲಿಸಾಧ್ಯವಾಗಲಿಲ್ಲ. ಹಣವನ್ನು ಅರೀತಿ ಕೊಡದೆ, ನೀರನ್ನೂ ಸಹ ಕೊಡದೆ ಸರ್ಕಾರದ ಮೇಲಿದ್ದ ಹೊಣೆಯನ್ನು ಆ ಬಡಬ್ಯಾಂಕಿನ ಮೇಲೆ ಹೊರಸಿರುವುದು ಬಹಳ ಅಕ್ಷಮ್ಯ ಅಪರಾಧ. ಈ ಒಂದು ವ್ಯವಸ್ಥೆ ಖಂಡಿತವಾಗಿ ಸರಿಯಾದುದಲ್ಲವೆಂದು ನಾನಾದರೂ ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ ಆ ರೀತಿ ಸೂಚನೆಯನ್ನು ಕೊಡುತ್ತಾ ಇವರು ಆ ಬ್ಯಾಂಕಿನ ಮೇಲೆ ಹೊರಸಿರತಕ್ಕ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಾದರೆ ಅವರು ಕೇಳಿದಷ್ಟು ಹಣವನ್ನು ಸರ್ಕಾರವೇ ಕೊಡಬೇಕು. ಅದು ಸರ್ಕಾರದ ಜವಾಬ್ದಾರಿ. ಆ ರೀತಿಯಾಗಿ ಮಾಡಬೇಕು. ಇಲ್ಲವೇ ಹೋದರೆ ಸರ್ಕಾರವೇ ಆ ಜವಾಬ್ದಾರಿಯನ್ನು ನೇರವಾಗಿ ಹೊತ್ತು ಬಾವಿಯನ್ನು ತೆಗೆಯುತ್ತೇವೆಂದು ಮುಂದೆ ಬರತಕ್ಕ ರೈತರಿಗೆ ಸಾಲವನ್ನು ತಪ್ಪದೆ ಕೊಡುವ ವ್ಯವಸ್ಥೆ ಮಾಡದೇ ಹೋದರೆ ಈ ಸರ್ಕಾರ ಕೂಡಲೇ ರಾಜೀನಾಮೆ ಕೊಡುವುದು ಬಹಳ ಒಳ್ಳೆಯದು ಎಂಬುದಾಗಿ ನಾನು ಈ ಸಂಧರ್ಭದಲ್ಲಿ ಹೇಳಬೇಕಾಗುತ್ತದೆ. ಕಾರಣ, ಸರಿಯಾದ ಮಳೆ ಬೆಳೆ ಗ್ರಾಮಾಂತರ ಪ್ರದೇಶಗಳಲ್ಲಿ ಆಗದೇ ಇರುವುದರಿಂದ ಅನೇಕ ರೈತರು ಕಂಗೆಟ್ಟಿರುವ ಈ ಕಾಲದಲ್ಲಿ ಬಾವಿಗಳನ್ನು ತೆಗೆಯುತ್ತೇವೆಂದು ಬಡ ಜನರು ಮುಂದೆ ಬರುವಾಗ ಅಂತಹವರಿಗೆ ಸರ್ಕಾರ ಕೂಡಲೆ ಸಹಾಯ ಮಾಡಬೇಕು. ಪ್ರತಿಯೊಬ್ಬರಿಗೂ ಕೂಡ ಅಧಿಕಾರದಲ್ಲಿ ಶಾಶ್ವತವಾಗಿ ಮುಂದುವರಿಯಬೇಕೆಂಬ ಆಶೆ ಇದ್ದೇ ಇರುತ್ತದೆ. ಹಾಗೆಯೇ ಇವರಿಗೂ ಇದೆ. ಇವರೂ ಕೂಡ ಶಾಶ್ವತವಾಗಿ ಅವರ ಅಧಿಕಾರದಲ್ಲಿ ಮುಂದುವರಿಯಲಿ. ಆದರೆ ಇವರು ಮಾಡತಕ್ಕ ಕೆಲಸ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡಬೇಕೆಂಬುದೇ ನಮ್ಮ ಆಶೆ. ಆ ಒಂದು ದೃಷ್ಟಿಯಿಂದ ಬಾವಿಗಳನ್ನು ತೋಡತಕ್ಕ ರೈತರಿಗೆ ಸಾಲದ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಈ ದೇಶದಲ್ಲಿರತಕ್ಕ ಲಕ್ಷಾಂತರ ಮಂದಿ ನಾನ್-ಗೆಜೆಟೆಡ್ ನೌಕರರಿಗೆ ಇವರು ಒಂದು ಯುಗಾದಿ ಉಡುಗರೆಯನ್ನು ಕೊಟ್ಟಿದ್ದಾರೆ. ಹಿಂದಿನ ಕೆಲವಾರು ವರ್ಷಗಳಿಂದಲೂ ಧಾರಣೆವಾಸಿಗಳು ಏರುತ್ತಲೇ ಇವೆ. ಈಗ ಇರತಕ್ಕ ಧಾರಣೆವಾಸಿಗಳನ್ನು ಇವರು ಲೆಕ್ಕಹಾಕಿ ಏನಾದರೂ ಈ ಐದು ರೂಪಾಯಿಗಳನ್ನು ಹೆಚ್ಚು ಮಾಡಿದರೆ ಅಥವಾ ಮುಂದಿನ ಸಾಲಿನಲ್ಲಿ 1967 ರ ಚುನಾವಣೆಬರುತ್ತಿದೆ, ಆಗ ನಾನ್ ಗೆಜಿಟೆಡ್ ಅಧಿಕಾರಿಗಳ ಒಂದು ಅಭಿಮಾನ ಬೇಕಾಗಿದೆ ಎನ್ನುವ ಒಂದು ಆಸೆಯನ್ನು ಇಟ್ಟುಕೊಂಡು ಈ ರೀತಿ ಮಾಡಿದ್ದಾರೆಯೇ ಎಂಬುದಾಗಿ ನನಗೆ ಅನುಮಾನ ಬಂದಿದೆ. 210 ರೂಪಾಯಿಗಳವರೆಗೆ ಸಂಬಳ ಪಡೆಯುವವರಿಗೆ ಮಾತ್ರ ಇವರು ಈ ರೀತಿಯಾಗಿ ಒಂದು ದೊಡ್ಡ ಉಡುಗೊರೆಯೆಂದು ಕೇವಲ 5 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವರ ಸೇವೆ ಮಾಡತಕ್ಕವನು ಕೇವಲ 60 ರೂಪಾಯಿಗಳ ಸಂಬಳ ತೆಗೆದುಕೊಂಡು ಇಂತಹ ಕಷ್ಟಕಾಲದಲ್ಲಿ ಯಾವ ರೀತಿ ಜೀವಿಸಬೇಕು, ಅವನ ಕಷ್ಟ ಕಾರ್ಪಣ್ಯವನ್ನು ಇವರು ಯೋಚನೆ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಇದಲ್ಲದೆ ಸಿಟಿಯಲ್ಲಿ ನೀರಿಗಾಗಿ 5 ರೂಪಾಯಿಗಳನ್ನು ಕೊಡುತ್ತಾ ಇದ್ದವನು ಇವತ್ತಿನ ದಿವಸ 25 ರೂಪಾಯಿಗಳು ಕೊಡಬೇಕೆಂದು ಇವರು ಕೇಳತಕ್ಕ ಒಂದು ದುರದೃಷ್ಟಕರವಾದ ಒಂದು ಸನ್ನಿವೇಶ ಬಂದಿದೆ. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಇವರು 5 ರೂಪಾಯಿಗಳನ್ನು ಕೊಟ್ಟರೇ ಎಂದು ನಾನಾದರೂ ಕೂಡ ಅರ್ಥ ಸಚಿವರನ್ನು ಕೇಳಲು ಇಷ್ಟಪಡುತ್ತೇನೆ. ಇವರು ಈ ರೀತಿ ಕೇವಲ ನಾಟಕ ಮಾಡುವಂತಹ ಅವಶ್ಯಕತೆ ಏನು ಇತ್ತು ? ಇವರು ನಿಜವಾಗಿ ಬಡ ನೌಕರರಿಗೆ ಹೆಚ್ಚಿನ ಸಹಾಯ ಮಾಡಬೇಕೆಂಬ ಪೂರ್ಣ ಮನಸ್ಸನ್ನು ಹೊಂದಿ ಸಹಾಯ ಮಾಡುವುದಾಗಿದ್ದರೆ ಅವರೇ ಈಗಿನ ಕಠಿಣ ಪರಿಸ್ಥಿತಿಯನ್ನು ನೋಡಿ ಏರಿಗತಕ್ಕ ಆಹಾರ ಮತ್ತು ಇತರ ಪದಾರ್ಥಗಳ ಬೆಲೆಗಳನ್ನು ಲೆಕ್ಕ ಹಾಕಿ ನೂರಕ್ಕೆ ನೂರು ಕೊಡದೇ ಹೋದರೂ ಶೇಕಡ 10 ರಷ್ಟಾದರೂ ಹೆಚ್ಚು ಮಾಡಿದ್ದರೆ ಹೆಚ್ಚಿನ ಅನುಕೂಲ ಅವರಿಗೆ ಆಗುತ್ತಿತ್ತು ಎಂದು ನಾನು ಮಾನ್ಯ ಅರ್ಥ ಸಚಿವರಲ್ಲಿ ಹೇಳಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಅರ್ಥ ಶಾಖೆಯ ಸಚಿವರು).—ನೌಕರನಿಗೆ 60 ರೂಪಾಯಿಗಳಿರುವಾಗ ಅವನಿಗೆ 5 ರೂಪಾಯಿಗಳನ್ನು ಕೊಟ್ಟರೆ 100ಕ್ಕೆ ಎಷ್ಟಾಗುತ್ತದೆಂಬುದನ್ನು ಲೆಕ್ಕ ಹಾಕಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದನ್ನು ಬೇಕಾದರೆ ಗುಮಾಸ್ತರ ಹತ್ತಿರ ಲೆಕ್ಕ ಹಾಕಿಸಿ.

ಶ್ರೀ ಬಿ. ಭೈರಪ್ಪಾಜಿ.—ಇದು ಬಹಳ ಕಡಿಮೆ ನಮ್ಮ ದೇಶದ ದೌರ್ಭಾಗ್ಯ ಒಂದು ಇದೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವವನ್ನು ಬೀರತಕ್ಕ ಒಬ್ಬ ಮಂತ್ರಿಯಾಗಲೀ ಕೇಂದ್ರದಲ್ಲಿ ಇಲ್ಲದೇ ಇರುವುದರಿಂದ ನಮಗೆ ಬರತಕ್ಕ ಏನೇನು ಅನುಕೂಲತೆಗಳಿವೆಯೋ ಅವೆಲ್ಲವೂ ಮೈಸೂರಿಗೆ ಒದಗುತ್ತಾ ಇಲ್ಲ. ಈ ವಿಚಾರ ಆಡಳಿತವನ್ನು ನಡೆಸತಕ್ಕ ಮಂತ್ರಿಮಂಡಲಕ್ಕೂ, ಆಡಳಿತ ಪಕ್ಷದವರಿಗೂ ಗೊತ್ತಿದೆ. ಇಡೀ ದೇಶಕ್ಕೂ ಗೊತ್ತಿದೆ. ಇದೆಲ್ಲವನ್ನೂ ನಾವು ಯಾವ ರಾಜಕೀಯದಿಂದಲೂ ಮಾತನಾಡುತ್ತಿಲ್ಲ. ದೇಶದ ಹಿತದೃಷ್ಟಿಯೊಂದನ್ನು ಗಮನದಲ್ಲಿಟ್ಟುಕೊಂಡು ಮಾತ್ರ ಮಾತನಾಡುತ್ತಿದ್ದೇನೆ. ಈಗಾಗಲೇ ಸರಿಯಾದಂಥ ಪ್ರಾತಿನಿಧ್ಯ ಮೈಸೂರಿನ ಪರವಾಗಿ ಕೇಂದ್ರದಲ್ಲಿರಬೇಕಾಗಿತ್ತು. ಇವರ ಒಂದು ರಾಜಕೀಯ ಗೊಂದಲದ ದೆಸೆಯಿಂದ ಇದುವರೆಗೆ ಕೇಂದ್ರದಲ್ಲಿ ನಮ್ಮ ದೇಶಕ್ಕೆ ಪ್ರಾತಿನಿಧ್ಯ ಸಿಕ್ಕದೇ ಇರುವುದು ಬಹಳ ದುರದೃಷ್ಟಕರವೆಂದು ನಾನು ಈ ಸಮಯದಲ್ಲಿ ಹೇಳಲಿಷ್ಟಪಡುತ್ತೇನೆ.

ಇನ್ನು ಮೇಜರ್ ಮತ್ತು ಮೀಡಿಯಂ ಇರ್ರಿಗೇಷನ್ ಪ್ರಾಜೆಕ್ಟ್‌ಗಳ ವಿಷಯವನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳಬೇಕೆಂದು ಮಾಡಿದ್ದಾರೆ. ಆದರೆ ಮೈನರ್ ಇರ್ರಿಗೇಷನ್ ಮಾತ್ರ ನಮ್ಮ ಸರ್ಕಾರದವರೇ ವಹಿಸಿಕೊಳ್ಳಬೇಕು. ಈ ದೆಸೆಯಿಂದಾದರೂ ಕೇಂದ್ರ ಸರ್ಕಾರದ ಮೇಲೆ ಇವರ ಪ್ರಭಾವವನ್ನು ಬೀರಿ ಮೇಜರ್ ಮತ್ತು ಮೀಡಿಯಂ ಇರ್ರಿಗೇಷನ್ ಪ್ರಾಜೆಕ್ಟುಗಳೇನಿವೆ ಅವನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುವಂತೆ ಏರ್ಪಾಡು ಮಾಡಬೇಕಾದುದು ಸರ್ಕಾರದ ಕರ್ತವ್ಯ. ಏಕೆಂದರೆ, ಈ ದೇಶದಲ್ಲಿ ಈ ಸರ್ಕಾರ ಆ ಕಾರ್ಯವನ್ನು ಚೆನ್ನಾಗಿ ನಡೆಸಿಲ್ಲ. ಇದು ಈ ಸರ್ಕಾರದ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ ಎಂಬುದಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಗೊರೂರು ಅಣೆಕಟ್ಟನ್ನು ಕೂಡಲೇ ಮಾಡಬೇಕೆಂದು ಅನೇಕ ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ತುರುವೇಕೆರೆ, ತಿಪಟೂರು ಮತ್ತು ಕುಣಿಗಲ್ ತಾಲ್ಲೂಕಿನ ಜನರೂ ಸಹ ಕೇಳಿದ್ದಾರೆ. ಹಿಂದೆ ಆ ಬಗ್ಗೆ ಸರ್ವೆಯಾಗಲಿ, ಆ ಕಾರ್ಯವನ್ನು ಕೈಗೊಳ್ಳುತ್ತೇವೆಂದು ಹೇಳಿದರು. ಇನ್ನು ಈ ಸರ್ಕಾರ ಆ ಕಾರ್ಯವನ್ನು ನಡೆಸಲಿಲ್ಲ. ಆದ್ದರಿಂದ ಜಾಗ್ರತೆಯಾಗಿ ಆ ಬಗ್ಗೆ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯ. ನಾನು ಇನ್ನು ಆಯವ್ಯಯ ಅಂಕಿಅಂಶಗಳ ಬಗ್ಗೆ ವಿಶೇಷವಾಗಿ ಮಾತನಾಡದೆ ಸರ್ಕಾರ ಈಗ ನಮ್ಮ ಮುಂದಿಟ್ಟಿರತಕ್ಕ 156 ಕೋಟಿ ರೂಪಾಯಿಗಳ ಬಡ್ಜೆಟ್ ಏನಿದೆ ಇದು ಬಹಳ ಚಾಕಚಕ್ಯತೆಯಿಂದ ಇಟ್ಟಿರತಕ್ಕ ಒಂದು ಯಕ್ಷಿಣಿ ಎಂದು ಹೇಳಬಹುದು. ಆ ರೀತಿ ಹೇಳುವುದರಲ್ಲಿ ಏನೂ ತಪ್ಪಾಗುವುದಿಲ್ಲ. ಒಟ್ಟಿನಲ್ಲಿ ಈ ಆಯವ್ಯಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

Mr. DEPUTY SPEAKER.—The House will now adjourn to meet on 7th March 1966 at 1 P. M.

The House adjourned at One of the Clock to meet again at One of the Clock on Monday, the 7th March 1966.